ಹರಿಮಂದಿರ ಗ್ರಂಥಮಾಲಾ ಪುಷ್ಪ ೪

ಹರಿದಾಸ ಸಾಹಿತ್ಯ

(ಕೆಲವು ಪದ್ಯ ಗ್ರಂಥಗಳಸಂಗ್ರಹ ೧)

ಗ್ರಂಥಕರ್ತರು :

ಕೀರ್ತನಾಚಾರ್ಯ ಬೇಲೂರು ಕೇಶವದಾಸರು

ಪ್ರಕಾಶಕರು :

ಮಂದಿರ ಪ್ರಕಟನಾಲಯ

ಲಾಸ ಮೊಹಲಾ, ಮೈಸೂರು

೧೯೪೭

ಮುದ್ರಕರು :
ಪಂಚಾಂಗಮಂದಿರಂ ಪ್ರೆಸ್,
ವಿ. ವಿ. ಮೊಹಲ್ಲ, ಮೈಸೂರು.

ಬೆಲೆ: ಎರಡು ರೂಪಾಯಿ] [ಅಂಚೆವೆಚ್ಚ

: ಪ್ರಸ್ತಾವನೆ :

ಹರಿದಾಸ ಸಾಹಿತ್ಯದ ಪದ್ಯಗ್ರಂಥಗಳು ಭಾಗ ೧ ಎಂಬೀವಹಿಯಲ್ಲಿ ಕನಕದಾಸರ ಹರಿಭಕ್ತಿಸಾರ, ಜಗನ್ನಾಥದಾಸರ ಹರಿಕಥಾಮೃತಸಾರ ಸಂಗ್ರಹ, ಮತ್ತೀಚೆಗೆ ರಚಿತವಾಗಿರುವ ರಾಮಕೃಷ್ಣವಚನಸಾರ ಸಂಗ್ರಹ, ಎಂಬ ಗ್ರಂಥತ್ರಯಗಳು ಅಡಕವಾಗಿವೆ.

೧. ಹರಿಭಕ್ತಿಸಾರ

ಕನಕದಾಸರ ಹರಿಭಕ್ತಿಸಾರವು ಬೇರೆಯವರಿಂದ ಅನೇಕ ತರುವಾಯ ಪ್ರಕಟವಾಗಿದ್ದರೂ ಮುದ್ರಣ ಶುದ್ಧವಾಗಿಲ್ಲ. ಶತಕ ಗ್ರಂಥ ವಾಗಿದ್ದರೂ ಪದ್ಯಗಳು ಶತ ಸಂಖ್ಯೆಯಲ್ಲಿಲ್ಲ. ಅದರಲ್ಲಿ ಹೆಚ್ಚು ಸಂಖ್ಯೆಯ ಪದ್ಯಗಳಿರಲು ಕಾರಣವಿಲ್ಲ. ಇದ್ದದ್ದನ್ನು ಇದ್ದಂತೆ ಪ್ರಕಟಿಸುವುದು ಹರಿಮಂದಿರದ ಪರಮ ಧ್ಯೇಯವಾಗಿರುವುದರಿಂದಲೂ, ಇತರ ಶತಕ ಗ್ರಂಥಗಳಿಗಿಂತ ಹರಿಭಕ್ತಿಸಾರವು ಹೆಚ್ಚು ಬಳಕೆಯಲ್ಲಿರುವ ಪದ್ಯ ಗ್ರಂಥ ವಾಗಿರುವುದರಿಂದಲೂ, ಉಪಯೋಗ ದೃಷ್ಟಿಯಿಂದ ಉದ್ದೇಶ ಪೂರ್ವಕ ಅದನ್ನು ಈ ಪ್ರಕಟನೆಯಲ್ಲಿ ಸೇರಿಸಲಾಗಿದೆ.

ಗ್ರಂಥಕರ್ತ ಕನಕ ದಾಸರ ಜೀವನ ಚರಿತ್ರೆಯನ್ನು **ಭಕ್ತವಿಜಯ** ದಲ್ಲಿ ಬರೆದಿರುವ ಕಾರಣ ಅದರ ಪುನರುಲ್ಲೇಖನವನ್ನಿಲ್ಲಿ ಮಾಡುವುದಿಲ್ಲ. ದಾಸರು ಸತ್ಪುರುಷರು, ಪವಾಡಗಳನ್ನು ತೋರಿಸಿದವರು, ಎಂಬ ಮಾತು ಬೇರೆ. ಕಾವ್ಯಪ್ರಪಂಚದಲ್ಲಿ ಅವರ ಸ್ಥಾನವನ್ನು ನಿರ್ದೇಶಿಸುವ ಮಾತು ಬೇರೆ. ಸತ್ಪುರುಷರಾದವರೆಲ್ಲ ಕವಿಗಳಾಗಿರುವುದಿಲ್ಲ. ಕವಿಗಳೆಲ್ಲ ಸತ್ಪುಷರೂ ಆಗಿರುವುದಿಲ್ಲ. ಕನಕದಾಸರು ಕವಿಗಳಾಗಿದ್ದು ಸತ್ಪುರುಷರೂ ಆದರೆಂಬುವದು ಅವರ ದೊಡ್ಡಸ್ತಿಕೆಗೆ ಸೇರಿದ ಮಾತು. ಮಾನವನು ಮಿತಿ ಮಾನವತ್ವದಿಂದ ಮಾನವತ್ವ ಪಡೆದು ಅಲ್ಲಿಂದ ಅತಿ ಮಾನವ

ನೊಗುವನು. ಬೇಟೆಯಾಡುವದು, ಯುದ್ಧಮಾಡುವದು, ಪ್ರಾಪಂಚಿಕ ಭೋಗದಲ್ಲಿ ಆಸಕ್ತನಾಗಿರುವದು ಮಿತಿಮಾನವತ್ವದ ಕುರುಹು. ರಾಜ್ಯವಾಳುವದು, ಜನರಿಗೆ ಜೀವನವನ್ನು ಕಲ್ಪಿಸುವದು, ತಟಾಕ ಆರಾಮ ದೇವಮಂದಿರ ಮೊದಲಾದವುಗಳನ್ನು ನಿರ್ಮಿಸುವದು ಮಾನವತ್ವದ ಕುರುಹು. ಸ್ವಾರ್ಥವನ್ನು ತ್ಯಜಿಸುವದು, ಆತ್ಮೋನ್ನತಿ ಮಾಡಿಕೊಳ್ಳುವದು, ಜ್ಞಾನೋಪದೇಶದಿಂದ ಜನಸಾಮಾನ್ಯರನ್ನುದ್ಧರಿಸುವದು ಅತಿಮಾನವತ್ವದ ಕುರುಹು. ಕನಕದಾಸರ ಜೀವನದಲ್ಲಿ ಈ ಮೂರು ಅಂತಸ್ತುಗಳನ್ನೂ ಕಾಣಬಹುದು. ಅವರ ಕಾವ್ಯಗಳಿಂದ ಕಂಡುಹಿಡಿಯಬಹುದು. ಕಾವ್ಯದೃಷ್ಟಿಯಿಂದ ಮಹಾಕಾವ್ಯದ ತರಗತಿಗೇರಿರುವ ಮೋಹನತರಂಗಿಣಿ ೨೬೦೦ಕ್ಕೆ ಮೇಲ್ಪಟ್ಟ ಸಾಂಗತ್ಯಗಳ ಕಾವ್ಯರಾಜವೆನಿಸಿದೆ. ಲಕ್ಷಣಕಾರರು ಹೇಳಿರುವ ೧೮ ಲಕ್ಷಣಗಳನ್ನೂ ಔಚಿತ್ಯ ಮೀರದಂತೆ ಮೋಹನತರಂಗಿಣಿಯಲ್ಲಿ ದಾಸರು ಲಕ್ಷ್ಯಗೊಳಿಸಿದ್ದಾರೆ. ಮದ್ಯಪಾಯಿಗಳ ವರ್ಣನೆ, ಸುರತವರ್ಣನೆಗಳು, ಲಾಕ್ಷಣಿಕರ ಲಕ್ಷಣಗಳಲ್ಲಿ ಸೇರಿರುವದರಿಂದ ಅಶ್ಲೀಲವೆನ್ನುವಂತಿಲ್ಲ. ಕವಿತರಗತಿಯ ಜನರ ಮಾತಿರಲಿ, ಪವಿತ್ರ ಜೀವಿಗಳಾದ ಶಂಕರಾಚಾರ್ಯರಂಥ ಮಹಾಪುರುಷರ ವಿಜಯ ಚರಿತ್ರೆ ಬರೆದ "ಸರ್ವಜ್ಞಸ್ಸಹಿಮಾಧವಃ" ಬಿರುದಾಂಕಿತ ಮಾಧವಾಚಾರ್ಯರು ಸಂದರ್ಭವನ್ನು ಸೃಷ್ಟಿಸಿಕೊಂಡು ಶಂಕರಸುರತವರ್ಣನೆಯನ್ನು ಮಾಡಿಬಿಟ್ಟಿದ್ದಾರೆ. ಮಧ್ವವಿಜಯ ಕಾವ್ಯ ಬರೆದ ಕವಿಕುಲತಿಲಕ ಪಂಡಿತಾಚಾರ್ಯರಂಥವರು, ಪಾಪ! ಶ್ರೀಮದಾಚಾರ್ಯರನ್ನು ಸುರತಕ್ಕೆ ಬಿಡದೆ ವೈಕುಂಠದಲ್ಲಿ ಮುಕ್ತಜೀವರ ಭೋಗವನ್ನು ಸವಿಕಟ್ಟಾಗಿ ಚಿತ್ರಿಸಿ ತೃಪ್ತರಾಗಿದ್ದಾರೆ. ಪ್ರಾಚೀನರ ಮಾತು ಬೇಡ, ಆಧುನಿಕ ಉದ್ದಾಮ ಸಾಹಿತಿಗಳೇನೆನ್ನುವರು ಎಂದರೆ,—ಪೂತಾತ್ಮ ಬುದ್ಧದೇವನ ತತ್ವಮನನ ಮಾಡುತ್ತಲೇ "ಯಂಡ್ಗುಡುಕುತನ" ಹಾಡನ್ನು ಹಾಡುತ್ತಾರೆ. ನಗು ಬಾರದವರನ್ನು ನಗಿಸುತ್ತಾರೆ. ಕಾಲ್ಕೆರೆದು ಕುಣಿತಕ್ಕೆ ಬಾರೆಂದು ಕರೆಯುತ್ತಾರೆ.

ಹೀಗೇಕೆ ಎಂದರೆ ಅದು ಜೀವನ ಎನ್ನುತ್ತಾರೆ! ಇದು ಪ್ರವಾಹ! ಇದು ಪ್ರಪಂಚ!

ನಳಚರಿತ್ರೆ ಎಂಬ ಕಾವ್ಯವು ಭಾರತದಿಂದ ಆರಿಸಿದ ಕಥಾವಸ್ತು ವಾಗಿದ್ದರೂ ಕನಕದಾಸರು ತಮ್ಮದೇ ಆದ ಪ್ರತ್ಯೇಕ ಸಂವಿಧಾನದಿಂದ ಅದನ್ನು ಸುಂದರವಾಗಿ ಚಿತ್ರಿಸಿರುತ್ತಾರೆ. ಜೀವನದ ಚಿತ್ರ ನಳಚರಿತ್ರೆಯಲ್ಲಿ ಕಣ್ಣಿಗೆ ಕಟ್ಟಿದಂತೆ ಎದುರು ನಿಲ್ಲುತ್ತದೆ. ನಾನೂರ ಎಂಭತ್ತೊಂದು ಪದ್ಯಗಳು ಒಂಭತ್ತು ಸಂಧಿಗಳಲ್ಲಿ ಅಡಕವಾಗಿರುವ ಈ ಚಿಕ್ಕಮಾದರೀ ಕಾವ್ಯವು ಕಾವ್ಯಾಲಾಪದಿಂದಲೇ ಕಾಲವನ್ನು ಸಫಲಮಾಡಿಕೊಳ್ಳಬೇಕೆಂಬುವರಿಗೆ ಪಠಣೀಯ ಗ್ರಂಥವಾಗಿದೆ. ಇವೆರಡರ ಜೊತೆಗೆ ರಾಮಧಾನ್ಯಚರಿತ್ರೆ ನೂರ ಐವತ್ತಾರು ಭಾಮಿನೀಷಟ್ಪದಿಗಳ ಚಿಕ್ಕದೊಂದು ಪ್ರಬಂಧ "ಅವರೇಕಾಯ್ಬೇಕು, ಕಾಲದೊಳವರೇಕಾಯ್ಬೇಕು", "ರಾಗಿ ತಂದಿರಾ ಭಿಕ್ಷಕೆ ರಾಗಿ ತಂದಿರಾ" ಎಂಬಂತಹ ಪುರಂದರ ದಾಸರ ದೇವರನಾಮ ಗಳನ್ನು ನೋಡಿ ಕನಕದಾಸರು ಈ ಪದ್ಯಪ್ರಬಂಧವನ್ನು ರಚಿಸಿದ್ದಾರೆ. ಇತರ ಕವಿಗಳ ವೃಕ್ಷಗಳ ಫಲಗಳಸಂವಾದದಂತೆ ಈ ಸಂವಾದವೂ ಸುಂದರ ವಾಗಿದೆ. ಪೌರಾಣಿಕ ಹಿನ್ನೆಲೆಯನ್ನು ಕಲ್ಪಿಸಿರುವದು "ನಿರಂಕುಶಾಃ ಕವಯಃ" ಎಂಬಂತೆ ದಾಸರ ನಿರಂಕುಶತ್ವವನ್ನು ಸೂಚಿಸುತ್ತದೆ. ಆಧುನಿಕ ಕವಿಗಳು ಸಂಸ್ಕೃತದಲ್ಲಿ ರಚಿಸಿರುವ ಬಂದೂಮಾಹಾತ್ಮ್ಯ (ಬೂಂದು ಬೀಜದ ಕಥೆ) ಕ್ಕೂ ಕನ್ನಡದ ರಾಮಧಾನ್ಯಚರಿತ್ರೆಗೂ ಜಾತಿ ಯಲ್ಲಿ ಹೆಚ್ಚಿನ ಅಂತರವಿರುವುದಿಲ್ಲ. ಕನ್ನಡ ಪ್ರಬಂಧವಾದರೂ ಇಂತಹ ಸಂಸ್ಕೃತ ಪ್ರಬಂಧಗಳಿಗಿಂತ ರಾಮಧಾನ್ಯ ಚರಿತ್ರೆಯು ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ಈ ಮೂರು ಗ್ರಂಥಗಳೂ ಕಾಲಕ್ರಮದಲ್ಲಿ ಪ್ರಕಟವಾಗುತ್ತವೆ.

ಕನಕದಾಸರ ಹರಿಭಕ್ತಿಸಾರವನ್ನು ನೋಡಿದ ಕೂಡಲೇ ಮಧುಸೂ ದನ ಸರಸ್ವತಿಗಳ ಭಕ್ತಿರಸಾಯನದ ನೆನಪಾಗುತ್ತದೆ. ಕನಕದಾಸರು ಮ ಹಾನುಭಾವರು, ಜೀವನ್ಮುಕ್ತರು, ಸಕಲ ಸಾಧನೆಗಳನ್ನೂ ಮಾಡಿ ಸಿದ್ಧಿ

ಪಡೆದವರು, ಎಂಬ ಪೂಜ್ಯಭಾವನೆಯುಂಟಾಗುತ್ತದೆ. ಭಕ್ತಿಸಾರದ ಪದ್ಯಗಳು ಅಪಕ್ವಮಾನವನ ಮನಸ್ಸನ್ನು ಪಕ್ವಗೊಳಿಸುತ್ತವೆ. ಭಕ್ತಿಸಮುದ್ರದಲ್ಲಿ ಮುಳುಗಿಸುತ್ತವೆ. ಬಯಸಿ ಬಯಸಿ ಬಾಯಿಪಾಠ ಮಾಡಬೇಕೆಂದು ಪ್ರೇರಿಸುತ್ತವೆ. ಲಾಕ್ಷಣಿಕರು ಶೃಂಗಾರ ರಸವೇ ರಸವೆಂದರೆ ಕನಕದಾಸರು ಕರುಣಾರಸವೇ ರಸವೆಂದು ಭಕ್ತಿಸಾರದಲ್ಲಿ ತೋರಿಸಿಕೊಟ್ಟಿದ್ದಾರೆ. ತಾನಾಗಿ ಹರಿದುಬಂದ ಶಬ್ದಜಾಲ ಹರಿಭಕ್ತಿಸಾರವಾಗಿದೆ.

೨. ಹರಿಕಥಾಮೃತಸಾರ ಸಂಗ್ರಹ

ಜಗನ್ನಾಥದಾಸರ ಹರಿಕಥಾಮೃತಸಾರವು ಮೂವತ್ತೆರಡು ಸಂಧಿಗಳುಳ್ಳ ಒಂಭೈನೂರ ಎಂಭತ್ತಾರು ಭಾಮಿನೀ ಷಟ್ಪದಿಗಳ ವಿಶಾಲಗ್ರಂಥವಾಗಿದೆ. ಶ್ರೀದವಿಠಲರ ಫಲಸಂಧಿಯನ್ನು ಸೇರಿಸಿದರ ಪದ್ಯಸಂಖ್ಯೆ ಒಂದು ಸಾವಿರದ ಹತ್ತಾಗುತ್ತದೆ. ಇಷ್ಟು ದೊಡ್ಡಗ್ರಂಥಕ್ಕೆ ಸಾರಸಂಗ್ರಹದ ಅವಶ್ಯಕತೆ ಮೊದಲಿನಿಂದ ಇತ್ತೆ. ಆ ಸಂಗ್ರಹವೀಗ ಇನ್ನೂರು ಪದ್ಯಗಳ ಹರಿಕಥಾಮೃತಸಾರಸಂಗ್ರಹವೆನಿಸಿಕೊಂಡಿದೆ. ಸಂಗ್ರಹದಲ್ಲಿ ಆರೋಹಣ ಅವರೋಹಣ ಕ್ರಮದ ದೇವತೆಗಳ, ಮುಕ್ತಿತರರ, ತಾರತಮ್ಯಗಳಿಲ್ಲ ಮನಸ್ಸಿನಲ್ಲಿ ಆರೂಢವಾಗಲಾರದ ಭಗವದ್ರೂಪಗಳ ಸಂಖ್ಯಾಮಾನವಿಲ್ಲ. ಸಂಗ್ರಹವಾಗಿ ಇರುವದೇನಿದ್ದರೂ ಮನಸ್ಸು ಪ್ರಸನ್ನವಾಗಿ ಭಕ್ತಿವಶವಾದಾಗ, ಪಠಣೆ ಮಾಡಲು ಸರಳಸುಂದರಗಳಾದ ಪದ್ಯಾವಳಿ ಮಾತ್ರ.

ಇಂದಿನ ಮಾತಿರಲಿ, ಹಿಂದಿನಕಾಲದ ಮಾತನ್ನು ವಿಚಾರಿಸಿದರೂ ಎಂಥವರು ಎಷ್ಟು ದೊಡ್ಡ ಗ್ರಂಥ ಬರೆದರೂ ಆದರ ಸಾರವನ್ನು ಸಂಗ್ರಹಿಸಿ ಹೇಳಿರೆಂಬ ಬೇಡಿಕೆಯಾಗಲಿ, ಸಂಗ್ರಹಿಸಿ ಬರೆದ ಗ್ರಂಥವನ್ನು ವಿಸ್ತರಿಸಿ ಹೇಳಿರೆಂಬ ಬೇಡಿಕೆಯಾಗಲಿ, ತಪ್ಪಿಲ್ಲ. ಭಗವಾನ್ ಬಾದರಾಯಣರು ಕೋಟಿಕೋಟಿ ಗ್ರಂಥಗಳ ಸಾರವನ್ನು ಶ್ಲೋಕಾರ್ಧದಲ್ಲಿ ಹೇಳಬೇಕಾಯಿತು ಸಂಗ್ರಹಿಸಿ ಬರೆದ ನಿಗಮಾಗಮಸಾರಭೂತ ಬ್ರಹ್ಮಸೂತ್ರಗಳ ಅರ್ಥವನ್ನು ಇತಿಹಾಸವಾಗಿ ವಿಸ್ತರಿಸಬೇಕಾಯಿತು.

ಇತಿ—ಹಾ ಸಃ = ಹೀಗೆ ವಿನೋದಕಥೆ ಎಂಬರ್ಥದಲ್ಲಿ ಇತಿಹಾಸಶಬ್ದ ಪ್ರಯೋಗವಾಗಿದೆ. ಇತಿಹಾಸವೆಂದರೆ ಜಯ, ಜಯವೆಂದರೆ ಭಾರತ, ಭಾರತವೆಂದರೆ ಮಹಾಭಾರತ; ಎಲ್ಲಾ ಒಂದೇ ಗ್ರಂಥದ ಹೆಸರು. ಗ್ರಂಥ ಗ್ರಂಥಿಯಾಗಿ ಕೂಟಶ್ಲೋಕಗಳಾಗಿ ಮೊದಲು ಲಿಖಿತವಾದ ಜಯ ಎಂಟು ಸಾವಿರದ ಎಂಟುನೂರು. ವ್ಯಾಸರ ಆಜ್ಞೆಪಡೆದು ವೈಶಂಪಾಯನರು ಜನಮೇಜಯರಾಯನಿಗೆ ಹೇಳಿದಾಗ ಇಪ್ಪತ್ತುನಾಲ್ಕು ಸಾವಿರ. ಅದೇ ಸೂತಾಚಾರ್ಯರಬಾಯಿಗೆಬಿದ್ದಮೇಲೆಒಂದುಲಕ್ಷ. ಅಂತುಎಲ್ಲವೂವ್ಯಾಸರ ಹೆಸರಿನಗೌರವ ಮುದ್ರೆಯಿಂದ ವ್ಯಾಸಕೃತವೆಂದೇ ಪ್ರಖ್ಯಾತವಾಯಿತು. ಕಥೆಹೆಚ್ಚಿ ಗ್ರಂಥ ಬೆಳೆದಂತೆ ಭಕ್ತಿ-ತತ್ವ ಎರಡೂ ಕಣ್ಮರೆಯಾಯಿತು.

ಹೀಗೆ ಕಲಸು ಮೇಲೋಗರವಾದ ಮಹಾ ಭಾರತವನ್ನು ನೋಡಿ, ನಾರದರಂಥ ದೇವಮುನಿಗಳು ಬ್ರಹ್ಮಸೂತ್ರಾರ್ಥ ಬೋಧಕವಾದ ಪ್ರತ್ಯೇಕ ಗ್ರಂಥವನ್ನು ಬರೆಯಿರೆಂದು ಬಾದರಾಯಣರನ್ನು ಪ್ರೇರಿಸಿದರು. ಆ ಪ್ರೇರಣೆ ಪ್ರಾರ್ಥನೆಗಳ ಫಲ ಹದಿನೆಂಟುಸಾವಿರ ಸಂಖ್ಯೆಯ ಶ್ರೀಮದ್ಭಾಗವತ ವಾಯಿತು.

ಹದಿನೆಂಟು ಎಂಬ ಸಂಖ್ಯೆಯ ಅರ್ಥ ಬಹಳ ಗೂಢವಾಗಿದೆ. "ಅಂಕಾನಾಂ ವಾಮತೋಗತಿಃ" ಎಂಬ ಸಾಂಖ್ಯನಿಯಮದಂತೆ ಜಯ ಶಬ್ದವನ್ನು ಹಿಂದುಮುಂದು ಮಾಡಿದರೆ ಯಜ ಎಂದಾಗುತ್ತದೆ. ಯ, ಅವರ್ಗೀಯ ವ್ಯಂಜನದ ೧ನೇ ಅಕ್ಷರ. ಜ, ವರ್ಗೀಯ ವ್ಯಂಜನದ ೮ನೇ ಅಕ್ಷರ. ಎರಡನ್ನೂ ಜೋಡಿಸಿಟ್ಟರೆ ೧೮. ಈ ಹದಿನೆಂಟರ ಸಂಕೇತ,—ಪಂಚಜ್ಞಾನೇಂದ್ರಿಯಗಳು. ಪಂಚ ಕರ್ಮೇಂದ್ರಿಯಗಳು ರೂಪ, ರಸ, ಗಂಧ, ಸ್ಪರ್ಶ ಶಬ್ದಗಳೆಂಬ ಪಂಚತನ್ಮಾತ್ರೆಗಳು, ಮನಸ್ಸು, ಬುದ್ಧಿ, ನಾನು ಎಂಬ ಅಭಿಮಾನವನ್ನುಂಟುಮಾಡುವ ಅಹಂಕಾರ; ಈ ಹದಿನೆಂಟು ತತ್ವಗಳ ಕಥೆ, ಅರ್ಥಾತ್ ಈ ತತ್ವಗಳಿಂದ ಕೂಡಿರುವ ಮಾನವರ ಕಥೆ. ಇದೇ ಇತಿಹಾಸ.

ಈ ೧೮ರ ಸಂಕೇತವನುಸರಿಸಿ ಭಾರತದ ಪರ್ವಸಂಖ್ಯೆ ೧೮. ಸೈನ್ಯದ ಅಕ್ಷೌಹಿಣಿಗಳಸಂಖ್ಯೆ ೧೮. ಯುದ್ಧ ನಡೆದ ದಿನಗಳ ಸಂಖ್ಯೆ ೧೮.

ಭಾರತಮಂತ್ರಕ್ಕೆ ದೇವತೆಯಂತಿರುವ ದ್ರೌಪದೀ ದೇವಿಯು ಹುಟ್ಟಿದಾಗಿನ ವಯಸ್ಸು ೧೮. ಭಾರತಾಂತರ್ಗತ ಭಗವದ್ಗೀತೆಯ ಅಧ್ಯಾಯಗಳ ಸಂಖ್ಯೆ ೧೮. ಭಾಗವತ ಗ್ರಂಥದ ಶ್ಲೋಕ ಸಂಖ್ಯೆ ಹದಿನೆಂಟರಿಂದ ಗುಣಿತವಾದ ಸಹಸ್ರ.

ವೇದದಲ್ಲಿರುವದೆಲ್ಲ ಭಾರತದಲ್ಲಿದೆ. ಭಾರತದಿಲ್ಲಿರುವದೆಲ್ಲ ವೇದದಲ್ಲಿದೆ. ಭಾರತದಲ್ಲಿಲ್ಲದಿರುವದು ಮತ್ತೆಲ್ಲೂ ಇಲ್ಲ. ಭಾರತ ಐದನೇ ವೇದ. ಸಕಲ ವೇದಾರ್ಥನಿರ್ಣಾಯಕ ಸೂತ್ರ ಬ್ರಹ್ಮಸೂತ್ರ. ಬ್ರಹ್ಮಸೂತ್ರದ ವ್ಯಾಖ್ಯಾನ ಭಾಗವತ. ಇಷ್ಟು ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರತ ಭಾಗವತ ಪುರಾಣಗಳ ಅರ್ಥಮಾಡಬೇಕು.

ವೇದಕಾಲದಿಂದ ಗ್ರಂಥಗಳ ಸಂಗ್ರಹ, ವಿಸ್ತಾರ, ಮೇಲ್ಕಂಡಂತೆ ನಡೆದಿದೆ. ಸಕಲ ವೇದಸಾರ ೧೮ ಸಹಸ್ರ ಭಾಗವತದಲ್ಲಡಗಿದ್ದರೂ, ಲಕ್ಷ ಸಂಖ್ಯೆಯ ಮಹಾಭಾರತದ ಪ್ರಾಬಲ್ಯ ಕಡಮೆಯಾಗಲಿಲ್ಲ. ಮಧ್ವಾಚಾರ್ಯರಂಥ ಮತಸ್ಥಾಪಕರು ಲಕ್ಷ ಸಂಖ್ಯೆಯ ಮಹಾಭಾರತಕ್ಕೆ ಆರು ಸಾವಿರ ಸಂಖ್ಯೆಯ ತಾತ್ಪರ್ಯ ಬರೆದರು. ಭಾರತಕ್ಕೆ ಬರೆದಂತೆ ಭಾಗವತಕ್ಕೂ ಬರೆದರು ವಿವಿಧ ಕವಿಗಳು ಭಾರತ ಭಾಗವತ ಕಥಾ ವಸ್ತುಗಳನ್ನಿಟ್ಟುಕೊಂಡು ಹೊಸ ಭಾರತ ಭಾಗವತಗಳನ್ನು ಬರೆದರು. ಎರಡೇ ಶತಮಾನದ ಹಿಂದಿದ್ದ ವಿಷ್ಣುತೀರ್ಥರೆಂಬ ಯತಿಪುಂಗವರು ೩೬೭ ಶ್ಲೋಕಗಳಲ್ಲಿ ಭಾಗವತಕ್ಕೆ ಸಾರೋದ್ಧಾರಮಾಡಿದರು.

ಪ್ರಕೃತ "ಸುಧಾ ಓದಿ ಪದಾ ಹೇಳು" ಎಂಬ ಗೌರವ ಪಡೆದಿರುವ ಹರಿದಾಸ ಸಾಹಿತ್ಯಕ್ಕೂ ಸಂಗ್ರಹ ಗ್ರಂಥಗಳಾಗಬೇಕಾಗಿದೆ. ಮೊತ್ತವಾದ ಗ್ರಂಥವನ್ನು ಪ್ರಕಟಿಸಿದರೆ ಓದುವಶಾಂತಿ, ಜನಸಮಾಜದಲ್ಲಿಲ್ಲವಾಗಿದೆ ಒಬ್ಬೊಬ್ಬ ಹರಿದಾಸರು ಕಾಲಪ್ರಭಾವವನುಸರಿಸಿ (Time spirit) ಏನೇನು ಸಂದೇಶ ಕೊಟ್ಟರೆಂಬುದನ್ನು ತಿಳಿಸಬೇಕಾಗಿದೆ. ಆದ್ದರಿಂದ ಹರಿಕಥಾಮೃತಸಾರ ಸಂಗ್ರಹವು ಈ ಕಾಲದ ಆವಶ್ಯಕತೆಗೆ ತಕ್ಕುದಾಗಿದೆ;

ಈಗೀಗ ಸಾಹಿತ್ಯಕ್ಷೇತ್ರದಲ್ಲಿ ಮತಸಾಹಿತ್ಯ ಸಾಹಿತ್ಯವೇ ಅಲ್ಲವೆಂಬ ಗೊಂದಲಕ್ಕಾರಂಭವಾಗಿದೆ. ಒಂದಾನೊಂದು ಕಾಲದಲ್ಲಿ ಒಂದೇ ಅರ್ಥದಿಂದ ಉಪಯೋಗದಲ್ಲಿದ್ದ ಮತ ಮತ್ತು ಧರ್ಮಶಬ್ದಗಳು ವ್ಯಾಖ್ಯಾನಕಾರರ ಸಂಖ್ಯೆ ಬೆಳೆದಂತೆ ಭಿನ್ನಭಿನ್ನಮತಗಳಾಗಿ, ಮತವೆಂದರೆ ಸಂಪ್ರದಾಯ, ಸಂಪ್ರದಾಯವೆಂದರೆ ಛಲ, ಛಲವೆಂದರೆ ನಿಂದೆ ಎಂಬಷ್ಟು ಶಿಥಿಲವಾಗಿ ಬಿಟ್ಟಿದೆ. ಹೀಗೆ ಬೇರೆ ಬೇರೆಯಾದ ಮತ ಮತ್ತು ಧರ್ಮ ಶಬ್ದಗಳನ್ನು ಒಂದರಸ್ಥಾನದಲ್ಲಿ ಮತ್ತೊಂದನ್ನು ಉಪಯೋಗಿಸುವದರಿಂದ ಪ್ರಮಾದ ಗಳಾಗುತ್ತಿವೆ. ವ್ಯಾಪಕವಾದ ಧರ್ಮೋಪದೇಶದ ಗುರಿಯಿಟ್ಟುಕೊಂಡು ಧರ್ಮಕ್ಕೆ ಪ್ರಭುವಾದ ಈಶ್ವರನನ್ನು ಇಷ್ಟನಾಮರೂಪಗಳಿಂದ ಕರೆದು, ಅವನಿಗಿಂತ ಅನ್ಯದೈವವಿಲ್ಲವೆಂದು ಉಪದೇಶಮಾಡಿದರೆ ಅದು ಮತ ಸಾಹಿತ್ಯದ ಜಾತಿಗೆ ಸೇರುವದಿಲ್ಲ. ಅನ್ಯಮತವನ್ನು ನಿಂದಿಸಿ ತನ್ನ ಮತ ವನ್ನು ಹೊಗಳಿಕೊಂಡರೆ ಆಗ ಅದು ಮತಸಾಹಿತ್ಯವಾಗುತ್ತದೆ. ಅಂತಹ ಸಾಹಿತ್ಯ ಮತಸಾಹಿತ್ಯ, ಆದ್ದರಿಂದ ಅದು ಸಾಹಿತ್ಯವಲ್ಲ ಎಂದರೆ ಅಪರಾಧ ವಾಗುವದಿಲ್ಲ. ಸರ್ವತಂತ್ರ ಸ್ವತಂತ್ರ, ಸರ್ವಶಬ್ದವಾಚ್ಯ, ಸರ್ವನಿಯಾ ಮಕ ಪರಬ್ರಹ್ಮನನ್ನು ಭಕ್ತನು ತನಗೆ ಪ್ರಿಯವಾದ ನಾಮರೂಪಗಳಿಂದ ಕರೆದರೆ ಅವು ಸಂಕೇತ ಮಾತ್ರವಾಗುವವಲ್ಲದೆ ತತ್ವದೃಷ್ಟಿಯಿಂದ ತಪ್ಪಾಗು ವದಿಲ್ಲ. ಯಾವದಾದರೊಂದು ಧರ್ಮವನ್ನು ಗುರಿಯಾಗಿಟ್ಟುಕೊಂಡಿರದ ಸಾಹಿತ್ಯ ಇದುವರೆಗೆ ಯಾವ ಭಾಷೆಯಲ್ಲೂ ರಚಿತವಾಗಿಲ್ಲ. ಶಬ್ದಾರ್ಥ ಗಳರಿಯದ, ಕಾಲದ ಆವೇಶಕ್ಕೊಳಗಾದ ಬಿಸಿರಕ್ತದ ತರುಣರ ವಾದವನ್ನು ಬದಿಗಿಟ್ಟು, ಕನ್ನಡ ಹರಿದಾಸ ಸಾಹಿತ್ಯದ ಕಡೆಗೆ ತಿರುಗಿದರೆ—ಅದು ಮಾನವನ ಇಹಪರಗಳೆರಡಕ್ಕೂ ಸಾಧಕವಾದ ಮಂತ್ರೋಪದೇಶದಂತಿದೆ. ಶಬ್ದ ಸಂಪತ್ತಿನಿಂದ, ಅರ್ಥ ಸಂಪತ್ತಿನಿಂದ, ನಾದಸಂಪತ್ತಿನಿಂದ ಭಾಷೆಯ ಭಾಷಾತೀತವನ್ನು ತಿಳಿಸುವ ಅಮರ ಸಾಹಿತ್ಯವಾಗಿದೆ.

ಪ್ರಕೃತ ಜಗನ್ನಾಥದಾಸರ ಹರಿಕಥಾಮೃತಸಾರಕ್ಕೆ ಫಲಸ್ತುತಿ ಬರೆದ ಶ್ರೀದವಿಠಲರ ಮಾತಿನಿಂದ ನೋಡಿದರೆ—

ಸಾರವೆಂದರೆ ಹರಿಕಥಾಮೃತ
ಸಾರವೆಂಬುವದೆಮ್ಮ ಗುರುವರ
ಸಾರಿದಲ್ಲದೆ ತಿಳಿಯದೆನುತ ಮಹೇಂದ್ರನಂದನನ
ಸಾರಥಿಯ ಬಲಗೊಂಡು ಸಾರಾ
ಸಾರಗಳ ನಿರ್ಣೈಸಿಪೇಳ್ದನು
ಸಾರ ನಡೆವ ಮಹಾತ್ಮರಿಗೆ ಸಂಸಾರವೆಲ್ಲಿಹದೋ ॥ ೧ ॥

ದಾಸವರ್ಯರ ಮುಖದಿನಿಂದುರ
ಮೇಶನನು ಕೀರ್ತಿಸುವ ಮನದಭಿ
ಲಾಷೆಯಲಿ ವರ್ಣಾಭಿಮಾನಿಗಳೊಲಿದು ಪೇಳಿಸಿದ
ಈ ಸುಲಕ್ಷಣ ಕಾವ್ಯದೊಳು ಯತಿ
ಪ್ರಾಸಗಳಿಗೆ ಪ್ರಯತ್ನವಿಲ್ಲದೆ
ಲೇಸುಲೇಸೆನೆ ಶ್ರಾವ್ಯವಾದುದು ಕುರುಹು ಕವಿಗಳಿಗೆ ॥ ೨ ॥

ಪ್ರಾಕೃತೋಕ್ತಿಗಳೆಂದು ಬರಿದೆ ಮ
ಹಾಕೃತಘ್ನರು ನುಡಿವರಲ್ಲದೆ
ಸ್ವೀಕೃತವ ಮಾಡದಲೆ ಬಿಡುವರೆ ಕವಿಗಳಿದ ಕೇಳಿ
ಶ್ರೀಕೃತೀಪತಿಯಮಲಗುಣಗಳು
ಈ ಕೃತಿಯೊಳುಂಟಾದ ಬಳಿಕಿದು
ಪ್ರಾಕೃತವೆ? ಸಂಸ್ಕೃತದ ಸಡಗರವೇನು ಸುಗುಣರಿಗೆ ॥ ೩ ॥

ಎಂಬಂತಿದೆ.

ಪ್ರಾಣೇಶ ವಿಠಲರು ಒಂದು ದೇವರ ನಾಮದಲ್ಲಿ—

" ಶಿಖದಲ್ಲಿದ್ದ ಪೀಯೂಷ
ಸುಖದಿ ಪಿತೃಗಳುಂಡರು

ಅಕಟಕಾಣಾರೀನರರೆಂದು
ಪ್ರಕಟ ಗ್ರಂಥಶೋಧಿಸಿ
ಯುಕುತಿಲಿ ಹರಿಕಥಾಮೃತ
ಸಕಲರಿಗುಣಿಸೀಸುಖಿಸುವರೇ”

ಎಂದು ಕಥನಮಾಡಿದ್ದಾರೆ. ಇದರ ಭಾವವಾದರೋ—ಸಮುದ್ರ ಮಥನ ಮಾಡಿದಾಗ ದೇವತೆಗಳಿಗೆ ಅಮೃತ ಪ್ರಾಪ್ತಿಯಾಯಿತು. ಪಿತೃದೇವತೆಗಳಿಗೆ ವಂಶಜರು ಸ್ನಾನಾನಂತರ ನೆತ್ತಿಯ ಮೇಲಿಂದ ತೀಡಿ ಶಿಲೆಯ ಮೇಲೆ ಚೆಲ್ಲುವ ಶಿಖೋದಕ ಅಮೃತವಾಯಿತು. ಭೂಲೋಕದ ನರರಿಗೆ ಅಮೃತ ವಿರಲೆಂದು ಸಕಲ ಗ್ರಂಥಗಳನ್ನು ಶೋಧಿಸಿ ಹರಿಕಥಾಮೃತ ಸಾರವನ್ನು ರಚಿಸಿಕೊಟ್ಟರು ಎಂಬಂತಿದೆ.

ಭಕ್ತವಿಜಯದ ಎರಡನೇ ಭಾಗದಲ್ಲಿ ಜಗನ್ನಾಥದಾಸರ ಜೀವನ ಚರಿತ್ರೆಯನ್ನು ಕೊಟ್ಟಿರುವ ಕಾರಣ ಅದನ್ನಿಲ್ಲಿ ಕಥನಮಾಡುವದಿಲ್ಲ. ಆದರೆ ಆ ಕಾಲದಲ್ಲಿ ಜಗನ್ನಾಥದಾಸರಂಥ ಷಡ್ದರ್ಶನ ವಿಶಾರದರು ಮತ್ತೊಬ್ಬರಿರಲಿಲ್ಲ. ಪೇಷ್ವೆಗಳ ದರ್ಬಾರಿನಲ್ಲಿ, ಗದ್ವಾಲ ಮೊದಲಾದ ಸಂಸ್ಥಾನಿಕರ ವಿದ್ವತ್ಸಭೆಗಳಲ್ಲಿ ಜಗನ್ನಾಥದಾಸರ ವಾಕ್ಯಾರ್ಥಕ್ಕೆ ಎದುರಾಳಿಗಳಿರಲಿಲ್ಲ. ಮಠಾಧಿಪತಿಗಳಂತೆ ಮೇನೆ ಪಲ್ಲಕ್ಕಿಗಳಲ್ಲಿ ಕುಳಿತು ಸಂಚರಿಸುವ ರಾಜಮರ್ಯಾದೆ ದಾಸರದಾಗಿತ್ತು. ಹರಿದಾಸರ ಮೇಲೆ ಕನ್ನಡ ಪದಗಳ ಮೇಲೆ ಮೊದಲು ಇವರಿಗಿದ್ದ ಉತ್ಕಟದ್ವೇಷ, ಉತ್ಕಟಪ್ರೇಮದಲ್ಲಿ ಪರ್ಯವಸಾನವಾಯಿತು. ವಿಜಯದಾಸರ ಪರಮಾನುಗ್ರಹದಿಂದ ಸ್ವಯಂ ಹರಿದಾಸರಾದರು. ಶಿಷ್ಟಾಚಾರದ ಆಚಾರಪಟ್ಟ ತನ್ನಿಂದತಾನೇ ಮಾಯವಾಯಿತು. ಕ್ಲಿಷ್ಟಶಬ್ದಗಳ ಶಾಸ್ತ್ರದ ಮಾತು ಸರಳಸುಂದರ ಕನ್ನಡ ಭಾಷೆಗಿಳಿಯಿತು. ತನುಬೆಂದಂತೆ ಮನನೊಂದಂತೆ ಭಾವಮೃದುವಾಯಿತು. ತಮ್ಮಿಂದ ತಾವೇ—

ಶಿಷ್ಟನೆಂದೆನಿಸೆನ್ನ ಭ್ರಷ್ಟನೆಂದೆನಿಸು ಸರ್ವೇಷ್ಟಮೂರುತಿಯೇ ಜನ
ರಿಂದ॥ ಜನರಿಂದ ನುಡಿಸಿದ್ದು ಇಷ್ಟವೇಕಾಣೋ ಎನಗಿನ್ನು ॥ ೧ ॥

ವಿಧಿನಿಷೇಧಗಳೆಲ್ಲ ವಧಮಾಧಿಕಾರಿಗಲ್ಲದೆ ನಿನ್ನ ನಾಮಸರ್ವತ್ರ॥
ಸರ್ವತ್ರಚಿಂತಿಸುವ ಬುಧರಿಗಿನ್ನುಂಟೇ ಜಗದೊಳು ॥ ೨ ॥

ಜಲದೊಳಗೆಮಿಂದು ನಿರ್ಮಲರಾದೆವೆಂದು ತನ್ನೊಳುತಾವೆ
ಹಿಗ್ಗಿ ಸುಖಿಸುವರು ॥ ಸುಖಿಸುವರು ಪರಮಮಂಗಳಮೂರ್ತಿ
ನಿನ್ನ ನೆನೆಯಾದೆ ॥ ೩ ॥

ಜಡಭೂತ ಜಲಜನರ ಮಡಿಮಾಡಲಾಯಿತೇ ಜಡಧಿಮಂದಿರನಾ
ಶುಭನಾಮ ॥ ಶುಭನಾಮ ಮೈಲಿಗೆಯ ಕೆಡಿಸಿ ಮಂಗಳವ
ಕೊಡದೇನೋ ॥ ೪ ॥

ಓಡಿಹೋಗುವ ಮಡಿಯಮಾಡಿ ದಣಿಯಲಿಬೇಡ ನೋಡು
ಸರ್ವತ್ರ ಹರಿರೂಪ॥ ಹರಿರೂಪ ನೋಡಿಕೊಂಡಾಡು ಮನವುಬ್ಬಿ
ಸುಖಿಸುತ್ತ ॥ ೫ ॥

ಎಂಬದಾಗಿ ಹೇಳತೊಡಗಿದರು.

ನಗಾರಿ ನೌಬತ್ತುಗಳ ಗಡಣೆಯಿಂದ, ಭಕ್ಷ್ಯಭೋಜ್ಯ ನೈವೇದ್ಯ ಸಡಗರದಿಂದ ನಡೆಯುತ್ತಿದ್ದ ಪೂಜೆಯು—

ಭೂಮಂಡಲವೆ ಪೀಠ ವ್ಯೋಮಮಂಡಲ ಛತ್ರ ಸೋಮ ಸೂರಿ
ಯರೆ ಮಹದೀಪ॥ ಮಹದೀಪ ನಕ್ಷತ್ರ ಸ್ತೋಮಗಳೆ ನಿನಗೇ
ಉಪದೀಪ ॥ ೬ ॥

ಮಳೆಯೆ ಮಜ್ಜನವು ದಿಗ್ವಲಯಗಳೆ ವಸ್ತ್ರಗಳು ಬೆಳೆದ ಬೆಳಸು
ಗಳೇ ನೈವೇದ್ಯ ॥ ನೈವೇದ್ಯ ಜನರ ಕಂಗಳ ಕಾಂತಿ ನಿನಗೆ
ಆರಾರ್ತಿ ॥ ೭ ॥

ಎಂಬಂತೆ ವಿಶ್ವವ್ಯಾಪಕವಾದ ಮಾನಸಪೂಜೆಗೇರಿತು.

ಮಾತುಮಾತಿಗೆ ಪಾಪ ಪುಣ್ಯ ಸ್ವರ್ಗ ನರಕಗಳಲ್ಲಿ ಪರ್ಯವಸಾನ ಮಾಡುತ್ತ ಅಂತರಾಳದಲ್ಲಿರುವದರ ವಿನಾ ಸಮುಸ್ಥಿತಿಯಲ್ಲಿ ನಿಲ್ಲದ ಜನರ ಮನಸ್ಸಿನ ಪರಿಸ್ಥಿತಿಯನ್ನು ಅರಿತು—

ಪಾಪಪುಣ್ಯಗಳು ಬರಲಾಪವೇ ನಿನ್ನುಳಿದು ಪ್ರಾಪಕನು ನೀನು
ಇರಲಾಗಿ ॥ ಇರಲಾಗಿ ತಿಳಿಯದುದೆ ಪಾಪ— ತಿಳಿಯುವದೇ
ಮಹಪುಣ್ಯ ॥ ೮ ॥

ನರಕ ಸ್ವರ್ಗಗಳೆಂಬವೆರಡು ಇಲ್ಲೇ ಇಹವು ವಿಸ್ಮರಣೆಯೇ
ನರಕಾ ಸ್ಮೃತಿಸ್ವರ್ಗ ॥ ಸ್ಮೃತಿಸ್ವರ್ಗವಿರೆ ಬಾಹ್ಯ ನರಕ
ಭಯಕಂಜೇ ಎಂದೆಂದು ॥ ೯ ॥

ಎಂಬದಾಗಿ ಹೇಳತೊಡಗಿದರು.

ಅಪರಾಧ, ಅಪರಾಧಕ್ಕೆ ಪ್ರಾಯಶ್ಚಿತ್ತವೆಂಬ ಆಚಾರಕಾಂಡಗಳ ಶಿಕ್ಷಾತಂಡವನ್ನು ಓದಿ ಓದಿ ಬಸವಳಿದು—

ಅಪರಾಧಿ ನಾನೆಂಬುದುಪಚಾರ ಮಾತ್ರ ನಿನಗಪರಾಧಿಯೆಂಬೋ
ದಿಳೆಯೋಳು ॥ ಇಳೆಯೊಳೂ ಇನ್ನುಂಟೆ ಅಪರಾಧಿಯೆಂಬೋದ
ಪರಾಧ ॥ ೧೦ ॥

ಎಂಬದಾಗಿ ಒಳನೋಟದ ಮಾತುಗಳಾಡಿದರು.

ಲೋಕದಲ್ಲಿ ಪಾಂಡಿತ್ಯದ ಮಾತುಬೇರೆ. ಅನುಭವದ ಮಾತೇಬೇರೆ.

ಜಗನ್ನಾಥದಾಸರು ಹರಿಕಥಾಮೃತ ಸಾರವನ್ನು ಬರೆಯುವಾಗ ವಯಸ್ಸು ಎಂಭತ್ತಾಗಿತ್ತು. ದೇಹವೆಲ್ಲಾ ಸುಕ್ಕಿಹೋಗಿತ್ತು. ಕಣ್ಣಾಲಿಗಳನ್ನು ಹುಬ್ಬುಗಳು ಮುಚ್ಚಿಕೊಂಡಿದ್ದವು. ಶಿಷ್ಯರು ಹುಬ್ಬುಗಳನ್ನು ಎತ್ತಿಹಿಡಿಯುತ್ತಿದ್ದರು. ದಾಸರು ಕರಕರನೆ ಘಂಟಿಯಿಂದ ತಾಳೆವಾಲೆಯ ಮೇಲೆ ಬರೆಯುತ್ತಿದ್ದರು. ಶಿಷ್ಯರ ಕೈಸೋತಾಗ, ಹುಬ್ಬುಗಳು ಕಣ್ಣುಗಳ

ಮೇಲೆ ಕುಳಿತಾಗ, ದಾಸರು ಕೈ ನಿಲ್ಲಿಸಿ ನಗುತ್ತಿದ್ದರು. ಎಚ್ಚೆತ್ತ ಶಿಷ್ಯರು ನಾಚಿ ಹುಬ್ಬುಗಳನ್ನೆತ್ತುತ್ತಿದ್ದರು. ಆ ವಯಸ್ಸಿನ ಆ ಪರಿಪಕ್ವಮನಸ್ಸಿನ ಉದ್ಗಾರ ಹರಿಕಥಾಮೃತಸಾರ.

ಹರಿಕಥಾಮೃತಸಾರವು ಯೋಗಶಾಸ್ತ್ರ ತತ್ವಶಾಸ್ತ್ರ ನಾಡೀಶಾಸ್ತ್ರ ಭಕ್ತಿಸೂತ್ರಗಳೆಲ್ಲದರ ಸಮ್ಮಿಳಿತ ರಸಾಯನದಂತಿದೆ. ಸಂಗ್ರಹದಲ್ಲಿ ಸೇರದಿರುವ ದೇವತಾ ತಾರತಮ್ಯಗಳು ದೇವರ ದೊಡ್ಡಸ್ತಿಕೆಯನ್ನು ಅರ್ಥ ಮಾಡಿಕೊಳ್ಳುವ ಸಾಧನವಾಗಿದೆ.

ಅಗ್ನಿರ್ದೇವಾನಾಮುವಮಃ ವಿಷ್ಣುಃ ಪರಮಃ।
ತದಂತರೇ ಸರ್ವಾವೈದೇವತಾಃ ॥ ವೇದ ॥

ಎಂಬ ವಾಕ್ಯವನ್ನು ಉದಾಹರಣೆಗೆ ತೆಗೆದುಕೊಂಡರೆ ಅದರ ಅರ್ಥವು ಅಗ್ನಿಯು ಚಿಕ್ಕವನು. ವಿಷ್ಣುವು ಶ್ರೇಷ್ಠನು. ಈ ಮಧ್ಯದಲ್ಲಿ ಎಲ್ಲ ದೇವತೆಗಳೂ ತರತಮಭಾವದಿಂದಿದ್ದಾರೆ ಎಂಬುದು ಮಂತ್ರಾರ್ಥ. ಅಗ್ನಿಗೆ ಸಕಲ ಜಗತ್ತನ್ನೂ ಸುಡುವಸಾಮರ್ಥ್ಯವಿದೆ. ಸಕಲ ಸಸ್ಯಗಳೂ ಅಗ್ನಿಯ ಪ್ರಭಾವದಿಂದ ಬೆಳೆಯುತ್ತವೆ. ಅಗ್ನಿಯಿಲ್ಲದೆ ಜಗತ್ತಿನಲ್ಲಿ ಜೀವವಾಗಲೀ ಜೀವನವಾಗಲೀ ಇರಲು ಸಾಧ್ಯವಿಲ್ಲ. ಇಂತಹ ಅಗ್ನಿಯ ಸಾಮರ್ಥ್ಯವಿಷ್ಟಿರುವಾಗ ಒಬ್ಬರಿಗಿಂತ ಮತ್ತೊಬ್ಬರು ಶತಾಧಿಕ ಸಹಸ್ರಾಧಿಕ ಸಾಮರ್ಥ್ಯವಂತರು ದೇವತೆಗಳೆಂದರೆ, ಆ ಎಲ್ಲ ದೇವತೆಗಳಿಗಿಂತ ಅನಂತ ಗುಣಾಧಿಕನು ವಿಷ್ಣುವೆಂದರೆ ಆ ದೇವರ ದೊಡ್ಡಸ್ತಿಕೆಯ ಅರಿವು ಜನರಿಗಾಗುತ್ತದೆ. ವಿಷುಲ್‌ರು ವ್ಯಾಪ್ತೌ ಎಂಬ ವ್ಯುತ್ಪತ್ತಿಯಿಂದ ವಿಷ್ಣು ಶಬ್ದ ವುಂಟಾಗಿದೆ. ಅಂದರೆ ಸರ್ವವ್ಯಾಪಕವಾದ ಚೈತನ್ಯ ಎಂದರ್ಥ. ಧರ್ಮದ ಅರಿವಿಲ್ಲದ ಜನರು ಶಬ್ದಕ್ಕೆ ವಿಪರೀತ ಅರ್ಥಮಾಡಿ ಮತದ ಬಣ್ಣ ಬಳಿದು ಶಬ್ದಕ್ಕಾಗಿ ವಿವಾದ ಮಾಡಿದರೆ ಮಹಾಪರಾಧವಾಗುತ್ತದೆ.

ಹರಿಕಥಾಮೃತಸಾರದಂಥ ಉದ್ಗ್ರಂಥವನ್ನು ಅರ್ಥಮಾಡಿಕೊಳ್ಳುವ ಸಂಸ್ಕೃತಿಯ ಮಟ್ಟ ಜನತೆಯಲ್ಲಿ ಕಡಿಮೆಯಾಗುತ್ತ ಬಂದಿರುವುದನ್ನು

ನೋಡಿ ಸಾರಸಂಗ್ರಹವನ್ನು ಬರೆಯಬೇಕಾಯಿತಲ್ಲದೆ, ಸಾರಸಂಗ್ರಹದಿಂದ ಗ್ರಂಥ ವಿಷಯಗಳನ್ನೆಲ್ಲಾ ತಿಳಿಸಿದಂತಾಗಿಲ್ಲ.

ನಿಜವಾದ ಹರಿದಾಸ ಸಾಹಿತ್ಯದಲ್ಲಿ ಮತನಿಂದೆಗೆ ಸ್ಥಾನವಿಲ್ಲ. ಪ್ರಕಟವಾಗಿರುವ ಪುಸ್ತಕಗಳಲ್ಲಿ ಅಂತಹ ಹಾಡುಗಳಿವೆಯೆಂದರೆ, ಆ ಹಾಡುಗಳ ಭಾಷೆಯನ್ನೇ ಪರಿಶೀಲಿಸಿರೆನ್ನುವುದಕ್ಕಿಂತ ಬೇರೆ ಉತ್ತರವಿಲ್ಲ. ಒಂದೇಶತಮಾನದ ಹಿಂದಿದ್ದ ತ್ಯಾಗರಾಜರ ಕೃತಿಗಳಲ್ಲಿ ಕೃತಕ ಕೀರ್ತನೆಗಳು ಬೆರೆತಿರುವಾಗ ನಾಲ್ಕು ಶತಮಾನಗಳಹಿಂದಿದ್ದ ಹರಿದಾಸ ಸಾಹಿತ್ಯದಲ್ಲಿ ಕೃತ್ರಿಮ ದೇವರನಾಮುಗಳು ಬೆರೆತಿರುವುದರಲ್ಲಿ ಆಶ್ಚರ್ಯವಿಲ್ಲ.

೩ ಶ್ರಿ ರಾಮಕೃಷ್ಣವಚನಸಾರ

ಶ್ರೀ ರಾಮಕೃಷ್ಣ ವಚನ ಸಾರವು ಇತ್ತೀಚೆಗೆ ರಚಿತವಾದ ದಾಸ ಸಾಹಿತ್ಯದ ಒಂದು ಶತಕ. ಆ ಮಹಾಪುರುಷರ ಉಪದೇಶವು ವಚನದಲ್ಲಿರುವುದಕ್ಕಿಂತ ಪದ್ಯಪ್ರಬಂಧವಾಗಿದ್ದರೆ ಉತ್ತಮವೆಂದು ಆದರ ಕವಿಯು ಮಾಡಿರುವ ಅಲ್ಪಪ್ರಯತ್ನ. ಈ ಶತಕವನ್ನು ಜನತೆಯು ಹೇಗೆ ಬಳಸಿಕೊಳ್ಳುವದೆಂಬುದನ್ನು ಕವಿಯು ನಿರೀಕ್ಷಿಸುತ್ತಿದ್ದಾನೆ.

ಷೇಕ್ಸ್ಪಿಯರನ ಸಾಹಿತ್ಯಕ್ಕೆ ವಿವಿಧ ವ್ಯಾಖ್ಯಾನ ಮಾಡುವ ಸಂಘಗಳಿವೆ. ಸಂಘಗಳಿಗೆ ಹಣಕೊಡುವ ದಾತರಿದ್ದಾರೆ. ಬರೆದ ಪುಸ್ತಕಗಳನ್ನು ಕೊಳ್ಳುವುದಕ್ಕೆ ಕೋಟಿಗಟ್ಟಲೆ ಜನರಿದ್ದಾರೆ. ಶತಾಧಿಕವಾಗಿ ತತ್ವದಿಂದ ಸೊತ್ತದಿಂದ ತುಂಬಿ ತುಳುಕುತ್ತಿರುವ ಕನ್ನಡ ಹರಿದಾಸ ಸಾಹಿತ್ಯಕ್ಕೆ ಸಂಘಗಳಿಲ್ಲ, ದಾತರಿಲ್ಲ, ಶ್ರಮಪಟ್ಟು ಬರೆದ ಪುಸ್ತಕಗಳನ್ನು ಓಮವರು ವಿರಳ. ಮಾಡಿದ ಅಲ್ಪಾರಂಭಕ್ಕೆ ಉಗ್ರಕ್ಕೂ ಬಾಲಗ್ರಹದಕಾಟ.

ಮುದ್ರಣದ ತೊಂದರೆ

ಹರಿದಾಸ ಸಾಹಿತ್ಯ ವಿಮರ್ಶೆಯೆಂಬ ಹರಿಮಂದಿರದ ಮೂರನೇ ಗ್ರಂಥವನ್ನು ಪ್ರಕಟಿಸಿದಾಗಿನಿಂದ, ಇಂದಿನವರೆಗೆ ಮಾಡಿದ ಪ್ರಯತ್ನ

ದಿಂದ ಬಿಳಿ ಕಾಗದ ದೊರೆಯಲಿಲ್ಲ. ವೃತ್ತಪತ್ರಿಕೆಗಳಿಗೆ ಪಠ್ಯಪುಸ್ತಕಗಳಿಗೇ ನಿಗದಿ ಮಾಡಿರುವಾಗ ಖಾಸಗೀ ಸಂಸ್ಥೆಗಳಿಗೆ ಕಾಗದದೊರೆಯುವ ಸಂಭವವಿರಲಿಲ್ಲ. ಕಾಗದ ನಿಯಂತ್ರಣ ಕಾಯಿದೆ ಹುಟ್ಟಿದಾಗ ಹರಿಮಂದಿರಕ್ಕಾಗಿ ಪ್ರಾರ್ಥನೆ ಪತ್ರಿಕೆ ಕಳುಹಿಸಿರಲಿಲ್ಲ. ಕಳುಹಿಸಿದ್ದರೂ ಬಿಳೀ ಕಾಗದ ದೊರೆಯುತ್ತಿರಲಿಲ್ಲ. ಆದರೂ ಈ ಕಾಲದಲ್ಲಿ ಹೆಚ್ಚು ಪುಸ್ತಕಗಳು ಮುದ್ರಣವಾಗಿರುವುದೂ, ಮುದ್ರಣಾಲಯಗಳಿಗೆ ಬಿಡುವಿಲ್ಲದಷ್ಟು ಕೆಲಸವಿರುವುದು ಮಾತ್ರ ಆಶ್ಚರ್ಯದ ಸಂಗತಿ. ಕಳೆದ ಪುಷ್ಯಮಾಸದಲ್ಲಿ ಮುದ್ರಣವಾಗಿ ಪ್ರಕಟವಾಗಬೇಕಾಗಿದ್ದ ಹರಿಮಂದಿರದ ವರದಿ ಮೈಸೂರಿನಂಥಾ ನಗರವನ್ನು ಬಿಟ್ಟು ಬೆಂಗಳೂರಲ್ಲಿ ಕುಳಿತು ನಾಲ್ಕು ತಿಂಗಳನಂತರ ಪ್ರಕಟಿಸಬೇಕಾಗಿ ಬಂದ ಪರಿಶ್ರಮವನ್ನು ಬರೆಯಲು ಸಾಧ್ಯವಿಲ್ಲ. ಮಹಾದ್ವಾರದಲ್ಲಿ ಓಡಾಡುವ ಅಭ್ಯಾಸಮಾಡಿದವರಿಗೆಲ್ಲಾ ಇದೇ ಬಗೆಯ ಶ್ರಮವಾಗುವದೆಂದು ಈಗೀಗ ಅನುಭವಕ್ಕೆ ಬರುತ್ತಿದೆ.

ಹರಿಮಂದಿರಕ್ಕೊಂದು ಸ್ವಂತ ಮುದ್ರಣಾಲಯವಾಗುವತನಕ, ಬೇಡಿದಷ್ಟು ಕಾಗದ ಬಾಗಿಲಿಗೆ ಬಂದು ಬೀಳುವಕಾಲ ಬರುವತನಕ, ಗ್ರಂಥ ಪ್ರಕಟಣೆಯ ಶ್ರಮ ತಪ್ಪಿದ್ದಲ್ಲ.

ನಾವು ಬಯಸುವ ಕಾಲ ಸ್ವತಂತ್ರ ಭಾರತದಲ್ಲಿ ಬರಲೆಂದು ಹಾರೈಸೋಣ!

ಒಂದು ಬಿನ್ನಹ

ಹರಿಮಂದಿರದ ಪ್ರಕಟಣೆಗೆ ಪೋಷಕರೂ ಆಜೀವಸದಸ್ಯರೂ ಆಗಿ ಸ್ವಲ್ಪಮಾತ್ರ ಕಾರ್ಯಕ್ಕೆ ನೆರವಾಗಿರುವ ಮಹನೀಯರು, ಗ್ರಂಥಗಳು ಒಂದರಮೇಲೊಂದು ಬರದಿದ್ದಮಾತ್ರಕ್ಕೆ ಮುಂದೆ ಬರಲಿರುವ ಗ್ರಂಥಗಳ ಕರಡುಗಳ ಪರಿಷ್ಕಾರವೂ ನೆನೆಗುದಿಗೆ ಬಿದ್ದಿದೆಯೆಂದು ಸಂದೇಹಿಸುವ ಕಾರಣವಿಲ್ಲ. ಹರಿಮಂದಿರದ ವರದಿಯು ಸದಸ್ಯರಿಗೆಲ್ಲಾ ಕರಗತವಾಗಿರುವ

ಕಾರಣ ಮತ್ತೆ ಮತ್ತೆ ಏನಾಯಿತು, ಏನಾಗಲಿದೆ, ಎಂಬುದನ್ನು ಒಬ್ಬೊಬ್ಬರಿಗೂ ತಿಳಿಸುತ್ತಿರುವುದು ಸಾಧ್ಯವಿಲ್ಲ. ಇದುವರೆಗೆ ಆದ ತೊಂದರೆಗಳು ಮುಂದೂ ಆದಾವೆಂದು ಭಯ ಪಡುವಕಾರಣವಿಲ್ಲ. ಈ ಗ್ರಂಥ ಕರಗತವಾದಂತೆ ಬಿಡುವಿಲ್ಲದೇ ಕೆಲಸನಡೆಯುತ್ತಿರುವುದೆಂದೂ, ಕಾಗದದ ಮತ್ತು ಮುದ್ರಣಕಾರರ ತೊಂದರೆಯಿಲ್ಲದಿದ್ದರೆ ನಾಲ್ಕು ತಿಂಗಳಿಗೊಮ್ಮೆ ಒಂದು ಪುಸ್ತಕ ಬೆಳಕಿಗೆ ಬರುವದೆಂದೂ, ಮಾತ್ರ ನಂಬಿ ಸಹಕರಿಸುತ್ತಿರಬೇಕೆಂದು ತಲೆಬರಹದಲ್ಲಿರುವ ಒಂದು ಬಿನ್ನಹ.

: ಧರ್ಮ ಮತ್ತು ವಿಜ್ಞಾನ :

ಭಗವಾನ್ ಬಾದರಾಯಣರು ಶ್ರೀಮನ್ಮಹಾಭಾರತದಲ್ಲಿ —

ಧಾರಣಾದ್ಧರ್ಮ ಇತ್ಯಾಹುಃ ಧರ್ಮೋಧಾರಯತೇ ಪ್ರಜಾಃ
ಯತ್ಸ್ಯಾದ್ಧಾರಣ ಸಂಯುಕ್ತಂ ಸಧರ್ಮ ಇತಿ ನಿಶ್ಚಯಃ ||

ತಾ|| ಧಾರಣೆಮಾಡುವದರಿಂದ ಧರ್ಮವೆನ್ನುತ್ತಾರೆ. ಧರ್ಮವು ಪ್ರಜೆಗಳನ್ನು ಧಾರಣೆ ಮಾಡುತ್ತದೆ. ಯಾವುದರಿಂದ **ಸಮಾಜಧಾರಣೆ** ಯಾಗುವುದೋ ಅದೇ ಧರ್ಮ. ಎಂಬದಾಗಿ ಅಪ್ಪಣೆ **ಕೊಡಿಸಿರುತ್ತಾರೆ.**

ಮನುವು

ಧೃತಿಃ ಕ್ಷಮಾದಮೋಽಸ್ತೇಯಂ ಶೌಚಮಿಂದ್ರಿಯ ನಿಗ್ರಹಃ |
ಧೀರ್ವಿದ್ಯಾ ಸತ್ಯಮಕ್ರೋಧಃ ದಶಕಂ ಧರ್ಮ ಲಕ್ಷಣಂ ||

ಎಂಬದಾಗಿ ಧರ್ಮದ ದಶಲಕ್ಷಣಗಳನ್ನು ತಿಳಿಸಿರುತ್ತಾನೆ.

ವೈಶೇಷಿಕಾಚಾರ್ಯನಾದ ಕಾಣಾದಮುನಿಯು

ಯಾವುದರಿಂದ ಅಭ್ಯುದಯ ನಿಶ್ರೇಯಸ್ಸುಗಳಾಗುವುವೋ ಅದನ್ನು ಧರ್ಮವೆಂದು ಕರೆಯುತ್ತಾನೆ.

ಪೂರ್ವ ಮೀಮಾಂಸಕಾರರು

" ಚೋದನಾಲಕ್ಷಣೋಽರ್ಥೋ ಧರ್ಮಃ "

ವೇದದ ಆಜ್ಞೆಯಂತೆ ನಡೆಯುವದು ಧರ್ಮವೆನ್ನುತ್ತಾರೆ.

ಪತಂಜಲಿಯು—

ಧರ್ಮಿಯ ಯೋಗ್ಯತಾಯುಕ್ತ ಶಕ್ತಿಯನ್ನು ಧರ್ಮವೆನ್ನುತ್ತಾನೆ.

ಇನ್ನೂ ಒಳಹೊಕ್ಕು ನೋಡಿದರೆ—

ವೇದ ಪ್ರತಿಷ್ಠಿತಂ ಕರ್ಮ ಧರ್ಮಸ್ತನ್ಮಂಗಳಂ ಪರಂ।
ಪ್ರತಿಷಿದ್ಧಕ್ರಿಯಾ ಸಾಧ್ಯಃ ಸಗುಣೋ ಧರ್ಮ ಉಚ್ಯತೇ ॥

ತಾ॥ ವೇದ ವಿಹಿತ ಪರಮ ಮಂಗಳ ಕರ್ಮವೇ ಧರ್ಮವೆಂದಾಗುತ್ತದೆ. ಅಂತು ತನಗಿಂತ ಪರಮ ಶ್ರೇಷ್ಠವಾದ ಶಕ್ತಿಯೊಂದಿದೆಯೆಂದು ನಂಬಿ ಶ್ರದ್ಧೆಯಿಂದ ವ್ಯವಹರಿಸುವುದೇ ಧರ್ಮವೆಂದು ಗೊತ್ತಾಗುತ್ತದೆ. ಸೃಷ್ಟ್ಯಾದಿಯಿಂದ ಯಾವುದಾದರೊಂದು ಬಗೆಯ ಧರ್ಮದ ನಂಬಿಕೆ ಮಾನವ ಜಾತಿಯಲ್ಲಿರುವುದು ಕಂಡುಬರುತ್ತದೆ. ಧರ್ಮದ ನಂಬಿಕೆಯಿಲ್ಲದೆ ಯಾವ ದೇಶ ಕಾಲಗಳಲ್ಲೂ ಮಾನವ ಸಮಾಜ ಬದುಕಿಲ್ಲ.

ಧರ್ಮದ ಶಬ್ದವನ್ನು ತಮ್ಮ ತಮ್ಮ ರೀತಿಯಿಂದ ಅರ್ಥ ಮಾಡಿಕೊಂಡ ಕಾರಣ ಭಿನ್ನ ಭಿನ್ನ ಮತಗಳಾಗಿವೆ. ಅದರಿಂದ ವೈಷಮ್ಯಗಳು ಉಂಟಾಗಿವೆ. ಆವೇಶಕ್ಕೊಳಗಾದ ಜನರಿಂದ ಜಗತ್ತು ರಣರಂಗವಾಗಿದೆ. ಅದನ್ನು ನೋಡಿ ಧರ್ಮದಿಂದ ಹೀಗಾಯಿತೆನ್ನುವವರಿದ್ದಾರೆ. ಆದ್ದರಿಂದ ಧರ್ಮವನ್ನೇ ನಿರ್ಮೂಲ ಮಾಡಬೇಕೆನ್ನುತ್ತಾರೆ.

ಬೌದ್ಧ ಜೈನ ಮತೀಯರು ದೇವರನ್ನು ನಂಬುತ್ತಿಲ್ಲ. ಆದರೂ ಅವರು ತಮ್ಮ ಜೀವನವನ್ನು ಧರ್ಮಕ್ಕಧೀನಗೊಳಿಸಿರುತ್ತಾರೆ. ಅದೃಷ್ಟ ಶಕ್ತಿಯೊಂದರಲ್ಲಿ ವಿಶ್ವಾಸ ಇಟ್ಟಿರುತ್ತಾರೆ. ವಿಹಾರ ಬಸ್ತಿಗಳನ್ನು ನಿರ್ಮಿಸಿ ಆರಾಧಿಸುತ್ತಿದ್ದಾರೆ. ಪೃಥ್ವಿಯ ಆಕರ್ಷಣ ಶಕ್ತಿಯನ್ನು ನಂಬದವನ ಮೇಲೂ ಅದರ ಪರಿಣಾಮವಾಗುತ್ತದೆ. ಅಂತೆಯೇ ಧರ್ಮವನ್ನು ದ್ವೇಷಿಸುವವರ ಮೇಲೂ ಧರ್ಮದ ಪರಿಣಾಮವಾಗುತ್ತದೆ. ನೀರನ್ನು ಬಿಟ್ಟು ಮೀನು ಬದುಕಿರಲಾರದು. ಧರ್ಮವನ್ನು ಬಿಟ್ಟು ಮಾನವನೂ ಬದುಕಿರಲಾರನು. ಭೌತಿಕ ದೇಹಕ್ಕೆ ಆಹಾರ ಬೇಕು. ಮಾನವನ ಆತ್ಮಕ್ಕೆ ಅದರಂತೆ ಧರ್ಮ ಬೇಕೇ ಬೇಕು.

ಪರಿಸ್ಥಿತಿ ಹೀಗಿದ್ದರೂ ಆಧುನಿಕ ತರುಣರು ವಿಜ್ಞಾನದ ಬೆಳವಣಿಗೆಗೆ ಬೆರಗಾಗಿ, ಜೀವಶಾಸ್ತ್ರದ ವಿಕಾಸವನ್ನು ಬಲವಂತವಾಗಿ ಓದಿ, ಆ ಶಾಸ್ತ್ರಪ್ರವರ್ತಕರುಗಳಿಗಿಂತ ಹೆಚ್ಚಾಗಿ ನಾಸ್ತಿಕವಾದಮಾಡುತ್ತಿದ್ದಾರೆ. ಯಾವ ಪ್ರಯೋಗ ಪರೀಕ್ಷಣಗಳನ್ನು ಮಾಡದಿದ್ದರೂ ನಾವು ವೈಜ್ಞಾನಿಕರು, ನಮಗೆ ಧರ್ಮದ ಗೊಡವೆ ಬೇಡ, ದೇವರಲ್ಲಿ ವಿಶ್ವಾಸವಿಟ್ಟು ಜನಾಂಗ ದುರ್ಬಲವಾಗಿದೆ. ಅಲ್ಪ ಸಂತುಷ್ಟಿ ದೈನ್ಯಕ್ಕೆ, ದಾರಿದ್ರ್ಯಕ್ಕೆ ಕಾರಣವಾಗಿದೆ. ಧರ್ಮದ ನೀತಿಗಳು ಭೀತಿಗೆ ಕಾರಣವಾಗಿವೆ, ನಿರ್ಭೀತರಾಗಿ ಸ್ವಾತಂತ್ರ್ಯ ಸುಖಾನುಭವ ಮಾಡುವುದೇ ಧರ್ಮ. ಇದಕ್ಕೆ ವಿರುದ್ಧವಾದುದೆಲ್ಲಾ ಅಧರ್ಮ, ಎನ್ನುತ್ತಿದ್ದಾರೆ.

ಯುರೋಪಿನ ಮಧ್ಯಯುಗದಲ್ಲಿ ಧರ್ಮದ ಅಜ್ಞಾನದಿಂದ ಏನು ಗೊಂದಲವಾಯಿತೋ, ಅದು ಭರತಖಂಡದಲ್ಲಿ ಈ ಇಪ್ಪತ್ತನೇ ಶತಮಾನದಲ್ಲಿ ವಿಜ್ಞಾನದ ಅಜ್ಞಾನದಿಂದ ಆರಂಭವಾಗಿದೆ.

ಎಲ್ಲ ದೇಶಗಳ ಎಲ್ಲ ಮತಗಳೂ ಸೃಷ್ಟಿಯನ್ನು ಪರೀಕ್ಷಿಸಲು ಹೊರಟಿವೆ. ಪರೀಕ್ಷಕರ ಜ್ಞಾನದ ಮಟ್ಟವನುಸರಿಸಿ ಸತ್ಯ ಶೋಧನೆಯಾಗಿದೆ. ದೇವರ—ಧರ್ಮದ—ಹೆಸರಿನಲ್ಲಿ ನಿರಕ್ಷರ ಕುಕ್ಷಿಗಳೂ ಮತ ಪ್ರವರ್ತಕರಾಗಿದ್ದಾರೆ. ತಮ್ಮ ವಾಣಿ ದೇವವಾಣಿಯೆಂದು ಅಜ್ಞಜನರನ್ನು ಮುಗ್ಧಗೊಳಿಸಿದ್ದಾರೆ. ನಂಬದ ಜನರನ್ನು ಕೊಲೆ ಮಾಡಿಸಿದ್ದಾರೆ. ತಮ್ಮ ಅನೀತಿಯನ್ನು ಜನರಿಗೆ ನೀತಿಯೆಂದು ಬೋಧಿಸಿ ಜನರನ್ನು ಮೋಸಗೊಳಿಸಿದ್ದಾರೆ. ಪವಾಡದ ಕತೆಗಳನ್ನು ಕಟ್ಟಿ ವಿಚಾರವಂತರ ಬಾಯಿಗೆ ಬೀಗ ಹಾಕಿದ್ದಾರೆ. ಇಂತಹ ಮತಗಳು ವಿಜ್ಞಾನದ ಕಡೆತಕ್ಕೆ ಸಿಕ್ಕಿ ಉಳಿಯುವಂತಿಲ್ಲ.

ಭಾರತೀಯ ತತ್ವಶಾಸ್ತ್ರ ಹಾಗಿಲ್ಲ.

ಈಗ ವಿಜ್ಞಾನವೇನೆನ್ನುವದೆಂಬುದನ್ನು ಪರಿಶೀಲಿಸೋಣ.

ಆಧುನಿಕ ವಿಜ್ಞಾನ (Modern Science)

ಸೃಷ್ಟಿಯ ಭೌತಿಕವಸ್ತು ಪರಿಶೀಲನೆಯು ಬಹು ದೊಡ್ಡ ಅಂಗ

ವಾಗಿದೆ. ಈ ಶಾಸ್ತ್ರವಿನ್ನೂ ಬಾಲ್ಯದೆಸೆಯಲ್ಲಿದೆಯೆಂದು ಇಂದು ಹೇಳುತ್ತಿರುವಂತೆಯೇ ಎಂದೆಂದಿಗೂ ಇರುತ್ತದೆಂದು ಹೇಳುವದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಜಗತ್ತಿನ ಪ್ರತಿ ಪದಾರ್ಥವೂ ತತ್ವಗಳಿಂದಾಗಿದೆ. ವಿಶ್ಲೇಷಣದಿಂದ ಬೇರ್ಪಡಿಸಲಾಗದ ವಸ್ತುವೇ ಆ ತತ್ವ. ಆ ತತ್ವಗಳ ಸಂಖ್ಯೆ ಒಂದು ಕಾಲದಲ್ಲಿ ೯೦ ಎಂದು ನಿರ್ಣಿತವಾಗಿದ್ದುದು ಈಗ ಬದಲಾಗಿದೆ. ಆ ತತ್ವವನ್ನು ವಸ್ತುವೇ ಅಲ್ಲವೆಂದೂ ಅದೊಂದು ಶಕ್ತಿಯ ಕೇಂದ್ರವೆಂದೂ ಹೇಳುವ ವೈಜ್ಞಾನಿಕರಿದ್ದಾರೆ. ವೈಜ್ಞಾನಿಕರಲ್ಲೂ ಒಮ್ಮತವಿಲ್ಲ. ಸಂಶೋಧಕರು ಮಾಡುವ ಬಹು ಮುಖ್ಯ ಶೋಧನೆಗಳಿಗೆಲ್ಲಾ 'ವಿಜ್ಞಾನ' ವೆಂಬ ಹೆಸರು ಬರುತ್ತಿದೆ. ಪ್ರಕೃತ ಜೀವ ವಿಜ್ಞಾನವನ್ನು ವಿಚಾರಿಸಲು ಹೊರಟರೆ ಅದು ಇಟ್ಟ ಮೊದಲ ಹೆಜ್ಜೆಯಲ್ಲೇ ಮುಗ್ಗರಿಸಿದೆ. ಬರೀ ಒಣ ಊಹೆಯ ಮೇಲೆ ಜೀವನವನ್ನು ನಿರ್ಮಿಸಿದೆ. ಮೀನಿನಿಂದ ಮನುಷ್ಯನತನಕ ಪರಿವರ್ತನೆಯ ಚಿತ್ರವನ್ನು ತೋರಿಸಿದೆ. ಕೋತಿಯ ಮುಂದಣ ಸರಪಳಿ ಕಳೆದು ಹೋಗಿದೆಯೆನ್ನುತ್ತಿದೆ. ಪಾಶ್ಚಾತ್ಯ ಪಂಡಿತರೇ ತಾವು ಕೋತಿಯ ಸಂತಾನದವರೆಂದು ಒಪ್ಪುತ್ತಿಲ್ಲ. ಅಬರ್ಡೀನ್ ವಿಶ್ವವಿದ್ಯಾಲಯದ ಪ್ರೊ. ಜೆ. ಎ. ಟಾಮ್ಸನ್ನನು—"The mystery of life remains as impenetrable as ever"ಎನ್ನುತ್ತಾನೆ. ಎಡಿಂಬರೋ ವಿಶ್ವವಿದ್ಯಾಲಯದ ಪೆಟ್ರಿಕ್ ಗಿಡ್ಸನ್ನನು—"We do not know whence he emerged nor do we know how man arose, for it must be admitted that the factors of nature of maybe's which has no permanent position in Science". (Ideals of Science and faith) ಎನ್ನುತ್ತಾನೆ.

ತಾ|| ಜೀವನ ರಹಸ್ಯ ಮೊದಲಿನಂತೆ ಈಗಲೂ ಗೂಢವಾಗಿದೆ. ಮನುಷ್ಯನು ಎಲ್ಲಿಂದ ಹೇಗೆ ಬಂದನು ಎಂಬುವದು ನಮಗೆ ತಿಳಿಯದು. ಮಾನವನ ವಿಕಾಸಕ್ಕೆ ಹಾಗಿರಬಹುದು, ಹೀಗಿರಬಹುದು, ಎಂಬ ಊಹಾತ್ಮಕ ಪ್ರಮಾಣಕ್ಕೆ ವಿಜ್ಞಾನದಲ್ಲಿ ಸ್ಥಾಯಿಯಾದ ಸ್ಥಾನವಿರುವದಿಲ್ಲ.

ಸರ್ ಜೆ. ಡಬ್ಲ್ಯೂ. ಡಾಸನ್ನನು—

"No remains of intermediate forms are yet known to Science. The earliest known remains of man are still human, and tell us nothing as to the previous stages of development.

ತಾ|| "ಕೋತಿ ಮತ್ತು ಮನುಷ್ಯನ ನಡುವಿನ ಆಕೃತಿಯು ವಿಜ್ಞಾನಕ್ಕೆ ಸಿಕ್ಕಿಲ್ಲ. ಮನುಷ್ಯನ ಅತ್ಯಂತ ಪುರಾತನ ಮೂಳೆಗಳು ಈಗಿನ ಮನುಷ್ಯನ ಮೂಳೆಗಳಂತೆಯೇ ಇವೆ. ಮನುಷ್ಯನಿಗಿಂತ ಮೊದಲು ಇದ್ದು ವಿಕಾಸಗೊಂಡು ಮಾನವನಾದ ಚಿಹ್ನೆ ಲೇಶವಾದರೂ ಕಂಡುಬರುವುದಿಲ್ಲ" ಎಂದಿದ್ದಾನೆ.

ಪ್ರೊ. ಓವನ್ನನು—

" Man is the sole species of the genus and the sole representative of his species".

ತಾ|| "ಮನುಷ್ಯನು ತನ್ನದೇ ಆದ ಒಂದು ವಿಶಿಷ್ಟ ಜಾತಿಗೆ ಸೇರಿದ್ದಾನೆ ಮತ್ತು ಆ ಜಾತಿಯ ಪ್ರತಿನಿಧಿಯಾಗಿದ್ದಾನೆ" ಎಂದಿರುತ್ತಾನೆ.

ಸಿಡ್ನಿ ಕೌಲೆಟ್ ಎಂಬುವನು ತನ್ನ Scriptures of truth ಎಂಬ ಗ್ರಂಥದಲ್ಲಿ— Science is equally explicite in its testimony that instead of man having slowly improved from the lower to the higher, the tendency is exactly in the opposite direction".

ತಾ|| "ಮನುಷ್ಯನು ಉನ್ನತಿಗೆ ಬದಲಾಗಿ ಅವನತಿಯದಾರಿ ಹಿಡಿದಿದ್ದಾನೆಂದು ವಿಜ್ಞಾನದಿಂದ ಸಿದ್ಧವಾಗಿದೆ" ಎಂದು ಹೇಳುತ್ತಾನೆ.

ಹೊರೇಷಿಯೋಹೇಲ್ ಎಂಬ ವಿದ್ವಾಂಸನು ಕೆನಡಾ ದೇಶದ ರಾಯಲ್ ಸೊಸೈಟಿಯಲ್ಲಿ ವ್ಯವಹರಿಸುತ್ತ ಒಂದು ಪ್ರಸಿದ್ಧ ಲೇಖನದಲ್ಲಿ

'That premitive man in his earliest state must have been endowed with as high intellectual powers as any of his descendents".

ಮೊದಲಿನ ಮನುಷ್ಯನು ತನ್ನ ಪುರಾತನ ಸ್ಥಿತಿಯಲ್ಲೇ ಈಗಿನ ಮನುಷ್ಯನಂತೆ ದೊಡ್ಡ ಬುದ್ಧಿಶಕ್ತಿಯುಳ್ಳವನಾಗಿದ್ದನು" ಎಂತಲೂ

ಸರ್. ಜೆ. ಡಬ್ಲ್ಯು. ಡಾಸನ್ನನು—

The earliest remains of man show "That man's earliest state was his best".

ಮನುಷ್ಯನ ಅತ್ಯಂತ ಪುರಾತನ ಅವಶೇಷಗಳು ಅವನ ಹಿಂದಿನ ಸ್ಥಿತಿಯೇ ಅತ್ಯುತ್ತಮವಾಗಿತ್ತೆಂದು ತೋರಿಸುತ್ತವೆ ಯೆಂದೂ ಹೇಳಿದ್ದಾರೆ

ವಿಕಾಸವಾದದ ಅಗ್ರಗಣ್ಯನಾದ ಚಾರ್ಲಸ್ ಡಾರ್ವಿನ್ನನ ಮತ ಖಂಡನೆ ಹೀಗೆ ಉದ್ದಕ್ಕೂ ನಡೆದು ಬಂದಿದೆ. ಡಾರ್ವಿನ್ನನ ಮಿತ್ರ ವ್ಯಾಲೇಸನು ಡಾರ್ವಿನ್ನನ ಅನೇಕ ಅಭಿಪ್ರಾಯಗಳನ್ನು ಒಪ್ಪಿಲ್ಲ. ಡಾರ್ವಿನ್ನನ ಮಗ ಜಾರ್ಜ ಡಾರ್ವಿನ್ನನು ದಕ್ಷಿಣ ಆಫ್ರಿಕದ ಬ್ರಿಟಿಷ್ ಸಂಘದಲ್ಲಿ ೧೯೦೫ ರಷ್ಟು ಹಿಂದಿನ ಕಾಲದಲ್ಲೇ ಅಂದರೆ ನಲವತ್ತು ವರ್ಷಗಳ ಹಿಂದೆ "ಜೀವನದ ರಹಸ್ಯ ಇನ್ನೂ ಗೂಢವಾಗಿದೆಯೆಂದು ಪ್ರತಿಪಾದಿಸಿದ್ದಾನೆ. ಆದಿಜೀವವೆಂದು ಕರೆದಿರುವ ಅಮಿಾಬಾದಿಂದ ಮನುಷ್ಯನು ಮಂಗನ ಮೊಮ್ಮಗನು ಎನ್ನುವತನಕ ಡಾರ್ವಿನ್ನನ ವಾದಶೋಧಗಳು ಸಂಶಯಾಸ್ಪದ ವಾಗಿವೆ.

ಆ ಕಾಲದಲ್ಲಿ ವೈಜ್ಞಾನಿಕರೊಬ್ಬೊಬ್ಬರ ವಾದವಿವಾದಗಳನ್ನು ನೋಡಿ ೧೯೦೫ರ ಜೂನ್ ತಿಂಗಳ ೯ನೇ ತಾರೀಖಿನ ಟೈಮ್ಸ್ ಪತ್ರಿಕೆಯಲ್ಲಿ—

"Never was seen such a melee. The humour of it is that they all claim to represent Science for the plain truth is that though some agree in this and that, there is not a single

point in which all agree. Battling for evolution they have torn it to pieces. Nothing is left nothing at all, on their showing save a few fragments strewn about the arena" ಎಂಬದಾಗಿ ಬರೆದಿರುತ್ತಾನೆ.

ಈ ಕಾಲದ ಮಹಾ ಬುದ್ಧಿವಂತರೆಂದು ಪ್ರಸಿದ್ಧರಾದ ಹೆಚ್. ಜಿ. ವೆಲ್ಸ್, ಜಾರ್ಜಬರ್ನಾರ್ಡ್ಷಹಾರವರು ಸಹ ಡಾರ್ವಿನ್ನನ ವಿಕಾಸವಾದವನ್ನು ಸಮಗ್ರವಾಗಿ ಒಪ್ಪಿಲ್ಲ. "ಅವಿಗಾಬಾ" ಎಂಬ ಆದಿಜೀವದ ಹುಟ್ಟು, ಅದೊಂದೇ ಪರಿವರ್ತನೆಯಿಂದ ಇಷ್ಟು ದೊಡ್ಡ ಪ್ರಪಂಚವಾಗಿದೆಯೆಂಬುದರ ಗುಟ್ಟು, ಒಂದೇಸಾರಿ ಜೀವೋತ್ಪತ್ತಿಯುಹದ ಹುಟ್ಟಿತಲ್ಲದೆ ಮತ್ತೆ ಹುಟ್ಟಿಲ್ಲ ವೆಂದು ಹಿಡಿದಿರುವ ಪಟ್ಟು, ಕೋತಿಯು ವೊಮ್ಮಗನು ಮನುಷ್ಯನಲ್ಲ ವೆಂಬುವದು ರಟ್ಟಾದಂತೆ ರಟ್ಟಾದರೆ ಡಾರ್ವಿನ್ನನ ವಿಕಾಸವಾದವಷ್ಟೂ ಮುಳುಗಿದಂತಾಗುತ್ತದೆ.

ವಿಜ್ಞಾನವು ಲಘುವಾಗಿ ಎಣಿಸುವ ಶಾಸ್ತ್ರವಲ್ಲ. ಊಹೆಯು (inference) ಅವಶ್ಯಕತೆಯಿದ್ದರೂ ಅಳತೆಮೀರಿ ಊಹೆಗಾರಂಭಿಸಿದರೆ ಅದು ಕಾದಂಬರಿ ಮಾತ್ರವಾಗುತ್ತದಲ್ಲದೆ ವಿಜ್ಞಾನವೆನಿಸುವದಿಲ್ಲ.

ವೈಜ್ಞಾನಿಕರು ಜಗತ್ಸೃಷ್ಟಿಯೆನ್ನು ಊಹಿಸಿರುವ ಕ್ರಮ ಹೀಗಿದೆ— ಸೃಷ್ಟಿಗೆ ಮೊದಲು ಒಂದು ಬಗೆಯ ಸೂಕ್ಷ್ಮದ್ರವವು ಆಕಾಶದಲ್ಲಿ ವ್ಯಾಪಿಸಿತ್ತು. ಸೂರ್ಯ, ಚಂದ್ರ, ಭೂಮಿ, ನಕ್ಷತ್ರ ಒಂದೂ ಇರಲಿಲ್ಲ. ಹಾಗೆ ನಿಬಿಡವಾಗಿದ್ದ ದ್ರವವು ವಿಶೇಷ ಕೇಂದ್ರಗಳಲ್ಲಿ ಘನೀಭೂತ ವಾಯಿತು. ಅವುಗಳು ಕ್ರಮೇಣ ಗೋಳಗಳಾದವು. ಅವುಗಳಲ್ಲಿ ಚಲನೆ ಹುಟ್ಟಿತು. ಆ ಗೋಳಗಳಿಂದ ಸಿಡಿದ ತುಂಡುಗಳು ಉಪಗ್ರಹಗಳಾದವು. ಇವಕ್ಕೆಲ್ಲ "ಸೂರ್ಯ" ಕೇಂದ್ರಗೋಳವಾಯಿತು. ಸೂರ್ಯನಿಂದ ಸಿಡಿದ ತುಂಡು ಭೂಮಿಯಾಯಿತು. ಭೂಮಿಯಿಂದ ಸಿಡಿದ ತುಂಡು ಚಂದ್ರನಾಯಿತು. ತನ್ನ ಅಕ್ಷದ ಮೇಲೆ ತಾನು ಸುತ್ತುವದು, ಉಪಗ್ರಹಗಳ ಸುತ್ತ ಸುತ್ತುವದು, ಅನಂತರ ಕೇಂದ್ರಗ್ರಹದ ಸುತ್ತ ಸುತ್ತುವದು;

ಇವೆಲ್ಲಾ ಉಂಟಾದವು. ಪ್ರಾರಂಭ ದೆಸೆಯಲ್ಲಿ ಭೂಮಿ ಉರಿಯುವ ಗೋಳವಾಗಿತ್ತು. ಮೇಘಮಂಡಲದಿಂದ ಸುರಿದ ಮಳೆ ಭೂಮಿಯನ್ನು ಮುಟ್ಟುವದರಲ್ಲಿ ಆವಿಯಾಗಿ ಮತ್ತೆ ಮೇಘಮಂಡಲವನ್ನು ಸೇರುತ್ತಿತ್ತು. ಭೂಮಿ ಆರಿದ ಮೇಲೆ ತಗ್ಗು ನೆಲದಲ್ಲಿ ಬಿದ್ದ ನೀರು ಸಮುದ್ರವಾಯಿತು. ಭೂಮಿಯ ಉಬ್ಬುಗಳು ಬೆಟ್ಟಗಳಾದವು. ಎಷ್ಟೋ ಕಾಲದ ಮೇಲೆ ಆಳವಿಲ್ಲದ ಸಮುದ್ರದಲ್ಲಿ ಒಂದು ಬಗೆಯ ಅಂಟು ಹುಟ್ಟಿತು. ಆ ಅಂಟಿನಿಂದ ಜೀವೋತ್ಪತ್ತಿಯಾಯಿತು. ಆ ಒಂದೇ ಜೀವ (ಅಮಿಬಾ) ಪರಿವರ್ತನೆಯಾಗಿ ಆಗಿ ಮನುಷ್ಯನಾದನು. ನಲವತ್ತು ಸಾವಿರ ವರ್ಷಗಳ ಹಿಂದೆ ಮಾನವಪ್ರಾಣಿಯಿರಲಿಲ್ಲ. ಇತ್ಯಾದಿ.

ಇಷ್ಟು ಸಂಗತಿಗಳ ಊಹೆಯೂ ಅಕ್ಷರಶಃ ಸತ್ಯವೆಂದು ಒಪ್ಪಿಕೊಂಡರೂ—ಮೊಟ್ಟಮೊದಲು ಸರ್ವತ್ರವ್ಯಾಪಕವಾಗಿದ್ದ ರಸವಾದರೂ ಎಲ್ಲಿಂದ ಬಂತು? ಏಕರಸವಾಗಿದ್ದುದು ಉಬ್ಬುತಗ್ಗುಗಳಿಲ್ಲದ ಆಕಾಶದಲ್ಲಿ ಹೇಗೆ ಕೇಂದ್ರೀಕರಿಸಿತು? ಕ್ರಿಮಿಕೀಟ, ಪಶುಪಕ್ಷಿ, ಮನುಷ್ಯನ ತನಕ ಪರಿವರ್ತನೆಯಾಗಲು ಆರಂಭಕ್ಕಾದರೂ ಚೈತನ್ಯ ಎಲ್ಲಿಂದ ಬಂತು? ಇವೇ ಮೊದಲಾದ ತೊಡಕುಗಳನ್ನು ಜಡವಿಜ್ಞಾನವು ಬಿಡಿಸಿಲ್ಲ.

ಈ ಬಗೆಯ ಜಡವಾದವು ಒಂದು ಮಣ್ಣಿನ ಗಡಿಗೆಯನ್ನು ನೋಡಿ—ಇದು ಮಣ್ಣಿನ ಪರಮಾಣುಗಳಿಂದ ತನ್ನಿಂದತಾನೇ ಸಂಘಟಿತವಾಗಿದೆ; ಅಗ್ನಿ ದಗ್ಧವಾಗಿರುವದರಿಂದ ಗಟ್ಟಿಯಾಗಿದೆ; ನೀರನ್ನು ತುಂಬಿಟ್ಟರೂ ಮಣ್ಣು ಕರಗುವದಿಲ್ಲ; ಇದರ ನಿರ್ಮಾಣಕ್ಕೆ ಕರ್ತೃಬೇಕಾಗಿಲ್ಲ; ಎಂದಂತಾಗುತ್ತದೆ. ಅಥವ—ಒಂದು ಗಡಿಯಾರವನ್ನು ನೋಡಿ, ಇದರಲ್ಲಿ ಕಬ್ಬಿಣ, ಹಿತ್ತಾಳೆ ಮೊದಲಾದ ಧಾತುಗಳಿವೆ; ಸೇರಿರುವ ಚಕ್ರಗಳ ವ್ಯವಸ್ಥೆಯಿಂದ ಅದು ತನ್ನಿಂದ ತಾನೇ ತಿರುಗಿಕಾಲವನ್ನು ತಿಳಿಸುತ್ತದೆ; ಇದಕ್ಕೆ ಕರ್ತರು ಯಾರೂ ಇಲ್ಲ ಎಂದಂತಾಗುತ್ತದೆ. ಗಡಿಗೆಗಾಗಲಿ ಗಡಿಯಾರಕ್ಕಾಗಲಿ ಉಪಾದಾನ ಕಾರಣವನ್ನು ತಿಳಿಸಿದಂತೆ ನಿಮಿತ್ತ ಕಾರಣವನ್ನು ತಿಳಿಸದೆಹೋದರೆ ವಿಜ್ಞಾನವು ಪೂರ್ಣವಾಗುವದಿಲ್ಲ. ವಿಜ್ಞಾನದಲ್ಲಿ ಅಜ್ಞಾನ ಮಾತ್ರ ಎಂದಿಗೂ ಇರಬಾರದು.

ವೈಜ್ಞಾನಿಕರು ಸೃಷ್ಟಿರಚನೆ ಹೇಗಾಯಿತೆಂಬುದನ್ನು ಪ್ರಯೋಗ ಪರೀಕ್ಷಣಗಳಿಂದ ತಿಳಿಯಲು ಬಲು ಸಾಹಸಮಾಡಿದ್ದಾರೆ. ಸೃಷ್ಟಿಯಲ್ಲಿ ನಿಯಮವಿರುವದನ್ನೂ ನಿಯಮಾವಳಿಗಳಲ್ಲಿ ಐಕ್ಯತೆಯಿರುವದನ್ನೂ ವಿಶಾಲತ್ವವನ್ನೂ ಕಂಡುಹಿಡಿದಿದ್ದಾರೆ. ಭೂತಕನ್ನಡಿಗಳ ಸಹಾಯದಿಂದ ಒಂದೊಂದು ಗ್ರಹಗಳನ್ನೂ ಅವುಗಳ ಅಂತರವನ್ನೂ ಪರಿಧಿ ಮೊದಲಾದವುಗಳನ್ನೂ ಕಂಡುಹಿಡಿದಿದ್ದಾರೆ. ಭೂಮಿಗೆ ಗುರುತ್ವಾಕರ್ಷಣ ಶಕ್ತಿಯಿರುವದೆಂಬುದರಿಂದಾರಂಭಿಸಿ ಇಂದಿನ ಅಣುಬಾಂಬಿನಿಂದ ಪ್ರಯೋಗಮಾಡಿ ತೋರಿಸಿ ಪ್ರಳಯವನ್ನೂ ಮಾಡಿದ್ದಾರೆ. ಪಂಚಭೂತಗಳ ಶಕ್ತಿಯನ್ನು ಅಂಶತ್ವೇನ ಕಂಡುಹಿಡಿದು ಅವುಗಳ ಮೇಲೆ ಅಧಿಕಾರ ನಡೆಸಿದ್ದಾರೆ. ವಿದ್ಯೆಗಳ ಸಂಖ್ಯೆ, ಕಲೆಗಳ ಸಂಖ್ಯೆ, ಈ ವಿಜ್ಞಾನಯುಗದಲ್ಲಿ ಅಗಣಿತವಾಗಿ ಬೆಳೆದಿದೆ. ಇಷ್ಟೆಲ್ಲಾ ಆಗಿದ್ದರೂ ಇನ್ನಿಷ್ಟಾದರೂ ವಿಜ್ಞಾನದ ವೈಭವ ಭೌತಿಕ ವಸ್ತುಗಳ ವೈಭವವಾಯಿತಲ್ಲದೆ ಮಾನವನ ಅಂತಃಕರಣಕ್ಕೆ ತಾಕುವ ಅಧ್ಯಾತ್ಮ ವಿಕಾಸವಾದಂತಾಗಲಿಲ್ಲ. ವಿಜ್ಞಾನವು ಸೃಷ್ಟಿ ಹೇಗಾಯಿತೆಂಬುದನ್ನು ಪರಿಶೀಲಿಸಿತಲ್ಲದೆ ಏಕಾಯಿತು, ಯಾರಿಂದಾಯಿತು ಎಂಬುದನ್ನು ಪರಿಶೀಲಿಸಿಲ್ಲ. ಸೃಷ್ಟಿಯು ನಿಯಮಬದ್ಧವಾಗಿದೆಯೆಂಬುದನ್ನು ಕಂಡುಹಿಡಿಯಿತಲ್ಲದೆ, ನಿಯಮನಿಯಾಮಕನನ್ನು ಕಂಡುಹಿಡಿಯಲಿಲ್ಲ. ನಿಯಾಮಕನಿಲ್ಲದೆ ನಿಯಮವಾಗಲಿ, ನಿಯಮಗಳಿಲ್ಲದೆ ನಿಯಾಮಕನಾಗಲಿ ಇರುವುದು ಸಾಧ್ಯವಿಲ್ಲ. ಪ್ರತಿಯೊಂದು ಕಾರ್ಯಕ್ಕೂ ಕಾರಣವಿದ್ದೇ ತೀರಬೇಕು. ಸೃಷ್ಟಿಯು ಕರ್ತನಿಲ್ಲದೆ ತನ್ನಿಂದ ತಾನೇ ಆಯಿತೆನ್ನುವದಾಗಲಿ, ಜಡಭೂತಗಳಿಗೆ ಸ್ವನಿರ್ಮಾಣ ಶಕ್ತಿಯಿರುವದೆನ್ನುವದಾಗಲಿ, ಸೃಷ್ಟಿ ಅಕಸ್ಮಾತ್ ಆಯಿತೆನ್ನುವದಾಗಲಿ ಅವಿಚಾರತೆಯನ್ನು ಮುಗಿಲು ಮುಟ್ಟಿಸಿದಂತಾಗುತ್ತದೆ.

ಮತ್ತೆ ಗಡಿಗೆಯ ದೃಷ್ಟಾಂತವನ್ನು ತೆಗೆದುಕೊಂಡರೆ ಗಡಿಗೆಗೆ ಉಪಾದಾನ ಕಾರಣವಾದ ಮಣ್ಣು, ನಿಮಿತ್ತ ಕಾರಣನಾದ ಕುಂಬಾರ ಕರಣಗಳೆನಿಸಿರುವ ದೇಶಕಾಲ ಚಕ್ರ ಮೊದಲಾದವುಗಳೆಲ್ಲ ಇದ್ದು ತೀರಬೇಕು. ಅದರಂತೆ ಜಗತ್ತಿಗೂ ಸೃಷ್ಟಿಕರ್ತನೊಬ್ಬನಿದ್ದು ತೀರಬೇಕು. ಸೃಷ್ಟಿಕರ್ತ

ನಿಗೆ ಸೃಷ್ಟಿಮಾಡಬೇಕೆಂಬ ಇಚ್ಛೆಯಿರಬೇಕು. ಸೃಷ್ಟಿಮಾಡಲು ಸಂಪೂರ್ಣ ಜ್ಞಾನವಿರಬೇಕು. ಇವಕ್ಕೆಲ್ಲ ಮೇಲಾಗಿ ಪ್ರಯೋಜನವಿರಬೇಕು.

ಅಕಸ್ಮಾತ್ ಸೃಷ್ಟಿಯಾಯಿತೆಂಬುವರು ಸಹ ಆ ಶಬ್ದವನ್ನು ಅರ್ಥ ಮಾಡಿಕೊಂಡು ಮಾತಾಡಬೇಕು. ಅಕಸ್ಮಾತ್ ಎಂದರೆ ಯಾರಿಂದಲೂ ಅಲ್ಲ, ತನ್ನಿಂದತಾನೇ ಸೃಷ್ಟಿಯಾಯಿತು ಎಂದರ್ಥವಾಗುತ್ತದೆ. ಕಾರಣ ವಿಲ್ಲದೆ ಕಾರ್ಯವಿಲ್ಲವಾದ್ದರಿಂದ ಈ ಮಾತು ತಪ್ಪಾಗುತ್ತದೆ. ವ್ಯವಹಾರದ ಮಾತಿನಲ್ಲಿ ದೃಷ್ಟಾಂತವಾಗಿ ತೆಗೆದುಕೊಂಡರೆ—ನಾನು ಚಿತ್ರಶಾಲೆಗೆ ಹೋಗುತ್ತಿದ್ದೆ. ನನ್ನ ಮಿತ್ರನು ಅಕಸ್ಮಾತ್ ಅಲ್ಲಿ ಸಂಧಿಸಿದನು, ಎನ್ನುತ್ತೇವೆ. ಈ ಮಾತಿನ ಅರ್ಥ—ನನಗಾಗಲಿ ನನ್ನ ಮಿತ್ರನಿಗಾಗಲಿ ಚಿತ್ರ ಶಾಲೆಯಲ್ಲಿ ಸಂಧಿಸಬೇಕೆಂಬ ಪೂರ್ವಸಂಕಲ್ಪವಿರಲಿಲ್ಲ; ನನ್ನಲ್ಲಾದ ಪ್ರೇರಣೆಯ ನಿಮಿತ್ತ ನಾನು ಚಿತ್ರಶಾಲೆಗೆ ಹೋದೆ; ನನ್ನ ಮಿತ್ರನಲ್ಲಾದ ಪ್ರೇರಣೆಯ ನಿಮಿತ್ತ ಅವನು ಅಲ್ಲಿಗೆ ಬಂದನು; ನಮ್ಮಿಬ್ಬರ ಸಂಕಲ್ಪ ಒಂದಾಗಿದ್ದು ನಾವು ಅಲ್ಲಿ ಸಂಧಿಸಿದೆವು; ಉಭಯರ ಪ್ರತ್ಯೇಕ ಸಂಕಲ್ಪಗಳಿಂದ ಅಂತು ಅಲ್ಲಿ ನಾವು ಸಂಧಿಸಿದೆವು ಎಂಬ ಎರಡು ಬಗೆಯ ನಿಮಿತ್ತ ಕಾರಣಗಳ ಕಾರ್ಯವೆಂದಾಗುತ್ತದೆ. ಅಕಸ್ಮಾತ್ ಸೃಷ್ಟಿಗೆ ಈ ಬಗೆಯ ಅರ್ಥಮಾಡುವದಾದರೆ, ಸೃಷ್ಟಿಯು ಭಿನ್ನಭಿನ್ನ ಘಟಣೆಗಳು ಅಸಂಬದ್ಧವಾದ ಅನೇಕ ಇಚ್ಛಾಶಕ್ತಿಗಳಿಂದ ನಿರ್ಮಾಣವಾಗಿ ಆಗಲೂ ಅಕಸ್ಮಾತ್ ಸೇರಿ ಪ್ರಪಂಚವಾಯಿತೆಂದು ಹೇಳಿದಂತಾಗುತ್ತದೆ. ಇದು ಕೇವಲ ಅಸಂಭಾವಿತ ವಿಜ್ಞಾನಶಾಸ್ತ್ರದ ನಿಯಮಗಳಲ್ಲಿ ಐಕ್ಯತೆಯಿದೆ; ನಿಯಮ ವಿಲ್ಲದೆ ಯಾವದೊಂದು ಘಟಣೆಯೂ ಆಗುವದಿಲ್ಲವೆಂಬುವದು, ವಿಜ್ಞಾನ ಶಾಸ್ತ್ರದ ಮುಖ್ಯಸಿದ್ಧಾಂತ. ನಿಯಮವನ್ನೊಪ್ಪಿ ನಿಯಾಮಕನನ್ನು ಒಪ್ಪದಿರುವದು ವಿಜ್ಞಾನದಲ್ಲಿರುವ ಅಜ್ಞಾನ.

ಸೃಷ್ಟಿಯು ತನ್ನಿಂದತಾನೇ ಆಗಿರುವದಿದ್ದರೆ ತನ್ನಿಂದತಾನೇ ಒಂದು ಮಂದಿರವೇಕಾಗಿಲ್ಲ? ಸರೋವರವೇಕಾಗಿಲ್ಲ? ಕಾಳಿದಾಸನ ಶಾಕುಂತಳದಂಥ ಗ್ರಂಥವೇಕಾಗಿಲ್ಲ? ಘುಣಾಕ್ಷರ ನ್ಯಾಯದಿಂದ ಎಂದಾದರೂ ಎಲ್ಲಿಯಾದರೂ ಒಂದು ಗ್ರಂಥ ಕರ್ತೃವಿಲ್ಲದೆ ರಚನೆಯಾಗಿದೆಯೊ?

"ಈಗ ಸೃಷ್ಟಿ ತನ್ನಿಂದತಾನೇ ಆಯಿತು" ಎಂಬುದನ್ನು ಮತ್ತೊಂದು ಪರ್ಯಾಯವಾಗಿ ಅರ್ಥಮಾಡಿಕೊಳ್ಳೋಣ! ನಮ್ಮಲ್ಲಿ ನಾವೇ ಪ್ರಶ್ನೋತ್ತರಗಳನ್ನು ಮಾಡಿಕೊಳ್ಳೋಣ!

ಪ್ರಶ್ನೆ—ಸೃಷ್ಟಿರಚನೆಗೆ ಕಾರಣವ್ಯಾವುದು?

ಉತ್ತರ—ಸೃಷ್ಟಿನಿಯಮ.

ಪ್ರಶ್ನೆ—ಸೃಷ್ಟಿನಿಯಮವೆಂದರೇನು?

ಉತ್ತರ—ಅನೇಕ ಘಟಣೆಗಳು ಒಂದೇ ರೀತಿ ನಡೆಯುವದು ಆ ನಿಯಮ.

ಪ್ರಶ್ನೆ—ಆ ಘಟಣೆಗಳು ಆ ರೀತಿ ನಡೆಯಲು ಕಾರಣವೇನು?

ಉತ್ತರ—ಕಾರಣ ಅದೇ ಸೃಷ್ಟಿನಿಯಮ.

ಇದರಿಂದ ಗೊತ್ತಾದದ್ದೇನು? ಆಡಿದ ಮಾತನ್ನೇ ತಿರುಗಿಸಿ ತಿರುಗಿಸಿ ಆಡುವದು. ನಿಯಮವೇ ಪ್ರಬಂಧ, ಪ್ರಬಂಧವೇ ನಿಯಮ. ಈ ನಿಯಮ ಜ್ಞಾನಯುಕ್ತವಾಗಿದೆಯೋ ಇಲ್ಲವೋ ಎಂದರೆ, ಹೇಗೆ ಹೇಳಿದರೂ ಬಾಯಿ ಬೀಗ.

ಪ್ರಪಂಚದಲ್ಲಿ ಯಾವ ಘಟಣೆಗಳನ್ನು ಶಾಸನಮಾಡುತ್ತಿರುವ ನಿಯಮಗಳನ್ನು ನೋಡಿದರೂ ಜ್ಞಾನಯುತವಾದ ನಿಯಾಮಕಶಕ್ತಿಯ ಕೈವಾಡವಿರುವದು ಕಂಡುಬರುತ್ತದೆ. ಭಿನ್ನಭಿನ್ನ ಘಟಣೆಗಳನ್ನು ದೇಶ ಕಾಲ ಪರಿಮಾಣ ಮೊದಲಾದ ನಿಯಮಗಳಿಂದ ಜೋಡಿಸಬೇಕಾದರೆ ವಿಚಾರ ಮತ್ತು ಅದರಲ್ಲಿ ಬುದ್ಧಿಶಕ್ತಿ ಎರಡೂ ಇರಬೇಕಾಗುತ್ತದೆ. ನಿಯಮವೇ ಘಟಣೆಗೆ ಕಾರಣವಲ್ಲ. ನಿಯಮವು ಘಟಣೆಯ ಪರಿಣಾಮಕ್ಕೂ ನಿಯಾಮಕನ ಬುದ್ಧಿಯುಕ್ತ ರಚನೆಗೂ ಕಾರಣವಾಗಿರುತ್ತದೆ. ಹೇಗೆ ಹೇಗೆ ವಿಚಾರಮಾಡಿದರೂ ಜಗತ್ಸೃಷ್ಟಿಗೆ ಜ್ಞಾನಯುತವಾದ ನಿಯಾಮಕ ಶಕ್ತಿಯೊಂದಿರಬೇಕಾಗುತ್ತದೆಂಬುದು ಸ್ಪಷ್ಟ.

ಈಗ ನೀರನ್ನು ನೋಡೋಣ—ನೀರಿನ ಉತ್ಪತ್ತಿಗೆ ಆಮ್ಲಜನಕ ಜಲಜನಕಗಳು ಕಾರಣವಾಗಿವೆ. ಆಮ್ಲಜನಕ ಜಲಜನಕಗಳು ಪ್ರತ್ಯೇಕ ಪದಾರ್ಥಗಳೆಂಬುದೂ ವಿದಿತವಾಗಿದೆ. ಎರಡರ ಸ್ವಭಾವ, ಗುಣ ಬೇರೆ

ಬೇರೆಯಾಗಿವೆ. ಒಂದೇ ಆಗಿದ್ದರೆ ಬೇರೆ ಹೆಸರಿನಿಂದ ಕರೆಸಿಕೊಳ್ಳುತ್ತಿರ ಲಿಲ್ಲ. ನೀರಿನ ಸ್ವಭಾವ ಇವೆರಡರಿಂದ ಭಿನ್ನವಾಗಿದೆ. ಈ ಎರಡು ಪದಾರ್ಥಗಳ ಸೇರುವಿಕೆ, ಗೊತ್ತಾದ ಪ್ರಮಾಣದಲ್ಲಿ ಸೇರುವಿಕೆ, ಸೇರಿ ಪ್ರತ್ಯೇಕ ಸ್ವಭಾವವನ್ನುಂಟುಮಾಡುವಿಕೆ, ಸೇರಿ ಪ್ರತ್ಯೇಕವಾಗುವಿಕೆ, ಮೊದಲಾದ ಕ್ರಿಯೆಗಳು ಆಮ್ಲಜನಕ ಜಲಜನಕಗಳ ಸಹಜ ಸ್ವಭಾವ ಗಳಿಂದಲೇ ಆಗಲು ಸಾಧ್ಯವಿಲ್ಲ. ಬುದ್ಧಿಶಕ್ತಿಯಿಂದ ಇಚ್ಛಾಶಕ್ತಿಯಿಂದ ಕೂಡಿದ ಚೈತನ್ಯದಿಂದಲ್ಲದೆ ಮೇಲ್ಕಂಡ ಕ್ರಿಯೆಯು ಸಾಧ್ಯವಲ್ಲ. ಸ್ವಭಾವ ದಿಂದಲೇ ಸೃಷ್ಟಿಯಾಗುವದೆಂದು ಕಲ್ಪಿಸುವದಾದರೆ, ಜಡವಾದ ಸ್ವಭಾವವು ಚೇತನವ ಸಹಾಯವಿಲ್ಲದೆ ಹಾಗೆ ಆಗಲಾರದೆಂದು ಹೇಳಬೇಕಾಗುತ್ತದೆ. ಪರಮಾಣುಗಳಲ್ಲಿ ಒಂದಕ್ಕೊಂದು ಸೇರುವದೇ ಸ್ವಭಾವವಾಗಿದ್ದರೆ, ಅದೆಂದಿಗೂ ಬೇರೆಯಾಗುವದಿಲ್ಲ. ಬೇರೆಯಾಗುವ ಸ್ವಭಾವವಿದ್ದರೆ ಅದೆಂದಿಗೂ ಸೇರುವದಿಲ್ಲ. ಎರಡೂ ಸ್ವಭಾವದ ಪರಮಾಣುಗಳು ಸೇರಿ ಸೃಷ್ಟಿಯಾಗುವದೆಂದರೆ, ಯಾವ ಸ್ವಭಾವದ ಪರಮಾಣುಗಳು ಹೆಚ್ಚಾಗಿರು ವವೋ ಅದರಂತೆ ಕಾರ್ಯವಾಗುತ್ತದೆ. ಸಮಸಮವಾಗಿ ಎರಡೂ ಸೇರಿ ತೆಂದರೆ ಸೃಷ್ಟಿಯಾಗುವದಿಲ್ಲ. ಯಾವ ಪ್ರಮಾಣದಲ್ಲಿ ಯಾವುದನ್ನು ಸೇರಿಸಬೇಕೋ ಅದನ್ನರಿತ ಜ್ಞಾನಶಕ್ತಿಯಿಂದಲ್ಲದೆ ಸೃಷ್ಟಿರಚನೆಯೆಂದಿಗೂ ಆಗುವದಿಲ್ಲ. ಗಡಿಯಾರದ ಸಾಮಾನುಗಳನ್ನೆಲ್ಲಾ ಒಂದು ಕಡೆ ಇಟ್ಟರೆ ಒಂದಕ್ಕೊಂದು ಸೇರಿ ಅದು ನಡೆಯುವದಿಲ್ಲ. ವಿಶೇಷ ರೀತಿಯಿಂದ ಸೇರಿಸಿ ಕೀಲಿಕೊಟ್ಟಾಗಲೇ ಗಡಿಯಾರ ಹೇಗೆ ನಡೆಯುವದೋ; ಅದರಂತೆ ಸೃಷ್ಟಿ ಯು ಸೃಷ್ಟಿಕರ್ತನೊಬ್ಬನಿಂದಲೇ ನಡೆಯುತ್ತದೆಯೆಂದು ಭಾವಿಸಬೇಕು.

ಯೂರೋಪಿನಲ್ಲಿ ಮಧ್ಯಯುಗದಲ್ಲಿ ಮತಮದಾಂಧರಿಗೂ ವೈಜ್ಞಾನಿ ಕರಿಗೂ ಘರ್ಷಣೆಯುಂಟಾಯಿತು. ಸ್ವತಂತ್ರ ವಿಚಾರಿಗಳಾದ ಗ್ಯಾಲಿಲಿಯೋ ಮೊದಲಾದವರು ಪ್ರಾಣಾಪತ್ತುಗಳಿಗೊಳಗಾದರು. ವಿಚಾರ ಸ್ವಾತಂತ್ರ್ಯಕ್ಕೆ ಭಂಗ ಬಂದುದನ್ನು ಕಂಡು ವೈಜ್ಞಾನಿಕರು ಮತವನ್ನೇ ನಿರ್ಮೂಲ ಮಾಡಲು ಹೊರಟರು. ವೈಜ್ಞಾನಿಕರಿಗಿಂತ ಮತಮದಾಂಧರ ಹಾವಳಿ ಬಹಳವಾಗಿತ್ತೆಂದು ಇಲ್ಲಿ ಹೇಳದೆಗತ್ಯಂತರವಿಲ್ಲ. ಆದರೆ ಆ ಹಳೆಯು

ವೈರದವೇಗ, ಈಗ ಆ ಪ್ರಮಾಣದಲ್ಲಿಲ್ಲ. ಅನೇಕ ವೈಜ್ಞಾನಿಕರು ವಿಜ್ಞಾನದ ನಿಯಮಗಳಿಗೆಲ್ಲ ನಿಯಾಮಕನಿರಬೇಕೆಂದು ಒತ್ತಿ ಹೇಳುತ್ತಾರೆ. ಭೌತಿಕ ನಿಯಮಗಳ ಪರೀಕ್ಷಣೆ ವಿಜ್ಞಾನದ ಕೆಲಸ, ಅಧ್ಯಾತ್ಮ ವಿಚಾರ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಲ್ಲ, ಎಂದು ಕ್ಷೇತ್ರ ಸಂಕೋಚಮಾಡಿಕೊಂಡು ಕುಳಿತರೆ ವಿಜ್ಞಾನಿಗಳು ಅಜ್ಞಾನಿಗಳಾಗುತ್ತಾರೆ. ವಿಜ್ಞಾನದಿಂದ ಸಮಾಜ ದಲ್ಲಿರುವ ಅಂಧಶ್ರದ್ಧೆ ನಷ್ಟವಾದೀತಲ್ಲದೆ ಧರ್ಮವೆಂದಿಗೂ ನಷ್ಟವಾಗು ವದಿಲ್ಲ. ನಿಜವಾದ ಧರ್ಮಕ್ಕೆ ನಿಜವಾದ ವಿಜ್ಞಾನವೆಂದಿಗೂ ಶತ್ರುವಲ್ಲ. ವಿಜ್ಞಾನವು ಸೃಷ್ಟಿರಹಸ್ಯವನ್ನು ಪರಿಶೀಲಿಸಿ ತೋರಿಸಿ ದಂತೆಲ್ಲಾ ಸೃಷ್ಟಿಕರ್ತನ ಮಹಿಮೆಯನ್ನು ವಿಸ್ತಾರವಾಗಿ ತೋರಿಸಿ ಕೊಟ್ಟಂತಾಗುತ್ತದೆ. ಸೃಷ್ಟಿಕರ್ತನ ಮಹಿಮೆ ಗೋಚರವಾದಂತೆಲ್ಲಾ ಮಾನವನ ನಾಸ್ತಿಕತೆ ಮಾಯವಾಗುತ್ತದೆ. ಸರ್ ಆಲಿವರ್ ಲಾಡ್ಜನು "The region of religion and the region of compleated science are one" ಧರ್ಮಕ್ಷೇತ್ರವೂ ಸಂಪೂರ್ಣ ಬೆಳೆದ ವಿಜ್ಞಾನಕ್ಷೇತ್ರವೂ ಒಂದೇ ಎಂದಾಡಿದ ಮಾತು ಸತ್ಯವಾಗುತ್ತದೆ.

ಈಗ ಭಾರತೀಯರ ಧರ್ಮ ಬೆಳೆದುಬಂದಿರುವ ಬಗೆಯನ್ನು ವಿಚಾರಿಸೋಣ !

ಭರತಖಂಡದಲ್ಲಿ ಬಹು ಕಾಲದಿಂದ ಹಿರಿಯರು ಮಾಡಿಕೊಂಡು ಬಂದಿರುವ ವಿಚಾರ ಸರಣಿಯನ್ನು ತತ್ವಶಾಸ್ತ್ರ ಅಥವ ದರ್ಶನಶಾಸ್ತ್ರ ಎಂದು ಕರೆದಿದ್ದಾರೆ. ತತ್ವವೆಂದರೆ, ವಸ್ತುವೆಂದರೆ, ಪದಾರ್ಥವೆಂದರೆ, ಎಲ್ಲಾ ಒಂದೇ ಅರ್ಥ ವ್ಯತ್ಯಾಸವಾಗಿರುವ, ಕಲ್ಪಿತವಲ್ಲದಿರುವ, ಯಥಾರ್ಥವಸ್ತು ಆ ತತ್ವ. ತತ್ವದ ಸ್ವಭಾವವನ್ನು ಪರಿಶೀಲಿಸಿ ಮಾಡಿದ ನಿರ್ಣಯಕ್ಕೆ ಸಿದ್ಧಾಂತ ವೆಂದು ಹೆಸರು. ವಸ್ತುಗಳಲ್ಲಿ ಪ್ರತ್ಯಕ್ಷ ಪರೋಕ್ಷ ಎಂದು ಎರಡು ವಿಧ. ಇಂದ್ರಿಯಗಳಿಗೆ ಗೋಚರವಾಗುವವು ಪ್ರತ್ಯಕ್ಷ ವಸ್ತುಗಳು. ಗೋಚರ ವಾಗದಿರುವ ಭಾವನಾತ್ಮಕ ವಸ್ತುಗಳು ಪರೋಕ್ಷ ವಸ್ತುಗಳು. ಯಾವ ಭಾಷೆಯಲ್ಲಿ ಭಾವನಾತ್ಮಕ ವಸ್ತುಗಳ ಸಂಖ್ಯೆ ಬೆಳೆದಿದೆಯೋ ಆ ಭಾಷೆ ಬೆಳೆದ ಭಾಷೆಯೆನಿಸಿಕೊಳ್ಳುತ್ತದೆ.

ಪ್ರತ್ಯಕ್ಷ, ಪರೋಕ್ಷ ಸಕಲವಸ್ತುಗಳ ವಿಚಾರದಿಂದ ಸೃಷ್ಟಿ ಏಕಾಗಿದೆ, ಯಾರಿಂದ ಆಗಿದೆ ಎಂದು ವಿಚಾರಿಸುವದು ತತ್ವಶಾಸ್ತ್ರ. ವಿಚಿತ್ರ ಪ್ರಪಂಚದ ಮೂಲತತ್ವಗಳಾವವು, ಅವು ಒಂದೇ, ಅನೇಕವೇ, ಅವುಗಳಿಂದ ಸುಖವೇ, ದುಃಖವೇ ನಾನು ಎಂಬ ವಸ್ತುವಿನ ಸ್ವರೂಪವೆಂಥಾದ್ದು, ಅದಕ್ಕೆ ಬೇಕಾದುದೇನು, ಈ ಎಲ್ಲ ವಿಷಯಗಳ ಪರಿಶೀಲನೆ ತತ್ವಜಿಜ್ಞಾಸೆಯೆನಿಸುತ್ತದೆ.

ಮನುಷ್ಯನ ತರ್ಕಕ್ಕೆ ಸಿಗದ—ಭಾವನೆ, ಶ್ರದ್ಧೆ ಎಂಬ ಪದಗಳಿಂದ ಕರೆಸಿಕೊಳ್ಳುವ—ಎಲ್ಲಕ್ಕೂ ಮೀರಿದ ಭಕ್ತಿಮಾರ್ಗವೊಂದಿದೆ. ಅದು ಉಪಾಸಕರ ಭಾವನೆಗೆ ಅನುಸಾರವಾದ ನಾಮರೂಪಗಳಿಂದ ಕೂಡಿದ ದೇವತಾ ಸಂಬಂಧಿಯಾಗಿದೆ. ಅದು ಪವಿತ್ರ ದಾಂಪತ್ಯ ಪ್ರೇಮದಂತಿದೆ ಭಕ್ತಿಯಿದ್ದಕಡೆ ತರ್ಕವಿಲ್ಲ. ತರ್ಕವಿದ್ದ ಕಡೆ ಭಕ್ತಿಯಿಲ್ಲ. ತರ್ಕಕ್ಕೆ ಸಿಗದ, ಅಂಥ ಶ್ರದ್ಧೆಯಷ್ಟು ಕೆಳಮಟ್ಟಕ್ಕಿಳಿಯದ ಮಾರ್ಗ, ನಿಜವಾದ ಭಕ್ತಿ ಪಂಥ. ಅದು ಆ ದೇವತಾಮೂರ್ತಿಯ ಹೆಸರಿನ ಮತ.

ಚಾರ್ವಾಕದರ್ಶನ

ಪ್ರತ್ಯಕ್ಷವೊಂದನ್ನು ಆಧಾರವಾಗಿಟ್ಟುಕೊಂಡು ಬೆಳೆಸಿದ ವಾದಸರಣಿ ಚಾರ್ವಾಕದರ್ಶನವಾಗಿದೆ. ಇಂದ್ರಿಯಗಳಿಗೆ ಗೋಚರವಾಗದ ವಸ್ತುಗಳನ್ನವರು ನಂಬುವದಿಲ್ಲ. ಪೃಥ್ವಿ, ಅಪ್, ತೇಜಸ್ಸು, ವಾಯು ಎಂಬ ನಾಲ್ಕು ಭೂತಗಳ ಪರಿಣಾಮದಿಂದ ಜಗತ್ಸೃಷ್ಟಿಯಾಗಿದೆಯೆಂಬುವದು ಚಾರ್ವಾಕರ ಮತ. ತಾಂಬೂಲ ರಸದಲ್ಲಿ ಕೆಂಪುಬಣ್ಣ, ಮರದ ಚಕ್ಕೆಗಳ ಪಾಕದಲ್ಲಿ ಮಾದಕಶಕ್ತಿ ಉಂಟಾಗುವಂತೆ ನಾಲ್ಕು ಭೂತಗಳ ಸಂಸರ್ಗದಿಂದ ಚೈತನ್ಯಶಕ್ತಿಯುಂಟಾಗುವದೆಂಬುವದು ಚಾರ್ವಾಕದರ್ಶನದ ಸಾರಸರ್ವಸ್ವ.

ಚಾರ್ವಾಕ ದರ್ಶನವು ಇತರ ದರ್ಶನಗಳನ್ನು ಖಂಡಿಸಿದೆ. ಇತರ ದರ್ಶನಗಳು ಚಾರ್ವಾಕದರ್ಶನವನ್ನು ಖಂಡಿಸಿವೆ. ಐದುಸಾವಿರ ವರ್ಷಗಳ ಹಿಂದೆ ವಿರಚಿತವಾದ ಮಹಾಭಾರತದಲ್ಲಿ ಚಾರ್ವಾಕದರ್ಶನದ ಉಲ್ಲೇಖವಿದೆ. ದರ್ಶನ ಶಾಸ್ತ್ರಗಳೊಂದೊಂದನ್ನೂ ನೋಡುತ್ತ ಕುಳಿತರೆ—ಯಾವದು ಮೊದಲನೆಯದು, ಯಾವದು ಎರಡನೆಯದು, ಎಂಬುದನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಈ ಬಗೆಯ ಅನವಸ್ಥಾ ದೆಸೆಯನ್ನು ನೋಡಿ ಯಾರಾದರೂ ದರ್ಶನಶಾಸ್ತ್ರಗಳು ಪ್ರವಾಹತಃ ನಿತ್ಯ ಎಂಬ ತೀರ್ಮಾನಕ್ಕೆ ಬರಲೇಬೇಕಾಗುತ್ತದೆ.

ಚಾರ್ವಾಕದರ್ಶನದ ಗ್ರಂಥಗಳೆಲ್ಲ ನಷ್ಟವಾಗಿವೆ. ಚಾರ್ವಾಕದರ್ಶನಕ್ಕೆ ಅನುಯಾಯಿಗಳು ಯಾರೂ ಇಲ್ಲ. ಇಲ್ಲವೇ ಎಂದರೆ ಬುದ್ಧಿಯ ಮಟ್ಟವನ್ನನುಸರಿಸಿ ಒಬ್ಬೊಬ್ಬರೂ ಅನುಯಾಯಿಗಳಾಗುತ್ತಾರೆ. ಖಂಡನಗ್ರಂಥಗಳಿಂದ ಚಾರ್ವಾಕದರ್ಶನದ ಸ್ವರೂಪ ಗೊತ್ತಾಗಬೇಕಾಗಿದೆ. ಚಾರ್ವಾಕದರ್ಶನದ ವಾದವೈಖರಿಯನ್ನು ಖಂಡನಕಾರರು ಪುಷ್ಟಿಗೊಳಿಸಿ ನಿರೂಪಿಸಿರುತ್ತಾರೆ. ಬೃಹಸ್ಪತ್ಯಾಚಾರ್ಯರು ಈ ದರ್ಶನದ ಆದ್ಯಪ್ರವರ್ತಕರೆಂಬ ಖ್ಯಾತಿಯಿದೆ. ಬೃಹಸ್ಪತ್ಯಾಚಾರ್ಯರೆಂದರೆ ಸುರಗುರುಗಳಾದ ಪೌರಾಣಿಕ ಬೃಹಸ್ಪತಿಗಳಲ್ಲವೆಂಬುದರ ನೆನಪು ಮಾತ್ರ ಇರಬೇಕು. ದರ್ಶನದ ವ್ಯಾಖ್ಯಾನಕಾರರು ಚಾರುವಾಕರಾದ್ದರಿಂದ (ಮನೋಹರ ವಾಕ್ಸರಣಿಯುಳ್ಳವರು) ದರ್ಶನಕ್ಕೆ ಚಾರ್ವಾಕದರ್ಶನವೆಂದೇ ಪ್ರಖ್ಯಾತಿ ಬಂದಿದೆ.

ಬೌದ್ಧದರ್ಶನ

ಕಾರ್ಯಕಾರಣ ಭಾವಗಳನ್ನು ಪರ್ಯಾಲೋಚಿಸಿ, ಪ್ರತ್ಯಕ್ಷದ ಜೊತೆಗೆ ಅನುಮಾನವನ್ನೂ ಪ್ರಮಾಣವಾಗಿ ಬೌದ್ಧದರ್ಶನವು ಅಂಗೀಕರಿಸಿದೆ. ಹೊಗೆಯನ್ನು ನೋಡಿ ಬೆಂಕಿ ಇರಬೇಕೆಂದು ಅನುಮಾನಿಸುವದು, ಮಾರಿಬರುವ ಪ್ರವಾಹವನ್ನು ನೋಡಿ ಮೇಲ್ಭಾಗದಲ್ಲಿ ಮಳೆಯಾಗಿರಬೇಕೆಂದು ಊಹಿಸುವದು; ಕಾರ್ಯವನ್ನು ನೋಡಿ ಕಾರಣವನ್ನು ಕಂಡು ಹಿಡಿಯುವ ಕ್ರಮವಾಗಿರುತ್ತದೆ. ಈ ಬಗೆಯ ಊಹೆಯನ್ನು ಶಾಸ್ತ್ರಕಾರರು "ಅನುಮಾನಪ್ರಮಾಣ"ವೆಂದು ಕರೆದಿದ್ದಾರೆ.

ಬೌದ್ಧದರ್ಶನದಲ್ಲಿ ಆತ್ಮವಸ್ತುವೆಂಬುವದಿಲ್ಲ. ಸರ್ವವೂ ಕ್ಷಣಿಕ, ಸ್ವಲಕ್ಷಣ, ಶೂನ್ಯ. ವಿಭಾಗಮಾಡಲು ಸಾಧ್ಯವಲ್ಲದ ಕಾಲಾವಧಿಗೆ ಕ್ಷಣವೆಂದು ಹೆಸರು. ಕ್ಷಣಕಾಲದಲ್ಲಿ ತೋರಿದ ವಸ್ತು ಕ್ಷಣಿಕ. ಪ್ರವಾಹದಲ್ಲಿ ಪ್ರತಿಯೊಂದು ಜಲಪರಮಾಣುವೂ ಕಾಣುತ್ತದೆ. ಹರಿದುಹೋಗುತ್ತದೆ. ಹೊಸದು ಬರುತ್ತದೆ. ಕಂಡನೀರು ಬೇರೆ. ಕುಡಿದ ನೀರು ಬೇರೆ. ಮತ್ತೆ ಕಾಣುವ ನೀರು ಬೇರೆ. ಆದರೂ ಜಲಪ್ರವಾಹವು ಕೆರೆಯ ನಿಂತ ನೀರಿನಂತೆ ಕಾಣುತ್ತದೆ. ಇದರಂತೆ ದೀಪಜ್ವಾಲೆ. ವಸ್ತುಗಳು ಪ್ರತಿಕ್ಷಣದಲ್ಲಿ ಹುಟ್ಟಿ ಉತ್ತರಕ್ಷಣದಲ್ಲಿ ನಷ್ಟವಾಗುತ್ತವೆ. ಇದು ಕ್ಷಣಿಕ. ಸಾಮಾನ್ಯ ಲಕ್ಷಣವುಳ್ಳ ವಸ್ತುವೇ ಇಲ್ಲವೆನ್ನುವದು ಸ್ವಲಕ್ಷಣವೆನಿಸುತ್ತದೆ. ಸರ್ವತತ್ತ್ವ ನಿಷೇಧವೇ ಶೂನ್ಯ. ಏನೆಂದು ಹೇಳುವದಕ್ಕಾಗದ ದುರ್ನಿರೂಪತ್ವ ಶೂನ್ಯ ಹೇಗೆ ನಿರೂಪಣೆಮಾಡಿದರೆ ಹಾಗೆ ಬರುತ್ತ, ಯಾವ ಪಕ್ಷದಲ್ಲೂ ನಿಲ್ಲದೆ ಇರುವದು ಶೂನ್ಯ. ವಸ್ತುವಿಲ್ಲದೆ ಸ್ವಭಾವವಿಲ್ಲದೆ ಸರ್ವವಿನಾಶವೆನಿಸುವದು ಶೂನ್ಯ. ಈ ಶೂನ್ಯವಾದವು ಬೌದ್ಧಮತದ ಸರ್ವಸಾರ.

ಉಪನಿಷತ್ತುಗಳಲ್ಲಿ ಬೌದ್ಧಮತದ ಖಂಡನೆಯಿದೆ. ಎರಡೂವರೆ ಸಾವಿರ ವರ್ಷಗಳ ಹಿಂದೆ ಜನ್ಮತಾಳಿದ ಗೌತಮಬುದ್ಧನಿಗಿಂತ ಹಿಂದೆ ಎಷ್ಟೋ ಕಾಲದಿಂದ ಈ ಮತ ಬೆಳೆದು ಬಂದಿರುವಂತೆ ಕಾಣುತ್ತದೆ. ಬುದ್ಧನೆಂದರೆ ಸಿದ್ಧಪುರುಷ. ಇಂತಹ ಸಿದ್ಧಪುರುಷರ ಸಂಖ್ಯೆಗೆ ಮಿತಿಯಿಲ್ಲ. ಕಾಲಕ್ಕೆ ಅಳತೆಯಿಲ್ಲ.

ಗೌತಮುಬುದ್ಧನ ನಂತರ ಬೌದ್ಧಮತವು ಬಹು ಶಾಖೆಗಳಾಗಿ ಪರಿಣಮಿಸಿತು. ಭರತಖಂಡದಲ್ಲಿ ಹುಟ್ಟಿದ ಮತವಾದರೂ ಇತರ ದೇಶಗಳಲ್ಲಿ ಮತದ ವ್ಯಾಪ್ತಿ ಹೆಚ್ಚಾಯಿತು.

ಸಾಂಖ್ಯದರ್ಶನ

ವಸ್ತುಗಳನ್ನು ಸಂಖ್ಯೆಮಾಡಿ ಇಪ್ಪತ್ತೈದು ತತ್ವಗಳು, ಅರವತ್ತು ಪದಾರ್ಥಗಳು, ಎಂದು ನಿರ್ಣಯಮಾಡಿರುವದರಿಂದ ಈ ದರ್ಶನಕ್ಕೆ ಸಾಂಖ್ಯದರ್ಶನವೆಂದು ಹೆಸರು ಬಂದಿದೆ. ಚಾರ್ವಾಕಬೌದ್ಧದರ್ಶನಗಳಂತೆ ಸಾಂಖ್ಯವೂ ನಿರೀಶ್ವರ ದರ್ಶನವೆನಿಸಿದೆ. ಈ ದರ್ಶನವು ಕರ್ಮವನ್ನು ಸುತರಾಂ ನಿರಾಕರಿಸಿ ಜ್ಞಾನಕ್ಕೆ ಅಗ್ರಸ್ಥಾನಕೊಟ್ಟಿದೆ. ಚಾರ್ವಾಕರು ಜೀವಾತ್ಮನನ್ನು ನಿರಾಕರಿಸಿರುವ ರೀತಿಯಲ್ಲಿ ಸಾಂಖ್ಯರು ಪರಮಾತ್ಮನನ್ನು ನಿರಾಕರಿಸಿದ್ದಾರೆ. ವಿಶುದ್ಧಾದ್ವೈತ ದರ್ಶನಕಾರರು ಪರಮಾತ್ಮನನ್ನಿಟ್ಟಿರುವ ರೀತಿಯಲ್ಲಿ ಸಾಂಖ್ಯರು ಜೀವಾತ್ಮನನ್ನಿಟ್ಟಿದ್ದಾರೆ. ಬೌದ್ಧರಿಗೆ ಕಾಣುವದೆಲ್ಲ "ಅಸತ್" ಸಾಂಖ್ಯರಿಗೆ ಕಾಣುವದೆಲ್ಲ "ಸತ್" ಬೌದ್ಧರ—ಅನಿತ್ಯ, ಕ್ಷಣಿಕ, ಉತ್ಪತ್ತಿ, ಅಸತ್ಕಾರ್ಯ, ಅಭಾವ ಇವೆಲ್ಲ ಸಾಂಖ್ಯರ—ನಿತ್ಯ, ಸ್ಥಿರ, ಅಭಿವ್ಯಕ್ತಿ, ಸತ್ಕಾರ್ಯ ಮತ್ತು ಭಾವಗಳು. ಏತಿ ಎಂದರೆ ಪ್ರೇತಿ ಎನ್ನುವಂತೆ ಬೌದ್ಧ ಸಾಂಖ್ಯದರ್ಶನಗಳು ಪರಸ್ಪರ ಪ್ರತಿದರ್ಶನಗಳು. ಬೌದ್ಧರಂತೆ ಭ್ರಮೆ ಭ್ರಾಂತಿಗಳು ಸಾಂಖ್ಯರಲ್ಲಿಲ್ಲ. ಇದ್ದರೆ ಅದು ಅಖ್ಯಾತಿವಾದದಲ್ಲಿ ಮಾತ್ರ. ವಸ್ತುವನ್ನು ಸರಿಯಾಗಿ ತಿಳಿದುಕೊಳ್ಳದಿರುವದು "ಅಖ್ಯಾತಿ."

ಸಾಂಖ್ಯರ ಆತ್ಮ ವೈದಿಕರ ಪರಮಾತ್ಮನಂತಲ್ಲ. ಸಾಂಖ್ಯರ ಆತ್ಮನಿಗೆ ಗುಣವಿಲ್ಲ, ದೋಷವಿಲ್ಲ, ಶಕ್ತಿಯಿಲ್ಲ. ಅದು ನಿರ್ವಿಕಾರ, ಕೂಟಸ್ಥ ಅಥವ ನಿರತಿಶಯ ಚೈತನ್ಯವಸ್ತು. ಆತ್ಮಗಳು ಅನಂತವಾಗಿವೆ. ಅವಕ್ಕೆ ಪ್ರಕೃತಿ ಪರಿಣಾಮವಾದ ಅನೇಕ ವಸ್ತುಗಳಿಂದ ಸೇರಿದ ಶರೀರವು ಸೃಷ್ಟಿಕಾಲದಲ್ಲಿ ಪ್ರಾಪ್ತವಾಗುತ್ತದೆ. ಅದು ಪ್ರಳಯಾಂತವಾಗಿ ಇರುತ್ತದೆ. ಆ ಶರೀರಕ್ಕೆ ಲಿಂಗದೇಹವೆಂದು ಹೆಸರು. ಮಹತ್ತತ್ವ, ಅಹಂಕಾರತತ್ವ, ಪಂಚ

ಜ್ಞಾನೇಂದ್ರಿಯಗಳು, ಪಂಚ-ಕರ್ಮೇಂದ್ರಿಯಗಳು, ಪಂಚ-ತನ್ಮಾತ್ರೆಗಳು ಬುದ್ಧಿ ; ಇಷ್ಟೂ ಕೂಡಿ ಲಿಂಗದೇಹವಾಗುತ್ತದೆ. ಪಿತೃ ಸಂಬಂಧವಾದ ಅಸ್ಥಿ, ಸ್ನಾಯು, ಮಜ್ಜ ; ಮಾತೃ ಶರೀರದಿಂದ ಬರುವ ರಕ್ತ, ಮಾಂಸ, ರೋಮ ; ಇವುಗಳಿಂದ ಲಿಂಗದೇಹದ ಮೇಲಣ ಹೊದ್ದಿಕೆಯಂತೆ ಸ್ಥೂಲದೇಹ ಪ್ರಾಪ್ತವಾಗುತ್ತದೆ. ಸೂಕ್ಷ್ಮವಾದ ಲಿಂಗದೇಹದಲ್ಲಿ ಹದಿನೆಂಟು ತತ್ವಗಳಿದ್ದರೂ, ಬುದ್ಧಿ ಅವಕ್ಕೆಲ್ಲ ಅಧಿರಾಜನಂತಿದೆ. ಸುಖ, ದುಃಖ, ಜ್ಞಾನ, ಇಚ್ಛಾ, ರಾಗ, ದ್ವೇಷ, ಪುಣ್ಯ ಪಾಪ, ನರಕ, ಸ್ವರ್ಗ, ಬಂಧ, ಮೋಕ್ಷ, ಧರ್ಮ, ಅಧರ್ಮ, ಐಶ್ವರ್ಯ, ಅನೈಶ್ವರ್ಯ, ವೈರಾಗ್ಯ, ಅವೈರಾಗ್ಯ ; ಇವೆಲ್ಲವೂ ಬುದ್ಧಿಗೆ ಉಂಟಾಗತಕ್ಕ ದ್ವಂದ್ವಗಳು. ಆತ್ಮನು —ದ್ರಷ್ಟಾ, ಭೋಕ್ತಾ, ಕೇವಲ ಸಾಕ್ಷೀಭೂತ. ಕೈವಲ್ಯ ಬೇಕಾಗಿರುವುದರಿಂದ ಮನುಷ್ಯನಿಗೆ ಪ್ರಾಕೃತಿಕ ವಸ್ತುಗಳು ಬೇಕು.

ಪ್ರಕೃತಿಯು ಪ್ರಧಾನವಾದರೂ ಜಡವಾದುದರಿಂದ ಅದಕ್ಕೆ ಇಚ್ಛಾಶಕ್ತಿಯಿಲ್ಲ. ಚೇತನನಾದ ಪುರುಷನಿಗೆ ಕ್ರಿಯಾಶಕ್ತಿಯಿಲ್ಲ. ಇಂತಹ ಪ್ರಕೃತಿ ಪುರುಷರಿಂದ ಜಗತ್ಸಂಸಾರ ನಡೆಯಬೇಕು. ಈ ಪ್ರಕೃತಿ ಪುರುಷರ ಅಸಹಾಯತನವನ್ನು ನೋಡಿಯಾದರೂ, ಸಾಂಖ್ಯರು ಪುರುಷೋತ್ತಮನೊಬ್ಬನನ್ನು ಅಂಗೀಕರಿಸಲಿಲ್ಲ. ಈ ಬಗೆಯ ಪ್ರಕೃತಿ ಪುರುಷರಿಂದ ನಿರ್ಮಿತವಾದ ಜಗತ್ತು ಕುರುಡನ ಹೆಗಲೇರಿ ಹೆಳವನು ಮನೆಸೇರಿದಂತಿದೆ.

ಸಾಂಖ್ಯದರ್ಶನ ಪ್ರವರ್ತಕರು ಕಪಿಲ ಮಹರ್ಷಿಗಳಾದರೂ ಅವರ "ಷಷ್ಠಿತಂತ್ರ"ವೆಂಬ ಆಗಮ ಗ್ರಂಥವು ಲುಪ್ತವಾಗಿದೆ. ಸಾಂಖ್ಯದರ್ಶನವನ್ನು ಬ್ರಹ್ಮಸೂತ್ರಗಳು ಖಂಡಿಸುವವಾದರೂ, ಈ ದರ್ಶನದ ವಾದವೈಖರಿಯನ್ನು ಅನೇಕ ದಾರ್ಶನಿಕರು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಈ ದರ್ಶನಕ್ಕೆ ಬೌದ್ಧಮತಕ್ಕಿರುವಂತೆ ಅನುಯಾಯಿಗಳಿಲ್ಲ.

ಜೈನದರ್ಶನ

ಬೌದ್ಧ ಸಾಂಖ್ಯದರ್ಶನಗಳು ಒಂದಕ್ಕೊಂದು ಪ್ರತಿಕಕ್ಷಿಗಳಂತೆ ಇದ್ದರೆ, ಜೈನದರ್ಶನವು ಎರಡರ ಮಧ್ಯಸ್ಥ ಸ್ಥಾನದಲ್ಲಿದೆ. ಬೌದ್ಧರಿಗೆ

ಎಲ್ಲವೂ ಅಸತ್, ಸಾಂಖ್ಯರಿಗೆ ಸತ್, ಜೈನರಿಗಾದರೋ ಸದಸತ್. ತತ್ವ ವಿಚಾರದಲ್ಲಿ ವಿರೋಧ ಪಕ್ಷಗಳನ್ನು ಸುಧಾರಿಸುವ ಮಾರ್ಗವನ್ನು ಕಂಡು ಹಿಡಿದು, ಮುಂದಿನ ದರ್ಶನಕಾರರಿಗೆ ಮಾದರಿಯನ್ನು ತೋರಿಸಿದವರು ಜೈನರು. ಪ್ರಪಂಚವು ಒಬ್ಬರಿಗೆ ಸತ್, ಒಬ್ಬರಿಗೆ ಅಸತ್, ಮತ್ತೊಬ್ಬರಿಗೆ ಸದಸತ್, ಮಗದೊಬ್ಬರಿಗೆ ಸದಸದ್ವಿಲಕ್ಷಣ. ಈ ಸದಸದ್ವಿಲಕ್ಷಣದಲ್ಲಿ ಕಾಲಭೇದದಿಂದ ಸತ್, ಅಸತ್, ಸದಸತ ; ಒಟ್ಟಿನಲ್ಲಿ ಈ ಏಳು ರೀತಿಗಳ ವಾದದಲ್ಲೂ ಮಧ್ಯಸ್ಥ ಮಾರ್ಗದಲ್ಲಿದ್ದು ಲೋಕಪ್ರಿಯರಾಗಲು ಹೊರಟು ವಿಜಯಿಗಳಾದವರು ಜೈನರು. ಜೈನರ ಪಾರಿಭಾಷಿಕ ಶಬ್ದಗಳು ಹಾಗಿವೆ. ಒಂದೇ ಸ್ವಭಾವದಲ್ಲಿರುವ ಏಕಾಂತವಾದ, ಸರ್ವಸ್ವಭಾವದಲ್ಲಿರುವ ಅನೇಕಾಂತವಾದ, ಇವೆರಡರಲ್ಲಿ ಜೈನರದು ಅನೇಕಾಂತ ವಾದವೆನ್ನಬಹುದು. ಜೈನದರ್ಶನದಲ್ಲಿ ಸತ್ವ ಅಥವ ತತ್ವವೆಂಬುವದು ಉತ್ಪತ್ತಿವಿನಾಶಸ್ಥಿರತ್ವಗಳೆಂಬ ಸ್ವಭಾವವುಳ್ಳದ್ದು. ಬೀಜವನ್ನು ಬಿತ್ತಿದರೆ ಸಸ್ಯವಾಗುವದರಿಂದ ಉತ್ಪತ್ತಿ, ಬೀಜಸ್ವರೂಪ ನಾಶವಾಗುವದರಿಂದ ವಿನಾಶ, ಮತ್ತೆ ಬೀಜವಾಗಿ ಉಳಿಯುವದರಿಂದ ಸ್ಥಿರ. ಜೈನದರ್ಶನದಲ್ಲಿ ಪ್ರಪಂಚಕ್ಕೆ ಸೃಷ್ಟಿಲಯಗಳಿಲ್ಲ. ಸೃಷ್ಟಿಗೆ ಕರ್ತನೂ ಇಲ್ಲ.

ಜ್ಞಾನಸ್ವರೂಪಿಯಾದ ಚೈತನ್ಯವಸ್ತು ಜೀವ. ಅವನು ನಿತ್ಯ, ಜನ್ಮಪರಂಪರೆಗೆ ಸಿಲುಕಿರುವವನು ಬದ್ಧ ಜೀವ. ಜನ್ಮ ಪರಂಪರೆಯಿಂದ ಬಿಡಲ್ಪಟ್ಟವನು ಮುಕ್ತಜೀವ. ಜೀವರ ಸಂಖ್ಯೆಗೆ ಮಿತಿಯಿಲ್ಲ. ಸಮ್ಯಗ್ದರ್ಶನ ಜ್ಞಾನ, ಸಮ್ಯಕ್ಚಾರಿತ್ರಗಳಿಂದ ಜೀವನು ಸರ್ವಜ್ಞನಾಗುವನು, ಮುಕ್ತನಾಗುವನು. ಜೀವನ್ಮುಕ್ತರಾದ ಅರ್ಹತ್ಪದವಿಯಲ್ಲಿರುವ ಮಹಾಪುರುಷರು ಲೋಕಾನುಗ್ರಹಕ್ಕಾಗಿ ಉಪದೇಶಿಸಿರುವ ವಾಕ್ಯಗಳು ಆಗಮಗಳು. ಅವರ ಧ್ಯಾನವು ಸಕಲ ಕಲ್ಯಾಣಗಳಿಗೆ ಕಾರಣವು. ಇದು ಜೈನದರ್ಶನದ ಸಾರ.

ಯೋಗದರ್ಶನ

ಹಿರಣ್ಯಗರ್ಭರೆಂಬ ಯೋಗೀಶ್ವರರು ಯೋಗದರ್ಶನ ಪ್ರವರ್ತಕರು. ಪತಂಜಲಿಗಳು, ಸೂತ್ರಗ್ರಂಥಗಳನ್ನು ರಚಿಸಿದಕಾರಣ ಪಾತಂಜಲ ದರ್ಶನ

ವೆಂದು ಪ್ರಸಿದ್ಧಿಗೆ ಬಂದಿತು. ಚಾರ್ವಾಕ, ಬೌದ್ಧ, ಸಾಂಖ್ಯ, ಮತ್ತು ಜೈನ ದರ್ಶನಗಳು ಈಶ್ವರನನ್ನು ಒಪ್ಪದಿದ್ದ ಕಾರಣ ನಿರೀಶ್ವರ ದರ್ಶನಗಳೆನಿಸಿದವು. ಈಶ್ವರನನ್ನು ಅಂಗೀಕರಿಸಿರುವ ದರ್ಶನಗಳಲ್ಲಿ ಯೋಗ ದರ್ಶನ ಮೊದಲನೆಯದು. ಜೀವಾತ್ಮ ಪರಮಾತ್ಮರ ಸಂಯೋಗಕ್ಕೆ ಯೋಗವೆಂದು ಹೆಸರು. ಜೀವಾತ್ಮಪರಮಾತ್ಮರ ಸಾಮ್ಯದರ್ಶನಕ್ಕೆ ಸಮಾಧಿಯೆಂದು ಹೆಸರು. ಜೀವಾತ್ಮನು ಸಕಲ ಪ್ರಪಂಚಸಂಬಂಧದಿಂದ ಮುಕ್ತನಾಗಿ ತನ್ನ ಸ್ವರೂಪಾನಂದದಲ್ಲಿ ಶಾಶ್ವತನಾಗಿರುವದಕ್ಕೆ ಮುಕ್ತಿಯೆಂದು ಹೆಸರು. ಯೋಗದರ್ಶನವು—ಹೇಳಿದಂತೆ ಕೇಳು, ಕೇಳಿದಂತೆ ಮಾಡು; ಎಂಬಂತಹ ಉಪದೇಶಶಾಸ್ತ್ರ. ವ್ಯಾಕರಣಶಾಸ್ತ್ರದಂತೆ ಇದು ಅನುಶಾಸನವಲ್ಲದೆ ಜಿಜ್ಞಾಸೆಯಲ್ಲ.

ಸಾಂಖ್ಯದರ್ಶನದಂತೆ ಯೋಗದರ್ಶನದಲ್ಲಿ ಪ್ರಪಂಚ-ಸೃಷ್ಟಿಗೆ ಪ್ರಧಾನವಾದ ಮೂಲ ಪ್ರಕೃತಿಯು ಉಪಾದಾನಕಾರಣ. ಈಶ್ವರನು ನಿಮಿತ್ತಕಾರಣ. ಗಡಿಗೆಯ ನಿರ್ಮಾಣಕ್ಕೆ ಮಣ್ಣಿನಂತೆ ಮೂಲಪ್ರಕೃತಿ. ಕುಂಬಾರನಂತೆ ಈಶ್ವರ. ಸಾಂಖ್ಯದಲ್ಲಿ ಈಶ್ವರ ಮಾತ್ರ ಇಲ್ಲ. ದರ್ಶನದ ಪ್ರಕ್ರಿಯೆ ಸಾಂಖ್ಯದಂತಿರುವದರಿಂದಲೂ, ಹೊಸದಾಗಿ ಈಶ್ವರನನ್ನು ಪರಿಗ್ರಹಿಸಿರುವದರಿಂದಲೂ, ಈ ದರ್ಶನಕ್ಕೆ ಸೇಶ್ವರ ಸಾಂಖ್ಯವೆಂಬ ಹೆಸರು ಬಂದಿದೆ. ಯೋಗದರ್ಶನದಲ್ಲಿ ಸಾಂಖ್ಯದಂತೆ ತತ್ವಜ್ಞಾನ ಪರಿಗ್ರಹವಿದ್ದು, ಫಲಾಭಿಸಂಧಿರಹಿತವಾದ ಶ್ರೌತ ಸ್ಮಾರ್ತ ಕರ್ಮಾನುಷ್ಠಾನದಿಂದ ಈಶ್ವರಾನುಗ್ರಹವನ್ನು ಸಂಪಾದಿಸಬೇಕೆಂಬ ನಿರ್ಣಯವಿರುವದರಿಂದ, ಇದೊಂದು ಬಗೆಯ ಭಕ್ತಿಶಾಸ್ತ್ರವೆನಿಸಿದೆ.

ಪಾತಂಜಲ ಯೋಗದರ್ಶನದಲ್ಲಿ ಪ್ರಥಮಪಾದದಲ್ಲಿ ಸಮಾಧಿಸ್ವರೂಪ; ದ್ವಿತೀಯಪಾದದಲ್ಲಿ ಜಾಗ್ರದವಸ್ಥೆಯಲ್ಲಿ ಮಾಡಬೇಕಾದ ಪ್ರವಚನ,ಕ್ರಿಯಾಯೋಗ, ಭಕ್ತಿಯ ಅನುಷ್ಠಾನ, ತೃತೀಯಪಾದದಲ್ಲಿ ಧ್ಯಾನಧಾರಣಾದಿಗಳಿಂದಾಗುವ ಸಿದ್ಧಿ; ತುರೀಯಪಾದದಲ್ಲಿ ಸಿದ್ಧಿಯಿಂದಾಗುವ ಕೈವಲ್ಯಾನಂದ; ಇವುಗಳನ್ನು ವಿಸ್ತಾರವಾಗಿ ವರ್ಣಿಸಿರುತ್ತಾರೆ. ಈ ದರ್ಶನದಲ್ಲಿರುವ ಅಷ್ಟಾಂಗ ಯೋಗಗಳು ಸಕಲ ದರ್ಶನಗಳಿಂದಲೂ ಅನುಷ್ಠೇಯವಾಗಿರುವವು,

ಯೋಗದರ್ಶನದ ಈಶ್ವರನು ಸಗುಣನು, ಸಾಕಾರನು. ಶುದ್ಧ ಸತ್ವ ಪ್ರಧಾನವಾದ ಅವತಾರ ಶರೀರವದಾದ್ದರಿಂದ ಅದು ಕರ್ಮಾಧೀನ ವಲ್ಲ. ಈಶ್ವರನು ಸಾಕಾರನಾಗಿರದಿದ್ದರೆ ಅನುಗ್ರಹ ಉಪದೇಶ ಮೊದ ಲಾದವುಗಳಿಗೆ ಅವಕಾಶವಿರುವದಿಲ್ಲ. ಪ್ರಳಯಕಾಲದಲ್ಲಿ ಸಾಕಾರವು ನಿರಾಕಾರದಲ್ಲಿ ಅದೃಶ್ಯವಾದರೂ ಸೃಷ್ಟಿಯಲ್ಲಿ ಮತ್ತೆ ಸಾಕಾರವಾಗಿ ಸಕಲ ಪುರುಷಾರ್ಥಗಳನ್ನು ಸಂಕಲ್ಪಮಾತ್ರದಿಂದ ಕೊಡಲು ಸಮರ್ಥವಾಗಿರು ವದು. ಇಂತಹ ಈಶ್ವರನು ಪರಮಪುರುಷನು, ಸಕಲ ಕರ್ಮಸಮಾ ರಾಧ್ಯನು, ಪರಮಸಿದ್ಧನು, ಯೋಗೀಶ್ವರೇಶ್ವರನು.

ಬೀಜಾಂಕುರನ್ಯಾಯದಿಂದ ಪ್ರಪಂಚ-ವ್ಯಾಪಾರವು ನಡೆಯುತ್ತಿರು ವುದು. ಪ್ರಪಂಚಕ್ಕೆ ಈಶ್ವರನು ಗುರುವು ಶರಣಾಗತರ ಪ್ರಾರ್ಥನೆಯನ್ನು ಸ್ವೀಕರಿಸುವನಾದ್ದರಿಂದ ಪ್ರಣವಸ್ವರೂಪನು ಅವನ ಸೇವೆಯಿಂದ, ಅವನಲ್ಲಿ ಮಾಡುವ ಭಕ್ತಿಯಿಂದ, ಸಕಲ ಪುರುಷಾರ್ಥಗಳು ಸಿದ್ಧಿಸುವುವು.

ಭಗವದ್ಗೀತೆಯಲ್ಲಿ ಉಕ್ತವಾಗಿರುವ ಸಾಂಖ್ಯಯೋಗವೆಂಬ ಅಧ್ಯಾ ಯವು ಪಾತಂಜಲ ಸಿದ್ಧಾಂತವನ್ನು ಸೂಕ್ಷ್ಮವಾಗಿ ವಿವರಿಸಿರುವದು. ಯೋಗದ ಅಷ್ಟಾಂಗ ವಿವರಣೆ ಹೀಗಿರುವುದು.

೧. ಯಮ—ಹಿಂಸೆ, ಅಸತ್ಯ, ಸ್ತೇಯ, ದುರಾಚಾರ, ಪರಿಗ್ರಹ ಗಳನ್ನು ಬಿಡುವದು.

೨. ನಿಯಮ—ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಭಕ್ತಿ, ಎಂಬ ಐದು ನಿಯಮಗಳನ್ನನುಸರಿಸುವದು.

೩. ಆಸನ—ಸುಖವಾಗಿ ಸ್ಥಿರವಾಗಿ ಇರುವಿಕೆ. ಪದ್ಮಾಸನ ಮೊದ ಲಾದ ಆಸನಗಳಲ್ಲಿ ಸ್ಥಿರವಾಗಿ ಕುಳಿತು ಅಭ್ಯಸಿಸುವದು.

೪. ಪ್ರಾಣಾಯಾಮ—ಉಚ್ಛ್ವಾಸ ನಿಶ್ವಾಸ ವಾಯುಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದು.

೫. ಪ್ರತ್ಯಾಹಾರ—ಚಕ್ಷುರಾದಿ ಇಂದ್ರಿಯಗಳನ್ನು ನಿಯಮ ಗಳಿಂದ ಸ್ವಾಧೀನಪಡಿಸಿಕೊಂಡು ಅಂತಃಕರಣಕ್ಕೆ ಅಧೀನ ಗೊಳಿಸುವದು.

೬. ಧ್ಯಾನ—ಧ್ಯೇಯ ವಸ್ತುವಿನಲ್ಲಿ ಚಿತ್ತವನ್ನು ಸ್ಥಿರಗೊಳಿಸು ವದು.

೭. ಧಾರಣ—ನಾಭಿಚಕ್ರ. ಹೃದಯ, ನಾಸಾಗ್ರ, ಶಿರಸ್ಸು, ಮೊದ ಲಾದ ಶುಭಸ್ಥಾನಗಳಲ್ಲಿ ವಿಷಯಾಂತರ ಸಂಬಂಧವಿಲ್ಲದಂತೆ ಚಿತ್ತವೃತ್ತಿಯನ್ನು ನೆಲೆಗೊಳಿಸುವದು.

೮. ಸಮಾಧಿ—ನಿರ್ಮಲ ಚಿತ್ತವೃತ್ತಿಯು ಭೇದರಹಿತವಾಗು ವಂತೆ ಧ್ಯೇಯ ವಸ್ತುವಿನಲ್ಲಿ ಲೀನವಾಗುವದು.

ಬೌದ್ಧ ದರ್ಶನವು ಪುರುಷನನ್ನು ಶೂನ್ಯಗೊಳಿಸಿ ಚಿತ್ತವಿನಾಶ ವನ್ನೇ ಪುರುಷಾರ್ಥವೆಂದರೆ, ಯೋಗದರ್ಶನವು ಚಿತ್ತವೃತ್ತಿನಿರೋಧರೂಪ ವಾದ ಯೋಗ ಸಮಾಧಿಯನ್ನುಪದೇಶಿಸಿ, ಪುರುಷನಿಗೆ ಅಂದರೆ ಜೀವ ನಿಗೆ ಪುರುಷಾರ್ಥವನ್ನು ಕೊಟ್ಟು ಸಮಾಧಾನಗೊಳಿಸಿದ ದರ್ಶನವಾಗಿದೆ.

ತಾರ್ಕಿಕ ದರ್ಶನ

ಪ್ರಮೇಯಶಾಸ್ತ್ರವೆನಿಸಿರುವ ವೈಶೇಷಿಕವನ್ನೂ ಪ್ರಮಾಣಶಾಸ್ತ್ರವೆನಿ ಸಿರುವ ನ್ಯಾಯವನ್ನೂ ಒಟ್ಟುಗೂಡಿಸಿ ತಾರ್ಕಿಕದರ್ಶನವೆಂದು ಕರೆ ದಿದ್ದಾರೆ. ನ್ಯಾಯವೈಶೇಷಿಕ ದರ್ಶನಗಳಲ್ಲಿ ವ್ಯತ್ಯಾಸಗಳು ಬಹಳ ಸ್ವಲ್ಪ ವಾಗಿವೆ. ವೈಶೇಷಿಕಕ್ಕೆ ಕಣಾದರೂ ನ್ಯಾಯಕ್ಕೆ ಗೌತಮರೂ ಸೂತ್ರ ಕಾರರಾಗಿದ್ದಾರೆ. ಪ್ರತ್ಯಕ್ಷ ಮತ್ತು ಆಗಮಗಳಿಂದ ಗೋಚರವಾಗುವ ವಸ್ತುಗಳನ್ನು ಯುಕ್ತಿಯಿಂದ ಪರಿಶೀಲಿಸುವದು ನ್ಯಾಯಶಾಸ್ತ್ರ. ನೈಯ್ಯಾಯಿಕರು ವಿದ್ಯೆಗಳನ್ನು ಅನ್ವೀಕ್ಷಕೀ ತ್ರಯೀ ವಾರ್ತಾ,ದಂಡನೀತಿ, ಎಂಬ ನಾಲ್ಕು ಪ್ರಕಾರಗಳಿಂದ ವಿಂಗಡಿಸಿರುತ್ತಾರೆ. ಆತ್ಮವಿದ್ಯೆಕ್ಕೆ "ಅನ್ವೀಕ್ಷಕಿ"ಯೆಂದು ಹೆಸರು. ಯಾಗಾದಿ ಕರ್ಮಗಳನ್ನು ತಿಳಿಸುವ ವಿದ್ಯೆಕ್ಕೆ "ತ್ರಯೀ" ಎಂದು ಹೆಸರು ಕೃಷಿ, ವಣಿಜ್ಯ, ಶಿಲ್ಪಾದಿಗ ಳನ್ನು ತಿಳಿಸುವ ವಿದ್ಯೆಕ್ಕೆ "ವಾರ್ತಾ" ಎಂದು ಹೆಸರು. ರಾಜ್ಯಶಾಸ್ತ್ರ ವನ್ನು ತಿಳಿಸುವ ವಿದ್ಯೆಕ್ಕೆ "ದಂಡನೀತಿ" ಎಂದು ಹೆಸರು.

ವೈಶೇಷಿಕ ದರ್ಶನದಲ್ಲಿ—ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ; ಎಂಬ ಸಪ್ತ ಪದಾರ್ಥಗಳು. ನ್ಯಾಯ ದರ್ಶನದಲ್ಲಿ—ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡಾ, ಹೇತ್ವಾಭಾಸ, ಛಲ, ಜಾತಿ, ನಿಗ್ರಹಸ್ಥಾನ; ಎಂಬ ಹದಿನಾರು ಪದಾರ್ಥಗಳು. ಈ ವಿಭಾಗಗಳು ಆತ್ಮಾನಾತ್ಮವಿವೇಕಕ್ಕೆ ಬೇಕಾದ ಪದಾರ್ಥಸಂಗ್ರಹಗಳಾದ್ದರಿಂದ, ನ್ಯಾಯಶಾಸ್ತ್ರ, ಆತ್ಮಶಾಸ್ತ್ರವೆಂದು ಕರೆಸಿ ಕೊಂಡಿದೆ

ನ್ಯಾಯಶಾಸ್ತ್ರವು ಬೌದ್ಧದರ್ಶನದಂತೆ ಅಸತ್ಪಕ್ಷದಲ್ಲಿ ನಿಲ್ಲುವದಿಲ್ಲ; ಸಾಂಖ್ಯದರ್ಶನದಂತೆ ಸತ್ಪಕ್ಷದಲ್ಲಿ ನಿಲ್ಲುವದಿಲ್ಲ; ಜೈನದರ್ಶನದಂತೆ ಸದಸತ್ಪಕ್ಷದಲ್ಲಿ ನಿಲ್ಲುವದಿಲ್ಲ. ಅದ್ವೈತದರ್ಶನದಂತೆ ಸದಸದ್ವಿಲಕ್ಷಣ ಪಕ್ಷದಲ್ಲೂ ನಿಲ್ಲುವದಿಲ್ಲ. ಅದು ನಿಲ್ಲುವದು ವ್ಯವಸ್ಥಿತ ಸದಸತ್ಪದಾರ್ಥ ದಲ್ಲಿ ಮಾತ್ರ. ವೇದಶಾಸ್ತ್ರಪ್ರಮಾಣ್ಯವನ್ನು ಸ್ಥಾಪಿಸುವದಕ್ಕೆ ತೀವ್ರ ಯುಕ್ತಿಗಳನ್ನು ಕಲಿಸುವದರಲ್ಲಿ, ಅಥವ ಯುಕ್ತಿಬಲದಿಂದಲೇ ಜಗತ್ತಿಗೆ ಈಶ್ವರನಿದ್ದಾನೆಂದು ಸ್ಥಾಪಿಸುವದರಲ್ಲಿ ನ್ಯಾಯದರ್ಶನವು ಮಹೋಪ ಕಾರಿಯಾಗಿದೆ.

ತರ್ಕದಲ್ಲಿ ಪ್ರಾಚೀನತರ್ಕ ನವೀನತರ್ಕಗಳೆಂಬ ಎರಡು ಭಾಗ ಗಳಿವೆ ಪ್ರಾಚೀನ ತರ್ಕದಲ್ಲಿ ಆತ್ಮಾನಾತ್ಮವಿಚಾರ, ವೈರಾಗ್ಯ, ಮೋಕ್ಷ ಮತ್ತು ಅದರ ಸಾಧನೋಪಾಯಗಳ ವಿವರವಿರುವದರಿಂದ ಒಟ್ಟು ತರ್ಕ ಶಾಸ್ತ್ರಕ್ಕೆ ದರ್ಶನಶಾಸ್ತ್ರವೆಂಬ ಗೌರವ ಪ್ರಾಪ್ತವಾಗಿದೆ ವೈದಿಕರು (ಮೀಮಾಂಸಕರು) ಯುಕ್ತಿಯಿಂದ ಪ್ರಾಪ್ತವಾಗುವ ಆತ್ಮಜ್ಞಾನವನ್ನು ವೇದಾಂತಶಾಸ್ತ್ರದಿಂದ ಸ್ಥಿರಪಡಿಸಿಕೊಳ್ಳಬೇಕೆಂದು ಹೇಳುತ್ತಾರೆ. ನೈಯ್ಯಾಯಿಕರು ಶ್ರುತ್ಯಕ್ಷದಿಂದ ಸಿದ್ಧವಾಗುವ ಆತ್ಮಜ್ಞಾನವನ್ನು ಯುಕ್ತಿ ಗಳಿಂದ ನಿಸ್ಸಂದೇಹವಾಗುವಂತೆ ಸಮರ್ಥನಮಾಡಬೇಕೆಂದು ಹೇಳು ತ್ತಾರೆ.

ಬುದ್ಧಿವಂತರು ಯುಕ್ತಿಗೆ ಪ್ರತಿಯುಕ್ತಿಗಳನ್ನು ಯೋಜನೆಮಾಡುತ್ತ ಕುಳಿತರೆ ಅವ್ಯವಸ್ಥೆ ಹುಟ್ಟುವ ಕಾರಣ. ಶಾಸ್ತ್ರದಿಂದಲೇ ಬ್ರಹ್ಮಸ್ವರೂಪವನ್ನು ತಿಳಿಯುಬೇಕೆಂದು ವೈದಿಕರು ವಾದಿಸುತ್ತಾರೆ. ಶಾಸ್ತ್ರಕ್ಕೆ ಅನುಕೂಲವಾದ ತರ್ಕ ಸತ್ತರ್ಕವೆಂತಲೂ, ಪ್ರತಿಕೂಲವಾದ ತರ್ಕ ದುಸ್ತರ್ಕವೆಂತಲೂ, ಬಲಿಷ್ಠವಾದ ಅಭಿಪ್ರಾಯ ವೈದಿಕರಲ್ಲಿದೆ.

ನೈಯ್ಯಾಯಿಕರಈಶ್ವರ ಸ್ವರೂಪದ ಸಾರಾಂಶವನ್ನು ಹೇಳಬೇಕೆಂದರೆ ಅದು ಹೀಗಿದೆ:—

೧. ಈಶ್ವರನು ಸಕಲ ಕಾರ್ಯಕ್ಕೂ ಸಾಮಾನ್ಯಕಾರಣನಾಗಿರುತ್ತಾನೆ. ೨. ಅಧರ್ಮ, ಮಿಥ್ಯಾಜ್ಞಾನಗಳಿಲ್ಲದ ಧರ್ಮಜ್ಞಾನ ಸಮಾಧಿಗಳಿಂದ ಕೂಡಿದವನು ಈಶ್ವರನು. ೩. ಅವನು ಅಣಿಮಾದಿ ಅಷ್ಟೈಶ್ವರ್ಯಗಳುಳ್ಳವನು. ೪. ಅವನ ಧರ್ಮಸಂಕಲ್ಪಮಾತ್ರದಿಂದ ಸಿದ್ಧಿಸುವಂಥಾದ್ದು. ೫. ಪ್ರತಿ ಆತ್ಮಗಳಲ್ಲಿ ಧರ್ಮಾಧರ್ಮಗಳನ್ನು ಪ್ರೇರಿಸುವವನು ಈಶ್ವರನು. ೬. ಸಕಲ ಪ್ರಾಣಿಗಳಿಗೂ ತಂದೆಯಂತಿರುವವನು ಈಶ್ವರನು. ೭. ಈಶ್ವರನಿಗೆ ಶರೀರವಿಲ್ಲ, ಬುದ್ಧಿಯಿಲ್ಲ, ಸೃಷ್ಟಿಸಾಮರ್ಥ್ಯವಿಲ್ಲ; ಎಂದು ನಿರಾಕರಿಸುವ ಮತಗಳು ನಿರಾಧಾರವಾದವುಗಳು. ೮. ಸೃಷ್ಟಿಯಾಗಿರುವ ಪ್ರಪಂಚಕ್ಕೆ ಜ್ಞಾನ, ಇಚ್ಛಾ, ಶಕ್ತಿ, ಪ್ರಯತ್ನಗಳುಳ್ಳ ಕರ್ತನೊಬ್ಬನಿರಬೇಕು. ೯. ಅನೇಕ ಕರ್ತರನ್ನು ಅಂಗೀಕರಿಸುವದಕ್ಕಿಂತ ಈಶ್ವರನೆಂಬ ಒಬ್ಬ ಕರ್ತೃವನ್ನು ಅಂಗೀಕರಿಸುವದು ಮೇಲು. ೧೦. ಸೃಷ್ಟಿಸಾಮರ್ಥ್ಯವು ಈಶ್ವರನ ಧರ್ಮದ ಫಲ. ೧೧. ಜೀವನಿಗೆ ಭ್ರಾಂತಿಯಿಂದ ಬಂಧನವೂ, ತತ್ವಜ್ಞಾನದಿಂದ ಬಂಧನ ನಿವೃತ್ತಿಯೂ, ಸಿದ್ಧವಾಗಿರುವಾಗ ಈಶ್ವರಾನುಗ್ರಹದ ಪ್ರಶ್ನೆ ಹುಟ್ಟುವದಿಲ್ಲ. ಅಂತೆಯೇ ನಿಗ್ರಹ ಮಾಡುವನೆಂಬ ಪ್ರಶ್ನೆಗೆ ಸ್ಥಳವಿರುವದಿಲ್ಲ. ಇತ್ಯಾದಿ.

ನೈಯ್ಯಾಯಿಕರ ಜೀವನು—ದ್ರಷ್ಟಾ, ಭೋಕ್ತಾ ಮತ್ತು ಜ್ಞಾತಾ ಆಗಿರುತ್ತಾನೆ. ಜೀವನಿಗೆ ಭೋಗಕ್ಕೆ ಆಶ್ರಯಸ್ಥಾನ ಶರೀರ. ಇಂದ್ರಿಯಗಳು ಅದರ ಸಾಧನೆಗಳು. ವಿಷಯಗಳು, ಅರ್ಥಗಳು; ಬುದ್ಧಿಯು ಭೋಗ. ಶರೀರ, ಇಂದ್ರಿಯ, ಅರ್ಥ, ಬುದಿ ಸುಖವೇದನೆಗಳಿಗೆ ಉತ್ಪತ್ತಿ

ಸ್ಥಾನವಾದದ್ದು ಮನಸ್ಸು. ಪ್ರವೃತ್ತಿಯಿಂದ ಪುಣ್ಯಪಾಪಗಳು. ರಾಗ ದ್ವೇಷಗಳು ದೋಷಗಳು. ಹಿಂದೆ ಬಂದ ಶರೀರಗಳಿಗೆ ಮಿತಿಯಿಲ್ಲ. ಸದಾ ದುಃಖಭಾವನೆಯಿಂದ ಅವನಿಗೆ ವೈರಾಗ್ಯಪ್ರಾಪ್ತಿಯಾಗಬೇಕು. ವೈರಾಗ್ಯ ದಿಂದ ಜನ್ಮಪರಂಪರೆ ತಪ್ಪಿ ಮೋಕ್ಷವಾಗಬೇಕು. ಮೋಕ್ಷಕ್ಕೆ ಹೇತು ವಾದದ್ದು ತತ್ವಜಾನ.

ತಾರ್ಕಿಕ ದರ್ಶನದಲ್ಲಿ ಸಕಲ ದುಃಖಗಳಿಗೆ ಮಿಥ್ಯಾಜ್ಞಾನವು ಕಾರಣವೆನ್ನುತ್ತಾರೆ. ಮಿಥ್ಯಾಜ್ಞಾನ ಒಂದು ಬಗೆಯದಲ್ಲ. ಆತ್ಮನೆಂಬ ವಸ್ತುವಿಲ್ಲವೆನ್ನುವುದು; ಭೂತಸಂಸರ್ಗದಿಂದುಂಟಾದ ದೇಹವನ್ನು ಆತ್ಮ ವೆನ್ನುವದು ; ಅನಿತ್ಯವಾದುದನ್ನು ನಿತ್ಯವೆನ್ನುವದು ; ನಿಂದ್ಯವಾದುದನ್ನು ಅನಿಂದ್ಯವೆಂದು ತಿಳಿಯುವದು ; ಬಿಡಬೇಕಾದುದನ್ನು ಬಿಡಬಾರದೆನ್ನು ವದು ; ಕರ್ಮವಿಲ್ಲ, ಪಾಪವಿಲ್ಲ, ಪುಣ್ಯವಿಲ್ಲ, ಇವುಗಳಿಗೆ ಫಲವಿಲ್ಲ, ಸಂಸಾರವೇ ಶಾಶ್ವಿತ, ಎನ್ನುವದು ; ಆತ್ಮನ ಆತ್ಯಂತಿಕ ನಾಶವೇ ಮೋಕ್ಷ ವೆನ್ನುವದು ; ಜನ್ಮಾಂತರಗಳಿಲ್ಲವೆನ್ನುವದು ; ಈ ಎಲ್ಲ ಭ್ರಾಂತಿಗಳು ಮಿಥ್ಯಾಜ್ಞಾನದ ನಿರೂಪಣೆಯಾಗಿರುವದು.

ನೈಯ್ಯಾಯಿಕರು ಸರ್ವದುಃಖ ನಿವೃತ್ತಿಯನ್ನು ಮೋಕ್ಷವೆಂದು ಕರೆಯುತ್ತಾರೆ. ಜ್ಞಾನಪೂರ್ವಕವಾಗಿ ಫಲಾಭಿಸಂಧಿಯಿಲ್ಲದೆ ಮಾಡಿದ ಧರ್ಮಾಚರಣೆಗೆ, ಸದ್ಗುರುವಿನ ಅನುಗ್ರಹದಿಂದ ತತ್ವಜ್ಞಾನವುಂಟಾಗು ತ್ತದೆ. ಅಜ್ಞಾನ ನಿವೃತ್ತಿದ್ವಾರಾ ವೈರಾಗ್ಯದಿಂದ ರಾಗದ್ವೇಷಗಳು ನಿರ್ಮೂಲವಾಗುತ್ತವೆ. ಪ್ರಾಚೀನ ಸಂಚಿತ ಧರ್ಮಾಧರ್ಮಗಳ ನಿವೃತ್ತಿ ಯಾಗಿ ಆದರಿಂದ ಪರಮಾತ್ಮ ದರ್ಶನ ಸುಖಾನುಭವದ ಲಾಭವಾಗು ತ್ತದೆ. ಆದರಿಂದಲೂ ವಿರಕ್ತನಾದ ಆತ್ಮನಿಗೆ ಪುನರ್ಜನ್ಮವಿಲ್ಲದ ಸರ್ವ ದುಃಖನಿವೃತ್ತಿರೂಪವಾದ ಮೋಕ್ಷ ದೊರೆಯುತ್ತದೆ. ಮೋಕ್ಷದಲ್ಲಿ ಜೀವಾತ್ಮನು ತನಗೆ ಸ್ವಾಭಾವಿಕವಾದ ವಿಭುತ್ವ, ನಿತ್ಯತ್ವ, ನಿರವಯವತ್ವ, ನಾನಾತ್ವ, ಮೊದಲಾದ ಧರ್ಮಗಳಿಂದ ಶಾಶ್ವಿತನಾಗಿರುತ್ತಾನೆ.

ನೈಯಾಯಿಕ ದರ್ಶನದಂತೆ ವೇದವು ಈಶ್ವರಕೃತವಾದದ್ದು.

ಮೀಮಾಂಸಾದರ್ಶನ

ಮೀಮಾಂಸಾದರ್ಶನವು ಪೂರ್ವಮೀಮಾಂಸಾ,ಉತ್ತರಮೀಮಾಂಸಾ ಎಂಬ ಎರಡು ಭಾಗಗಳಿಂದ ಕೂಡಿದೆ. ನ್ಯಾಯದರ್ಶನವು ಯುಕ್ತಿಶಾಸ್ತ್ರವಾಗಿರುವಂತೆ, ಮೀಮಾಂಸಾದರ್ಶನವು ಪರೀಕ್ಷಾಶಾಸ್ತ್ರವಾಗಿದೆ. ವೇದಾರ್ಥವಿಚಾರಕ್ಕೆ "ಮೀಮಾಂಸಾ" ಎಂದು ಹೆಸರು. ಅನ್ಯದರ್ಶನಗಳಲ್ಲಿ ತನಗೆ ಅಸಂಗತಗಳೆಂದು ಕಂಡುಬರುವ ಸಂಗತಿಗಳನ್ನು ಪರೀಕ್ಷಿಸಿ, ಮೀಮಾಂಸವು ನಿರಾಕರಿಸುತ್ತದೆ. ವೇದಗಳಲ್ಲಿ ಕಂಡುಬರದ ಪುರುಷಾರ್ಥಗಳನ್ನು ಮೀಮಾಂಸವು ತಾನು ನಿರೂಪಿಸುತ್ತದೆ. ಧರ್ಮಾರ್ಥ ಕಾಮಗಳನ್ನು ತ್ರಿವರ್ಗವೆಂತಲೂ, ಮೋಕ್ಷವನ್ನು ಅಪವರ್ಗವೆಂತಲೂ, ವರ್ಗೀಕರಿಸಿದೆ. ಚತುರ್ವಿಧಪುರುಷಾರ್ಥಗಳಲ್ಲಿ—ಧರ್ಮಕ್ಕೆ ಜೈಮಿನಿ, ಅರ್ಥಕ್ಕೆ ಚಾಣಿಕ್ಯ, ಕಾಮಕ್ಕೆ ವಾತ್ಸ್ಯಾಯನ, ಮೋಕ್ಷಕ್ಕೆ ಬಾದರಾಯಣರು, ಕ್ರಮವಾಗಿ ಸೂತ್ರಕರ್ತರಾಗಿದ್ದಾರೆ. ಇವರೆಲ್ಲರೂ ತಮ್ಮಕಾಲಕ್ಕೆ ಹಿಂದಿದ್ದ ಸೂತ್ರ ಗ್ರಂಥಗಳನ್ನು ಪರಿಶೀಲಿಸಿ ತಮ್ಮದೇ ಆದ ಸೂತ್ರಗಳನ್ನು ರಚಿಸಿರುತ್ತಾರೆ. ಪೂರ್ವಮೀಮಾಂಸವು ಧರ್ಮಜಿಜ್ಞಾಸವಾದರೆ, ಉತ್ತರಮೀಮಾಂಸವು ಬ್ರಹ್ಮಜಿಜ್ಞಾಸವಾಗಿದೆ.

ಪೂರ್ವಮೀಮಾಂಸ

ಪೂರ್ವಮೀಮಾಂಸವನ್ನು ವಿಶೇಷದೃಷ್ಟಿಯಿಂದ ವೈದಿಕದರ್ಶನವೆಂದು ಕರೆದಿದ್ದಾರೆ. ಪೂವ ಮೀಮಾಂಸಕರು ವೈದಿಕರಾದರೆ, ಉತ್ತರ-ಮೀಮಾಂಸಕರು ಔಪನಿಷದರೆನಿಸಿಕೊಳ್ಳುತ್ತಾರೆ. ಜೈಮಿನಿಯ ಕಾಲದಿಂದ ಬಂದ ಪ್ರಭಾಕರ, ಶಬರ, ಕುಮಾರಿಲಭಟ್ಟ, ಇವರೆಲ್ಲರೂ ಅಭಿಪ್ರಾಯ ಭೇದಗಳುಳ್ಳವರಾಗಿ ದರ್ಶನವನ್ನು ಬೆಳೆಸಿದ್ದಾರೆ. ಅಭಿಪ್ರಾಯಭೇದಗಳು ತತ್ವನಿಶ್ಚಯಕ್ಕೆ ಸಹಕಾರಿಗಳಾದ್ದರಿಂದ ದರ್ಶನಗಳು ಬೆಳೆದು ಬಾಳುತ್ತವೆ. ಎಲ್ಲ ದರ್ಶನಗಳ ಪರಿಸ್ಥಿತಿ ಹೀಗೇ ಇದೆ. ಆಧುನಿಕ ವಿಜ್ಞಾನದಲ್ಲೂ ಹೀಗೆ ಇದ್ದುದರಿಂದ ವಿಜ್ಞಾನ ಬೆಳೆದಿದೆ. ಪೂರ್ವಮೀಮಾಂಸದಲ್ಲಿ ಅದು ಹೇರಳವಾಗಿದೆ. ಸೂತ್ರಗಳಿಗೆ ವ್ಯಾಖ್ಯಾನ ಬರೆದಿರುವವರಲ್ಲಿ ಒಮ್ಮತವಿಲ್ಲ. ವಾರ್ತಿಕಗ್ರಂಥಗಳನ್ನು ಬರೆದಿರುವವರು—ಮೂಲಗ್ರಂಥಕಾರರು ಬರೆಯದೆ

ಬಿಟ್ಟಿರುವದು, ತಪ್ಪುಬರೆದಿರುವದು, ಬರೆದುದನ್ನೇ ಮತ್ತೆ ಬರೆದಿರುವದು, ಇವನ್ನೆಲ್ಲಾ ಪರಿಷ್ಕರಿಸಿ ಮತ್ತೆ ಬರೆದಿರುವೆವೆಂದು ಪ್ರತಿಜ್ಞೆಮಾಡಿರುತ್ತಾರೆ.

ಪೂರ್ವಮೀಮಾಂಸಕರಿಗೆ—ವೇದಗಳು ಪ್ರಮಾಣ; ವೇದಗಳು ಅಪೌರುಷೇಯ; ವೇದೋಕ್ತ ಕರ್ಮಗಳನ್ನಾಚರಿಸುವದು ಪರಮಧರ್ಮ. ಜಗತ್ತಿಗೆ ಸೃಷ್ಟಿಪ್ರಳಯಗಳಿಲ್ಲ. ಆತ್ಮಗಳು ಅನಂತ. ವೇದೋಕ್ತ-ಕರ್ಮಗಳು ಫಲವನ್ನು ಕೊಡುವ ಕಾರಣ ಈಶ್ವರನ ಪ್ರಸ್ತಾಪವಿಲ್ಲ. ಆತ್ಯಂತಿಕಮೋಕ್ಷವೆಂಬುವದಿಲ್ಲ. ಇವರಿಗೆ ಉಪನಿಷತ್ತುಗಳು ವೇದದ ಬಂಜರು ಪ್ರದೇಶ. ಆತ್ಮನಿಗೆ ಸರ್ವಸೌಖ್ಯವನ್ನೂ ಐಶ್ವರ್ಯವನ್ನೂ ಶಕ್ತಿಯನ್ನೂ ಯಜ್ಞಾದಿಕರ್ಮಗಳು ಕೊಡುವವು. ಆತ್ಮನು ಸ್ವಸಂವೇದ್ಯ, ಸ್ವಪ್ರಕಾಶ, ಜ್ಞಾನಿ.

ಮೂಲದರ್ಶನದ ಅಭಿಪ್ರಾಯ ಹೀಗಿದ್ದರೂ ಕುಮಾರಿಲ ಪ್ರಭಾಕರಾದಿ ಶಾಸ್ತ್ರಪ್ರವರ್ತಕರು ಮೀಮಾಂಸಾದರ್ಶನವು ಚಾರ್ವಾಕದರ್ಶನದಂತೆ ನಾಸ್ತಿಕದರ್ಶನವಾದೀತೆಂದು ಶಂಕಿಸಿ, ಈಶ್ವರನನ್ನು ಅಂಗೀಕರಿಸಿ, ಮೋಕ್ಷವನ್ನೂ ನಿರೂಪಿಸಿರುತ್ತಾರೆ. ಇವರ ಮೋಕ್ಷ, ಮೋಕ್ಷಸಾಧನಕರ್ಮಗಳು, ಬಹುಮಟ್ಟಿಗೆ ತಾರ್ಕಿಕಮತದಂತಿವೆ. ಇಷ್ಟಾದರೂ ವೇದಾಂತಿಗಳು ಜೈಮಿನಿ, ಶಬರ, ಪ್ರಭಾಕರ, ಕುಮಾರಿಲರನ್ನು ನಿರೀಶ್ವರವಾದಿಗಳೆಂದೇ ತಿಳಿದಿದ್ದಾರೆ. ವೇದಪ್ರಾಮಾಣ್ಯ ಸಿದ್ಧಿಸಿದರೆ ಈಶ್ವರಸಿದ್ಧಿ ತಾನೇ ಆಗುವದಿದ್ದರೂ, ಇವರ ಗ್ರಂಥಗಳಲ್ಲಿ ಈಶ್ವರನಿರಾಕರಣೆಯಿರುವದು, ಇವರಿಗೆ ಲಾಂಛನಾಸ್ಪದವಾಗಿದೆ.

ಉತ್ತರಮೀಮಾಂಸಾ

ಉತ್ತರಮೀಮಾಂಸವನ್ನು ಉಪನಿಷದ್ದರ್ಶನವೆಂದೂ ವೇದಾಂತದರ್ಶನವೆಂದೂ ಹಿರಿಯರು ಕರೆಯುತ್ತಾರೆ. ವೇದಶಿಖೆಗಳಂತಿರುವ ಉಪನಿಷತ್ತುಗಳನ್ನು ನಾಲ್ಕು ವೇದಗಳಿಂದಲೂ ಆರಿಸಿ ತೆಗೆದಿದ್ದಾರೆ. ಉಪನಿಷತ್ತುಗಳ ಸಂಖ್ಯೆ ನೂರಾರಿದ್ದರೂ ಮತಾಚಾರ್ಯರುಗಳು ಹತ್ತು ಉಪನಿಷತ್ತುಗಳಿಗೆ ಮಾತ್ರ ಭಾಷ್ಯ ಬರೆದು ಭಾಷ್ಯಕಾರರೆನಿಸಿಕೊಂಡಿದ್ದಾರೆ. ಪ್ರಸಿದ್ಧ ಹನ್ನೆರಡು ಉಪನಿಷತ್ತುಗಳಲ್ಲಿ ಐತರೇಯ, ಕೌಷೀತಕಿಗಳು

ಋಗ್ವೇದದಿಂದ ಆರಿಸಿದವು. ಈಶಾವಾಸ್ಯ, ಕಾಠಕ, ಬೃಹದಾರಣ್ಯಕ, ತೈತ್ತಿರೀಯ, ಶ್ವೇತಾಶ್ವತರಗಳು ಯಜುರ್ವೇದದಿಂದ ಆರಿಸಿದವು. ತಲವಕಾರ, ಛಾಂದೋಗ್ಯಗಳು ಸಾಮವೇದದಿಂದ ಆರಿಸಿದವು. ಮಾಂಡೂಕ, ಷಟ್ಪ್ರಶ್ನ ಅಥರ್ವಣಗಳು ಅಥರ್ವಣವೇದದಿಂದ ಆರಿಸಿದವು. ಈ ಪೈಕಿ ಕೌಷೀತಕಿ ಮತ್ತು ಶ್ವೇತಾಶ್ವತರಗಳಿಗೆ ಯಾವ ಆಚಾರ್ಯರೂ ಭಾಷ್ಯಗಳನ್ನು ಬರೆದಿಲ್ಲ. ನೂರೆಂಟು ಉಪನಿಷತ್ತುಗಳಿದ್ದರೂ, ಅವುಗಳಲ್ಲಿ ಅನೇಕವು ಸಂಶಯಾಸ್ಪದವಾಗಿವೆ.

ಉಪನಿಷತ್ತುಗಳಿಂದಲೇ ಸಕಲ ವೇದಗಳ ತಾತ್ಪರ್ಯವನ್ನು ಸಂಗ್ರಹಿಸಬೇಕೆಂದರೆ ಹತ್ತೂ ಹತ್ತು ದಾರಿಯಲ್ಲಿವೆ. ಹೀಗಿರುವುದರಿಂದ ಒಬ್ಬೊಬ್ಬ ಆಚಾರ್ಯರಿಗೂ ತಮ್ಮ ದರ್ಶನವೇ ಔಪನಿಷದ್ದರ್ಶನವೆಂದು ಹೇಳಿಕೊಳ್ಳಲು ಅವಕಾಶವಾಗಿದೆ. ಹೀಗಿರುವುದನ್ನು ನೋಡಿ ಔಡುಲೋಮಿ, ಆಶ್ಮರಥ್ಯ, ಕಾಶಕೃತ್ಸ್ನ ಮೊದಲಾದವರು ಉಪನಿಷತ್ತುಗಳಿಗೆ ವ್ಯಾಖ್ಯಾನರೂಪವಾದ ಸೂತ್ರಗ್ರಂಥಗಳನ್ನು ಬರೆದಿದ್ದಾರೆ. ಅವೆಲ್ಲವನ್ನೂ ಮತ್ತೆ ವಿಮರ್ಶೆಮಾಡಿ ವೇದವ್ಯಾಸರು ಬ್ರಹ್ಮಸೂತ್ರಗಳನ್ನು ಬರೆದಿದ್ದಾರೆ ಜೈಮಿನಿಸೂತ್ರಕ್ಕೆ ಪೂರ್ವಮೀಮಾಂಸೆಯೆಂದು ಪ್ರಸಿದ್ಧಿಯಿದ್ದರೆ ವ್ಯಾಸಸೂತ್ರಕ್ಕೆ ಉತ್ತರಮೀಮಾಂಸೆಯೆಂದು ಪ್ರಸಿದ್ಧಿಯಿದೆ. ಪೂರ್ವಮೀಮಾಂಸಾ ಉತ್ತರಮೀಮಾಂಸಾ ಸೂತ್ರಗಳಿಗೆ, ಉಪವರ್ಷಾಚಾರ್ಯರು ವೃತ್ತಿಗ್ರಂಥಗಳನ್ನು ರಚಿಸಿ, ಕರ್ಮಕ್ಕೂ ಜ್ಞಾನಕ್ಕೂ ಪರಸ್ಪರ ಸಂಬಂಧವನ್ನುಂಟುಮಾಡಿ, ಕರ್ಮದಿಂದ ಅನಿಷ್ಟನಿವೃತ್ತಿ, ಜ್ಞಾನದಿಂದ ಇಷ್ಟಪ್ರಾಪ್ತಿಯೆಂಬುದನ್ನು ಸಮರ್ಥನಮಾಡಿದ್ದಾರೆ. ಇವರ ಅಭಿಪ್ರಾಯದಂತೆ ವೇದಗಳು ಕರ್ಮಕಾಂಡ, ಜ್ಞಾನಕಾಂಡಗಳೆಂಬ ವಿಭಾಗಗಳಿಗೊಳಗಾಗಿವೆ. ಉತ್ತರಮೀಮಾಂಸಾಶಾಸ್ತ್ರಕ್ಕೆ ಶಾರೀರಕಮೀಮಾಂಸಾ ಎಂದು ಮತ್ತೊಂದು ಹೆಸರು. ಶಾರೀರಕಮೀಮಾಂಸವೆಂದರೆ ಶರೀರಸ್ಥ ಆತ್ಮ ವಿಚಾರವೆಂದು ಅರ್ಥ.

ಒಟ್ಟಿನಲ್ಲಿ ಸಕಲವೇದಸಾರಗಳೆನಿಸಿರುವ ದಶೋಪನಿಷತ್ತುಗಳು, ವೇದಾರ್ಥಬೋಧಕಗಳಾದ ಬ್ರಹ್ಮಸೂತ್ರಗಳು, ಇತಿಹಾಸ ಸ್ವರೂಪದಿಂದ

ವೇದಾಂತಬೋಧಕವಾದ ಪ್ರಶ್ನೋತ್ತರ ರೂಪವಾಗಿರುವ ಭಗವದ್ಗೀತೆ; ಈ ಮೂರೂ ಪ್ರಸ್ಥಾನತ್ರಯಗಳೆನಿಸಿ ಉತ್ತರಮೀಮಾಂಸಾದರ್ಶನಕ್ಕೆ ಪಠ್ಯಪುಸ್ತಕಗಳಂತಿವೆ. ಈ ಪ್ರಸ್ಥಾನತ್ರಯಗಳನ್ನು ಭಾಷ್ಯಮಾಡಿ ತಿಳಿಸಲು ಒಬ್ಬರಾಗುತ್ತಲೊಬ್ಬರು ಆಚಾರ್ಯಪುರುಷರು ಬಂದಿದ್ದಾರೆ. ವ್ಯಾಸಜೈಮಿನಿಗಳಿಗಿಂತ ಹಿಂದಿದ್ದ ದರ್ಶನಕಾರರ ಸಂಖ್ಯೆ ಬಹಳ. ಅವರ ಗ್ರಂಥಗಳೆಲ್ಲಾ ಬಹುಮಟ್ಟಿಗೆ ಲುಪ್ತವಾಗಿರುವಕಾರಣ, ವ್ಯಾಸಜೈಮಿನಿಗಳ ಸೂತ್ರಗ್ರಂಥಗಳು ಈ ಕಾಲದಲ್ಲಿ ಪ್ರಧಾನ ಸ್ಥಾನದಲ್ಲಿವೆ. ಐದು ಸಾವಿರ ವರ್ಷಗಳ ಹಿಂದೆ ಇದ್ದ ವ್ಯಾಸಜೈಮಿನಿಗಳ ಪೂರ್ವೀಕರ ಕಾಲನಿರ್ಣಯಕ್ಕೆ ಮತ್ತೆಷ್ಟು ಹಿಂದೆ ಹೋಗಬೇಕೋ ಅದು ಗೊತ್ತಾಗುವಂತಿಲ್ಲ. ಕಾಲವನ್ನು ಹಿಂದಕ್ಕೆ ತಳ್ಳಿ ಯಥಾರ್ಥವನ್ನು ಹೇಳಿದರೆ, ಆಧುನಿಕಕಾಲಶಾಸ್ತ್ರಿಗಳಿಗೆ ಒಪ್ಪಿತವಾಗುವದಿಲ್ಲ. ಕಾಲ ಅನಂತವಾಗಿರುವದರಿಂದ ಅದರ ಜಿಜ್ಞಾಸ ನಮಗೆ ಬೇಡ. ಬ್ರಹ್ಮ ಜಿಜ್ಞಾಸೆಯನ್ನು ಮಾಡೋಣ! ಇದು ಮೀಮಾಂಸೆ.

ಅದ್ವೈತದರ್ಶನ

ದರ್ಶನಗಳಲ್ಲಿ ಬೌದ್ಧಸಾಂಖ್ಯದರ್ಶನಗಳು ಪ್ರತಿವಿಷಯದಲ್ಲಿ ಕಕ್ಷಿಪ್ರತಿಕಕ್ಷಿಗಳಂತಿವೆ. ಆರ್ಹದ್ದರ್ಶನವು ಉಭಯಪಕ್ಷಗಳ ವಿರೋಧವನ್ನು ಪರಿಹರಿಸಿ ಅನೇಕಾಂತವಾದವಾಗಿ ಮಧ್ಯಸ್ಥಮಾರ್ಗದಲ್ಲಿದೆ. ಪತಂಜಲಿ, ಕುಮಾರಿಲ, ಭರ್ತೃಪ್ರಪಂಚ, ಭಾಸ್ಕರ, ಯಾದವಪ್ರಕಾಶ, ಮೊದಲಾದವರು ಅರ್ಹತರಂತೆ ಒಂದೊಂದು ವಿಷಯದಲ್ಲೂ ಮಧ್ಯಸ್ಥಮಾರ್ಗದಲ್ಲಿದ್ದಾರೆ. ನ್ಯಾಯ ವೈಶೇಷಿಕದರ್ಶನವು ವ್ಯವಸ್ಥಿತ ಮಧ್ಯಸ್ಥ ಸ್ಥಾನದಲ್ಲಿದೆ. ಹಿಂದೆ ಬರೆದಿರುವಂತೆ ಸತ್ತೂ ಉಂಟು, ಅಸತ್ತೂ ಉಂಟು; ನಿತ್ಯವೂ ಉಂಟು, ಅನಿತ್ಯವೂ ಉಂಟು; ಕ್ಷಣಿಕವೂ ಉಂಟು, ಸ್ಥಿರವೂ ಉಂಟು; ಆದರೆ ಒಂದೇ ವಸ್ತು ಸದಸದ್ರೂಪವಾಗಿರಲಾರದು, ಇತ್ಯಾದಿ. ಈ ಮಾರ್ಗವು ವ್ಯವಸ್ಥಿತ ಮಧ್ಯಸ್ಥಮಾರ್ಗ. ಇವರೆಲ್ಲರ ಮಾರ್ಗವನ್ನನುಸರಿಸಿ ಶಂಕರಾಚಾರ್ಯರು ಒಂದು ಪ್ರಕಾರದ ಮಧ್ಯಸ್ಥಮಾರ್ಗದಲ್ಲಿರುವರೆಂದು ದರ್ಶನಸ್ವರೂಪದಿಂದ ಗೊತ್ತಾಗುತ್ತದೆ.

ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮನುಷ್ಯಜೀವಮಾನದ ಅವಸ್ಥಾತ್ರಯಗಳನ್ನು ನೋಡಿ—ವ್ಯವಹಾರಾವಸ್ಥಾ, ವಿಚಾರಾವಸ್ಥಾ, ವಿಜ್ಞಾನಾವಸ್ಥಾ, ಎಂಬ ಸರಣಿಯನ್ನು ಹಿಡಿದು ತತ್ವವಿಮರ್ಶೆ ಮಾಡಲು ಈ ದರ್ಶನಕಾರರು ಹೊರಟಿದ್ದಾರೆ ಜಾಗ್ರದವಸ್ಥೆಯದು ವ್ಯವಹಾರ ಮಾರ್ಗ, ವ್ಯವಹಾರಮಾರ್ಗದಲ್ಲಿ—ಪುಣ್ಯ, ಪಾಪ, ಸ್ವರ್ಗ, ನರಕ; ಕರ್ಮ, ಜ್ಞಾನ; ಈಶ್ವರ, ಐಶ್ವರ್ಯ; ನಿಯಮ್ಯ, ನಿಯಾಮಕ; ಸೃಷ್ಟಿ, ಲಯ; ಭ್ರಮೆ, ಪ್ರಮೆ; ಸುಖ, ದುಃಖ; ಗುರು, ಶಿಷ್ಯ; ಬಂಧ, ಮೋಕ್ಷ; ಇವೆಲ್ಲವನ್ನೂ ಅನ್ಯ ತಾರ್ಕಿಕ ಮೀಮಾಂಸಾ ದರ್ಶನಕಾರರಂತೆ ಅಂಗೀಕರಿಸಿರುತ್ತಾರೆ. ಈ ಮಾರ್ಗ ಪ್ರತ್ಯಕ್ಷ ಮೊದಲಾದ ಸಕಲ ಪ್ರಮಾಣ ಗಳಿಗೂ ವಿರೋಧವಿಲ್ಲದ ಮಾರ್ಗ. ಇದು ಪ್ರಥಮ ಸೋಪಾನ. ಈ ಮಾರ್ಗದಲ್ಲಿದ್ದು ವೈರಾಗ್ಯ ವಿವೇಕ ಚಿತ್ತಶುದ್ಧಿಗಳುಂಟಾದಮೇಲೆ ಎರಡ ನೆಯದಾದ ವಿಚಾರಮಾರ್ಗವೆಂಬ ವಿವರ್ತಮಾರ್ಗಕ್ಕೆ ಸಾಧಕನು ಅರ್ಹ ನಾಗುತ್ತಾನೆ. ಈ ಮಾರ್ಗದಲ್ಲಿ ಕಾಲಿಟ್ಟವನಿಗೆ ಹಿಂದೆ ಹೇಳಿದುದೆಲ್ಲವೂ ಅನಿರ್ವಚನೀಯ, ಮಿಥ್ಯಾ, ಅವಿದ್ಯೆ, ಮಾಯೆ, ದುಃಖಾತ್ಮಕ, ನಶ್ವರ, ಅಸಾರಗಳೆನಿಸುತ್ತವೆ. ಸಾಂಖ್ಯರು ಹೇಳುವಂತೆ ಸತ್ತಾಗುವುದಿಲ್ಲ. ಬೌದ್ಧರು ಹೇಳುವಂತೆ ಅಸತ್ತಾಗುವುದಿಲ್ಲ. ಅರ್ಹತರು ಹೇಳುವಂತೆ ಸದಸತ್ತಾಗುವುದಿಲ್ಲ. ಆದಾಗುವವೆಂದರೆ ಸದಸದ್ವಿಲಕ್ಷಣ.

ಈ ಮನಸ್ಸಿನ ಮಟ್ಟದಲ್ಲಿ ಪ್ರಪಂಚವನ್ನು ಅವಲೋಕಿಸಿ ಸ್ವಾಪ್ನ ಪ್ರಪಂಚವನ್ನು ದೃಷ್ಟಾಂತವಾಗಿಟ್ಟುಕೊಂಡು, ಜಾಗ್ರದ್ದೆಸೆಯಲ್ಲಿ ನಿಶ್ಶೇಷ ವಿನಾಶವನ್ನು ಉಪದೇಶಿಸುವ ವಿವರ್ತವಾದವಿದು. ಇದು ಮಧ್ಯಸ್ಥ ದೆಸೆಯ ಅದ್ವೈತಮಾರ್ಗ ಈ ಮಟ್ಟಕ್ಕೆ ಮನಸ್ಸನ್ನೇರಿಸುವದು ಬಲು ಕಷ್ಟ. ಆದರೆ ಇದು ಶಂಕರಾಚಾರ್ಯರಿಗೆ ಮಧ್ಯಸ್ಥಮಾರ್ಗ.

ಮಧ್ಯಸ್ಥಮಾರ್ಗದಲ್ಲಿ ಬಹು ಕಾಲ ಸಾಧನೆ ಮಾಡಿದವರು ಸುಷುಪ್ತ್ಯವಸ್ಥಾಸದೃಶವಾದ ಪರಮಾರ್ಥದೆಸೆಗೆ ಅರ್ಹರಾಗುತ್ತಾರೆ. ಇದನ್ನು ಪ್ರತಿಷೇಧವಾದ ಪರಮಾರ್ಥವಾದ ಎಂದು ಕರೆದಿದ್ದಾರೆ ಸುಷುಪ್ತಿ ದೆಸೆಯಲ್ಲಿ ಅಂದರೆ ಗಾಢನಿದ್ರಾವಸ್ಥೆಯಲ್ಲಿ ಜಾಗ್ರತ್ಸ್ವಪ್ನಸ್ಥಿತಿಗಳೆಲ್ಲಾ

ಅದೃಶ್ಯವಾಗಿರುತ್ತವೆ. ಆತ್ಮವ್ಯತಿರಿಕ್ತ ಸರ್ವವೂ ಪ್ರತಿಷಿದ್ಧವಾಗಿರುತ್ತದೆ. ಇದು ಶೂನ್ಯವಾದದಂತೆ ಕಂಡು ಬಂದರೂ ಶೂನ್ಯವಾದವಲ್ಲ. ಶೂನ್ಯವಾದದಲ್ಲಿ ಏನೂ ಇಲ್ಲ ಇಲ್ಲಿ ಬ್ರಹ್ಮಭಾವ ತಾನೇತಾನಾಗಿದೆ. ಈ ಮಾರ್ಗವನ್ನು ಉತ್ತಮಮಾರ್ಗವೆಂದು ಶಂಕರಾಚಾರ್ಯರು ಕರೆದಿದ್ದಾರೆ

ಶಾಂಕರದರ್ಶನವು ಬೌದ್ಧದರ್ಶನಕ್ಕೆ ಪ್ರತಿಪಕ್ಷಿಯಾಗಿದೆ. ಬೌದ್ಧದರ್ಶನವು ನೈರಾತ್ಮ್ಯದರ್ಶನ. ಶಾಂಕರದರ್ಶನವಾದರೋ ಅಧ್ಯಾತ್ಮದರ್ಶನ. ಬೌದ್ಧದರ್ಶನವು ಯಾರೂ ಇಲ್ಲವೆಂದರೆ ಅದ್ವೈತದರ್ಶನವು ಆತ್ಮನಿದ್ದಾನೆ ಎನ್ನುತ್ತದೆ. ನೈರಾತ್ಮ್ಯದರ್ಶನಕ್ಕೂ ಅಧ್ಯಾತ್ಮದರ್ಶನಕ್ಕೂ ಇರುವ ವ್ಯತ್ಯಾಸವಿದು :—

ನಾನು ಇದ್ದೇನೆಂಬ ಭಾವನೆ ಬಂದರೆ ನೀನು ಇದ್ದೀ, ಅವನು ಇದ್ದಾನೆ ಎಂಬ ಭಾವವು ಬರುತ್ತದೆ. ನನಗೆ ಬೇಕು ಬೇಡವೆಂಬ ವಿಷಯದಲ್ಲಿ ಪರಸ್ಪರ ಕಾಮ ಕ್ರೋಧಗಳುಂಟಾಗುತ್ತವೆ ರಾಗ ದ್ವೇಷ ಇರ್ಷ್ಯಾಸೂಯೆಗಳಿಗೆಲ್ಲ ಕಾರಣವಾಗುತ್ತದೆ. ತಾನೇ ಇಲ್ಲದಿದ್ದರೆ ಯಾರಿಂದ ಯಾರಿಗೆ ಭಯ? ಎನ್ನುವದು ನೈರಾತ್ಮ್ಯವಾದ.

ಸಕಲ ಜೀವಾತ್ಮರೂ ಒಂದು, ಜೀವನೇ ಬ್ರಹ್ಮ; ಎಂದು ಸಿದ್ಧಾಂತ ಮಾಡಿರುವದರಿಂದ ಆತ್ಮನಿದ್ದರೂ ಪರನಲ್ಲ; ರಾಗದ್ವೇಷಾದಿಗಳಿಗೆ ಕಾರಣನೇ ಇಲ್ಲ; ತನ್ನಿಂದ ಅನ್ಯನಿದ್ದರೆ ತನಗೆ ಭಯುಬರುತ್ತದೆ; ತನ್ನಿಂದ ಅನ್ಯನಿಲ್ಲದಿರುವಾಗ ಯಾರಿಂದ ಯಾರಿಗೆ ಭಯ? ಎನ್ನುವದು ಅಧ್ಯಾತ್ಮವಾದ.

ಅದ್ವೈತದಲ್ಲಿ ಆತ್ಮ ಅನಾತ್ಮ ಎಂದು ತತ್ವ ಎರಡು ವಿಧ. ಆತ್ಮನೆಂದರೆ—ಬಾಧೆ ನಿವೃತ್ತಿಗಳಿಲ್ಲದ ಪರಬ್ರಹ್ಮನು. ಅವನು ಪರಿಪೂರ್ಣಜ್ಞಾನಾನಂದ ಸ್ವರೂಪನು, ಅಪರೋಕ್ಷ ಸ್ವರೂಪನು, ದೇಶಕಾಲ ಪರಿಚ್ಛಿತಿಯಿಲ್ಲದವನು, ಸತ್ತಾಸ್ವರೂಪನು, ನಿತ್ಯಶುದ್ಧ ಬುದ್ಧಮುಕ್ತ ಸ್ವರೂಪನು, ಇತ್ಯಾದಿ. ಇದಕ್ಕೆ ವ್ಯತಿರಿಕ್ತವಾಗಿರುವವೆಲ್ಲ ಅನಾತ್ಮವು. ಅದು ಅನಿರ್ವಾಚ್ಯವು ಅತ್ಯಂತಾಸತ್ತು,

ಚೈತನ್ಯಸ್ವರೂಪವಾದ ಬ್ರಹ್ಮವು—ಪರಬ್ರಹ್ಮ, ಅಪರಬ್ರಹ್ಮ; ಎಂದು ಎರಡು ವಿಧ. ಪ್ರಪಂಚಕ್ಕೆ ಮೂಲಕಾರಣವಾದ ಮಾಯೆಯೆಂಬ ಅವಿದ್ಯಾವಿಶಿಷ್ಟಬ್ರಹ್ಮನು ಅಪರಬ್ರಹ್ಮನು, ಅವನು ಈಶ್ವರನು, ಸರ್ವಜ್ಞನು, ಸರ್ವಾಂತರ್ಯಾಮಿಯು, ಜಗತ್ಕಾರಣನು. ಆ ಅವಿದ್ಯೆಯೆಂಬ ಮಾಯೋಪಾಧಿವಿಶಿಷ್ಟ ಈಶ್ವರನು ಮಾಯಾಪ್ರಾಧಾನ್ಯ ದೃಷ್ಟಿಯಿಂದ ಜಗತ್ತಿಗೆ ಉಪಾದಾನಕಾರಣನು. ಚೈತನ್ಯಪ್ರಾಧಾನ್ಯದೃಷ್ಟಿಯಿಂದ ನಿಮಿತ್ತಕಾರಣನು.

"ವ್ಯವಹಾರೇ ಭಾಟ್ಟನಯಃ" ಎಂಬಂತೆ ಅದ್ವೈತಿಗಳು ಪ್ರತ್ಯಕ್ಷ ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಅನುಪಲಬ್ಧಿಗಳೆಂಬ ಆರು ಪ್ರಮಾಣಗಳನ್ನಿಟ್ಟುಕೊಂಡಿದ್ದಾರೆ. ಸೃಷ್ಟಿವಿಧಾನವನ್ನು ಸ್ವಲ್ಪ ಹೆಚ್ಚುಕಡಿಮೆ ಇತರ ಭಾಷ್ಯಕಾರರಂತೆ ಅವಿದ್ಯಾ ಕವಚತೊಡಿಸಿ ವರ್ಣಿಸಿದ್ದಾರೆ. ಅವಿದ್ಯೋಪಾಧಿಗ್ರಸ್ತ ಬ್ರಹ್ಮನೇ ಜೀವನಾದ್ದರಿಂದ ಜೀವರೆಲ್ಲಾ ಒಂದಾದುದರಿಂದ ಅದರ ವಿಸ್ತಾರವಿಲ್ಲಿ ಬೇಕಾಗಿಲ್ಲ.

ಸತ್ಯಸ್ಥಿತಿ ಹೀಗಿದ್ದರೂ ಪ್ರಪಂಚದಲ್ಲಿ ಇಷ್ಟೊಂದು ಭೇದ, ಇಷ್ಟೊಂದು ದುಃಖವಿರಲು ಕಾರಣವೇನೆಂದರೆ—ಎಲ್ಲಕ್ಕೂ ಅಜ್ಞಾನವೇ ಕಾರಣ; ತತ್ವಜ್ಞಾನವಿಲ್ಲದಿರುವದೇ ಕಾರಣವೆಂಬುವದು ಉತ್ತರ. ಪ್ರಥಮತಃ ಮಾನವನು ನಿರತಿಶಯವಾದ ಭಕ್ತಿಯಿಂದ ಪರಮೇಶ್ವರ ಪ್ರೀತ್ಯರ್ಥವಾಗಿ ನಿತ್ಯನೈಮಿತ್ತಿಕ ಕರ್ಮಗಳನ್ನಾಚರಿಸಬೇಕು. ಅದರಿಂದ ರಾಗದ್ವೇಷಗಳ ನಿವೃತ್ತಿಯಾಗಿ ಚಿತ್ತಶುದ್ಧಿಯಾಗಬೇಕು. ಶ್ರವಣ ಮನನ ನಿದಿಧ್ಯಾಸಗಳ ಸಹಾಯದಿಂದ ಮಹಾವಾಕ್ಯಗಳ ಉಪದೇಶವನ್ನು ಪಡೆಯಬೇಕು. ನಿತ್ಯಾನಿತ್ಯ ವಸ್ತು ವಿವೇಕ, ಇಹಾಮುತ್ರ ಫಲಭೋಗವಿರಾಗ, ಶಮದಮಾದಿ ಸಾಧನಸಂಪತ್ತು, ಮುಮುಕ್ಷುತ್ವ; ಎಂಬೀ ಸಾಧನ-ಚತುಷ್ಟಯಗಳು ಸಿದ್ಧಿಯಾದವೆಂದರೆ ಬ್ರಹ್ಮಸಾಕ್ಷಾತ್ಕಾರ ಲಭಿಸುವದು ಇದು ಅದ್ವೈತ ದರ್ಶನದ ಸಾರಾಂಶ.

ವಿಶಿಷ್ಟಾದ್ವೈತ ದರ್ಶನ

ವಿಶಿಷ್ಟಾದ್ವೈತದರ್ಶನವು ಸೇಶ್ವರಮೀಮಾಂಸಾದರ್ಶನಕ್ಕೆ ಬಹ್ವಂಶದಲ್ಲಿ ಸಮಾನವಾಗಿದೆ. ಪ್ರಾಚೀನಮೀಮಾಂಸಾದರ್ಶನವು ನಿರೀಶ್ವರ

ದರ್ಶನವೆಂದು ನಿರಾಕರಿಸಲ್ಪಟ್ಟ ಸಂಗತಿಯನ್ನು ಹಿಂದೆ ವಿವರಿಸಿದೆ. ಕುಮಾರಿಲ ಮೊದಲಾದವರು ಅದನ್ನು ಆಸ್ತಿಕ ದರ್ಶನವಾಗುವಂತೆ ಮಾಡಿದರೆಂಬುವದನ್ನು ಸೂಕ್ಷ್ಮವಾಗಿ ತಿಳಿಸಿದೆ ಉಭಯಮೀಮಾಂಸ ಗಳಿಗೆ " ಕೃತಕೋಟಿ " ಯೆಂಬ ವಾರ್ತಿಕಗ್ರಂಥ ಬರೆದ ಉಪವರ್ಷಾ ಚಾರ್ಯರಿಗೆ ಬೋಧಾಯನರೆಂಬ ಮತ್ತೊಂದು ಹೆಸರಿದೆ. ರಾಮಾನುಜಾ ಚಾರ್ಯರು ತಮ್ಮ ಕಾಲಕ್ಕಿಂತ ಅನೇಕ ಶತಮಾನಕಾಲ ಹಿಂದಿದ್ದ ಪೂರ್ವಾಚಾರ್ಯರು ತಮ್ಮ ಗೀರ್ವಾಣ ದ್ರಾವಿಡ ಗ್ರಂಥಗಳಲ್ಲಿ—ಪರಾಶರ, ಬೋಧಾಯನ, ಟಂಕ, ದ್ರಮಿಡ, ಭಾರುಚಿ, ಗುಹದೇವ ಮೊದಲಾದವ ರೆಲ್ಲರ ಸಂಪ್ರದಾಯವು ವಿಶಿಷ್ಟಾದ್ವೈತವಾಗಿತ್ತೆಂದು ಹೇಳಿರುವದಾಗಿ ಪ್ರಮಾಣಸಹಿತವಾಗಿ ತಿಳಿಸುತ್ತಾರೆ. ಶಂಕರಾಚಾರ್ಯರು ಛಾಂದೋಗ್ಯ ಭಾಷ್ಯದಲ್ಲಿ ವಿಶಿಷ್ಟಾದ್ವೈತದ ಖಂಡನೆಮಾಡಿರುವದರಿಂದ ಈ ದರ್ಶನವು ಇತರ ದರ್ಶನಗಳಂತೆ ಪ್ರವಾಹತಃ ನಿತ್ಯವಾಗಿರುವದು ಎಂಬುದರ ಸಮರ್ಥ ನೆಯಾಗುತ್ತದೆ.

ವಿಶಿಷ್ಟಾದ್ವೈತದರ್ಶನವು ಅದ್ವೈತದರ್ಶನಕ್ಕೆ ಒಂದೊಂದು ವಿಚಾರ ದಲ್ಲೂ ಪ್ರತಿ ದರ್ಶನದಂತಿದೆ. ಅದು ಹೇಗೆಂದರೆ:—

೧. ಬ್ರಹ್ಮವಿನಾ ಅನ್ಯ ವಸ್ತುಗಳಿಲ್ಲವೆಂದು ಅದ್ವೈತ ಹೇಳುತ್ತದೆ. ಬ್ರಹ್ಮನಲ್ಲಿ ಸಕಲ ವಸ್ತುಗಳೂ ಅಡಗಿವೆಯೆಂದು ವಿಶಿಷ್ಟಾ ದ್ವೈತ ಹೇಳುತ್ತದೆ.

೨. ಬ್ರಹ್ಮಸತ್ತೆಯಿಂದ ಜಗತ್ತಿಗೆ ಇರುವಿಕೆ ತೋರುವದರಿಂದ ಜಗತ್ತು ಮಿಥ್ಯಾ ಎಂದು ಅದ್ವೈತ ಹೇಳುತ್ತದೆ. ಬ್ರಹ್ಮ ಸತ್ತೆಯಿಂದ ಜಗತ್ತು ಇದೆಯಾದ್ದರಿಂದ ಆ ಜಗತ್ತು ಇದ್ದೇ ಇದೆ, ಅದು ಸತ್ಯ ಎಂದು ವಿಶಿಷ್ಟಾದ್ವೈತ ಹೇಳುತ್ತದೆ.

೩. ಬ್ರಹ್ಮನಲ್ಲಿ ಯಾವ ದೋಷವೂ ಇಲ್ಲವೆಂದು ನಿಷೇಧ ಮಾರ್ಗ ದಲ್ಲಿ ಅದ್ವೈತ ಹೇಳುತ್ತದೆ. ಬ್ರಹ್ಮನು ಸಕಲ ಕಲ್ಯಾಣ ಗುಣ ಪರಿಪೂರ್ಣನು ಎಂದು ವಿಧಿಮಾರ್ಗದಲ್ಲಿ ವಿಶಿಷ್ಟಾ ದ್ವೈತ ಹೇಳುತ್ತದೆ.

೪. ಸರ್ವಾನಿಷ್ಟ ನಿವೃತ್ತಿಯು ಮೋಕ್ಷವೆಂದು ಅದ್ವೈತ ಸಾರುತ್ತದೆ. ಸರ್ವೇಷ್ಟ ಪ್ರಾಪ್ತಿಯೆಂದು ವಿಶಿಷ್ಟಾದ್ವೈತ ಸಾರುತ್ತದೆ.

೫. ಆತ್ಮರೆಲ್ಲರೂ ಒಂದು ಎಂದು ಅದ್ವೈತ ನಿರೂಪಿಸುತ್ತದೆ. ಆತ್ಮರೆಲ್ಲರೂ ಸಮಾನರೆಂದು ವಿಶಿಷ್ಟಾದ್ವೈತ ನಿರೂಪಿಸುತ್ತದೆ.

ಸಕಲ ಪ್ರಪಂಚ ಸೃಷ್ಟಿಗೆ ಮೂಲಕಾರಣವಾದ ಪ್ರಕೃತಿಯು ಈ ದರ್ಶನದಲ್ಲಿ ನಿತ್ಯವಾದದ್ದು. ಅದು ತ್ರಿಗುಣಾತ್ಮಕವಾದದ್ದು. ಅದಕ್ಕೆ ಅಕ್ಷರವೆಂದು ಹೆಸರು. ಅದು ಪರಮಸೂಕ್ಷ್ಮವಾದುದರಿಂದ ಅವ್ಯಕ್ತವು; ಜಡವಾದುದರಿಂದ ತಮಸ್ಸು, ಸಕಲಕಾರ್ಯಗಳಿಗೆ ಕಾರಣವಾದುದರಿಂದ ಅದು ಮಾಯೆ; ಸಮೀಚೀನಜ್ಞಾನಕ್ಕೆ ವಿರೋಧಿಯಾದುದರಿಂದ ಅವಿದ್ಯೆ; ಸೃಷ್ಟಿಗೆ ಪ್ರಥಮಸಾಧನವಾದುದರಿಂದ ಅದು ಅಪರಾಶಕ್ತಿ.

ವಿಶಿಷ್ಟಾದ್ವೈತದ ಸೃಷ್ಟಿವಿಧಾನವು ಪ್ರಾಯಶಃ ಸಾಂಖ್ಯದರ್ಶನದಲ್ಲಿರುವಂತೆ ಇರುವ ಕಾರಣ ಅದರ ತತ್ವಗಳು, ಪದಾರ್ಥಗಳು, ಯಾವವೆಂಬುದರ ವಿವರವಿಲ್ಲಿ ಬೇಕಾಗಿಲ್ಲ. ಈ ಸೃಷ್ಟಿವಿಧಾನವನ್ನು ಈ ದರ್ಶನಕಾರರು ಪರಮಾತ್ಮನ ಲೀಲಾವಿಭೂತಿಯೆಂದು ವಿಶಿಷ್ಟಪದದಿಂದ ಕರೆದಿದ್ದಾರೆ.

ಲೀಲಾವಿಭೂತಿಯಂತೆ ನಿತ್ಯವಿಭೂತಿಯೆಂಬುವದು ಈ ದರ್ಶನದ ಮತ್ತೊಂದು ಜೋಡಿಯಾದ ವಿಶಿಷ್ಟಪದ. ನಿತ್ಯವಿಭೂತಿಯು ಲೀಲಾವಿಭೂತಿಗಿಂತ ಪರಮಾಧಿಕವಾದದ್ದು. ಬದ್ಧಜೀವರ ಸಾಧನಸ್ಥಳವಾದ ಪ್ರಪಂಚವು ಲೀಲಾವಿಭೂತಿಯಾದರೆ, ತ್ರಿಗುಣಸತ್ವದಿಂದ ಪ್ರತ್ಯೇಕವಾದ ಶುದ್ಧಸತ್ವಮಯವಾದ ಉನ್ನತಸ್ಥಾನ ನಿತ್ಯವಿಭೂತಿ. ನಿರತಿಶಯ ಆನಂದ ಸ್ಥಾನವಾದುದರಿಂದ ಅದು ಪರಮಪದ. ತೇಜೋಮಯವಾದುದರಿಂದ ಅದು ಜ್ಞಾನಮಯ. ಭೂತಪಂಚಕಗಳ ಪರಮಸೂಕ್ಷ್ಮಸ್ವಭಾವಯುತವಾಗಿರುವದರಿಂದ ಅದು ಪಂಚಶಕ್ತಿಮಯ. ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸುಗಳೆಂಬ ಷಡ್ಗುಣಗಳ ಪ್ರಕಾಶ ಸ್ಥಾನವಾದುದರಿಂದ ಅದು ಷಾಡ್ಗುಣ್ಯಮಯ. ನಿತ್ಯಸೂರಿಗಳ ದೇಹಕ್ಕೆ ಕಾರಣವಾದುದರಿಂದ ಅದು ಪರಮಮಂಗಳ. ದಿವ್ಯಭೋಗಸ್ಥಾನವಾದುದರಿಂದ ಅದು ಆನಂದಮಯ. ಶಾಶ್ವತವಾದುದರಿಂದ ಅದು ವೈಕುಂಠ.

ಜೀವ—ಶರೀರಾದಿಗಳಿಂದ ವಿಲಕ್ಷಣನಾಗಿ ನಾನು ಎಂಬ ಅನುಭವದಿಂದ ಗೋಚರನಾದ ವಸ್ತುಜೀವ. ಉತ್ಪತ್ತಿಯಿಲ್ಲದವನಾದುದರಿಂದ ಅವನು ಅಜ. ವಿನಾಶವಿಲ್ಲದವನಾದುದರಿಂದ ಅವನು ನಿತ್ಯ. ಏಕರೂಪನಾಗಿರುವರಿಂದ ಶಾಶ್ವತ ಸದಾ ನವೀನನಾಗಿರುವದರಿಂದ ಪುರಾಣ. ಪರಮಸೂಕ್ಷ್ಮನಾಗಿರುವದರಿಂದ ಅಣು. ಶರೀರ ಸಂಖ್ಯೆಗಳಂತೆ ಪ್ರತಿ ಶರೀರದಲ್ಲಿ ಪ್ರತ್ಯೇಕನಾಗಿರುವದರಿಂದ ಅಸಂಖ್ಯಾತ. ಅವನ ಸ್ವರೂಪ, ಜ್ಞಾನಾಂದ. ಅವನು ಕರ್ತಾ ಭೋಕ್ತಾ ಜ್ಞಾತಾ, ಅವನು ಪರಮಾತ್ಮನಿಂದ ಪರಮಭಿನ್ನ.

ಜೀವರಲ್ಲಿ—ನಿತ್ಯ, ಮುಕ್ತ ಬದ್ಧ ಎಂಬು ಮೂರು ವಿಧ. ಅನಂತ, ಗರುಡ, ವಿಷ್ವಕ್ಸೇನ ಮೊದಲಾದವರು ನಿತ್ಯರು ಮತ್ತು ಪರಿಜನರು. ಶುಕ, ಪರಾಶರ, ವ್ಯಾಸ ಮೊದಲಾದ ಮಹರ್ಷಿಗಳೂ ಆಳ್ವಾರರೂ ಆಚಾರ್ಯರುಗಳೂ ಮುಕ್ತರು, ಮಿಕ್ಕವರೆಲ್ಲ ಬದ್ಧಜೀವರು, ಮೋಕ್ಷದಲ್ಲಿ ಮಾತ್ರ ಸರ್ವರೂ ಸಮಾನರು. ಮೋಕ್ಷಕ್ಕೆ ಎಲ್ಲರೂ ಅಧಿಕಾರಿಗಳು.

ಈಶ್ವರ—ಈಶ್ವರ ತತ್ವವು ಲಕ್ಷ್ಮೀನಾರಾಯಣನೆಂದು ಎರಡು ವಸ್ತುಗಳಂತೆ ಕಂಡುಬಂದರೂ, ಈಶ್ವರ ತತ್ವವೆಂಬ ತತ್ವಾಧಿಕಾರವು, ಎರಡು ವಸ್ತುಗಳಲ್ಲೂ ಪರಿಸಮಾಪ್ತವಾಗಿರುವ ಕಾರಣ—ಪರಮಾತ್ಮ ಪರಬ್ರಹ್ಮ ಇತ್ಯಾದಿ ಶಬ್ದಗಳಲ್ಲಿ ಕಂಡುಬರುವ ಅರ್ಥವೇ ಲಕ್ಷ್ಮೀನಾರಾಯಣ ಶಬ್ದದಲ್ಲಿರುವದೆಂಬುವದು ದರ್ಶನಕಾರರ ಅಭಿಪ್ರಾಯ. ಈಶ್ವರನು—ಸಕಲ ಜಗದಾಧಾರನು, ಶರೀರಿಯು, ಸ್ವಾಮಿಯು, ಕಾರಣನು, ನಿಯಾಮಕನು, ದೋಷರಹಿತನು, ಸರ್ವಜ್ಞನು, ಸರ್ವಶಕ್ತನು. ಪರಮಕಾರುಣಿಕನು, ಸಕಲ ಕಲ್ಯಾಣಗುಣಪರಿಪೂರ್ಣನು, ಸರ್ವವಸ್ತು ವಿಲಕ್ಷಣನು, ಸರ್ವಶಬ್ದ ವಾಚ್ಯನು, ಸರ್ವಲೌಕಿಕ ಯುಕ್ತಿವಿದೂರನು, ಅಪ್ರಾಕೃತ ದಿವ್ಯಮಂಗಳ ವಿಗ್ರಹನು, ಶಾಸ್ತ್ರವಿಹಿತ ಸಕಲ ಕರ್ಮಸಮಾರಾಧ್ಯನು, ಮಾತಾಪಿತೃ ಸ್ಥಾನೀಯನು, ಅವನು ಸೂಕ್ಷ್ಮರೂಪದಲ್ಲಿ ಚೇತನಾಚೇತನ ಶಕ್ತಿ ವಿಶಿಷ್ಟನಾಗಿರುವದರಿಂದ, ಘಟನಿರ್ಮಾಣಕ್ಕೆ ಮೃತ್ತಿಕೆಯಂತೆ ಜಗತ್ಸೃಷ್ಟಿಗೆ ಉಪಾದಾನಕಾರಣನು; ಇಚ್ಛಾಶಕ್ತಿಯೆಂಬ ಸಂಕಲ್ಪವುಳ್ಳವನಾದುದರಿಂದ ನಿಮಿತ್ತ ಕಾರಣನು: ಕಾಲದೇಶಕರಣಗಳೆಲ್ಲ ಅವನ ಅಧೀನವಾಗಿರುವದ

ರಿಂದ ಸಹಕಾರಿಕಾರಣನು. ಪರಮಾತ್ಮನ ಜಗತ್ಸೃಷ್ಟಿಕಾರ್ಯವು ಸಕಲ ಜೀವರ ಉದ್ಧಾರಕ್ಕಾಗಿ ಮಾತ್ರ ಆಗಿರುವದು. ಅವನಿಗೆ—ಸತ್ಯಸಂಕಲ್ಪತ್ವವು ಸಕಲ ದೋಷರಾಹಿತ್ಯಕ್ಕೂ, ಸತ್ಯಕಾಮತ್ವವು ಸಕಲ ಗುಣ ಸಾಹಿತ್ಯಕ್ಕೂ, ಪುರುಷೋತ್ತಮತ್ವವು ಸಕಲ ವಸ್ತು ವಿಲಕ್ಷಣತ್ವಕ್ಕೂ ನಿಯಾಮಕವಾಗಿರುವದು.

ಶಬ್ದಪ್ರಮಾಣ—ಈ ದರ್ಶನದಲ್ಲಿ—ವಿಧಿರೂಪದಲ್ಲಿರುವ ಕ್ರಿಯಾ ಪದಗಳಿಂದ ಕೂಡಿದ ವೇದವಾಕ್ಯಗಳು ಶಾಸನಮಾಡುತ್ತಿರುವ ಕಾರಣ, ಶಬ್ದಪ್ರಮಾಣಗಳು. ಕಥಾರೂಪದಲ್ಲಿ ಮಾತ್ರವಿದ್ದು ವಿಧಿಯನ್ನು ವಿಧಿಸದಿರುವ ವೇದವಾಕ್ಯಗಳಾದರೂ ಶಬ್ದಪ್ರಮಾಣದ ಜಾತಿಗೆ ಸೇರುವದಿಲ್ಲ ವೇದವೆಂಬುವದು ಪರಮಾತ್ಮನ ವ್ಯವಸ್ಥಿತವಾದ ಅಭಿಪ್ರಾಯಗಳನ್ನು ತಿಳಿಸುವ ಶಬ್ದಸಮೂಹ. ಋಷಿಗಳು ಮಂತ್ರ ದ್ರಷ್ಟರೆಂದು ಕಂಡುಬಂದರೂ ತಿರೋಹಿತವಾಗಿದ್ದ ಕಾಲದಲ್ಲಿ ಆ ವೇದಗಳನ್ನು ತಮ್ಮ ತಪಃ ಪ್ರಭಾವದಿಂದ ಪ್ರತ್ಯಕ್ಷೀಕರಿಸಿಕೊಂಡರೆಂಬುವದೇ ಮುಖ್ಯತಾತ್ಪರ್ಯ. ಆದ್ದರಿಂದ ವೇದಗಳು ಅನಾದಿ ನಿತ್ಯಗಳು. ವೇದಗಳಂತೆ ಪಂಚರಾತ್ರವೆಂಬ ಆಗಮವು ಈ ದರ್ಶನಕಾರರಿಗೆ ಶಬ್ದಪ್ರಮಾಣವು.

ಭಕ್ತಿ ಮತ್ತು ಪ್ರಪತ್ತಿ:—ಶಾಸ್ತ್ರಗಳಲ್ಲಿ-ತತ್ವ, ಹಿತ, ಮತ್ತು ಪುರುಷಾರ್ಥ; ಎಂಬ ಮೂರು ಪ್ರಕಾರಗಳು. ಹಿಂದಿನ ವಿವರಣೆ ತತ್ವಸ್ವರೂಪ ವಿವರಣೆಯಾಗಿರುವದರಿಂದ ಹಿತ ಮತ್ತು ಪುರುಷಾರ್ಥಗಳನ್ನಿಲ್ಲಿ ವಿವರಿಸಲಾಗುತ್ತದೆ. ಜೀವರ ಕರ್ತವ್ಯದಿಂದ ಪ್ರಾಪ್ತವಾಗುವ ಪರಮಾತ್ಮನ ಅನುಗ್ರಹವು ಹಿತಜಾತಿಗೆ ಸೇರಿದ ಭಕ್ತಿಪ್ರಪತ್ತಿಗಳಿಂದಾಗಿದೆ. ಯಥಾರ್ಥ ಜ್ಞಾನಪೂರ್ವಕವಾಗಿ ಪರಮಾತ್ಮನ ಪಾದಾರವಿಂದ ಧ್ಯಾನ ಅರ್ಚನೆ ಪ್ರಣಾಮ ಮೊದಲಾದವುಗಳು ಭಕ್ತಿಯೆನಿಸುತ್ತವೆ. ಭಕ್ತಿಸಾಧನೆ ಕಾಯಕ, ವಾಚಕ, ಮಾನಸಿಕಗಳಾಗಿ ಮೂರು ಪ್ರಕಾರದಲ್ಲಿವೆ. ಭಕ್ತಿಸಾಧನೆ ಕಷ್ಟವೆಂದರಿತವರು ಶರಣಾಗತಿರೂಪವಾದ ಪ್ರಪತ್ತಿಮಾರ್ಗವನ್ನನುಸರಿಸುತ್ತಾರೆ.

ಭಕ್ತಿ ಪ್ರಪತ್ತಿಗಳಿಂದ ಪರಮಾತ್ಮನ ಪ್ರಸಾದಪಡೆದ ಜೀವರು ಮುಕ್ತರಾಗಿ ಪರಮಪದದಲ್ಲಿ ಪರಮಾತ್ಮನ ಸನ್ನಿಧಿಯಲ್ಲಿ ಪರಮಾನಂದ

ಭರಿತರಾಗಿ ಸಮಾನರಾಗಿರುತ್ತಾರೆ. ಇದು ವಿಶಿಷ್ಟಾದ್ವೈತ ದರ್ಶನದ ಸಂಕ್ಷೇಪ ವಿವರಣೆಯು.

ದ್ವೈತ ದರ್ಶನ

ದ್ವೈತ ದರ್ಶನವನ್ನು ವಿದ್ಯಾರಣ್ಯಸ್ವಾಮಿಗಳು ತಮ್ಮ ಸರ್ವದರ್ಶನ ಸಂಗ್ರಹವೆಂಬ ಗ್ರಂಥದಲ್ಲಿ ಪೂರ್ಣಪ್ರಜ್ಞದರ್ಶನವೆಂಬ ಹೆಸರಿನಿಂದ ಕರೆದಿದ್ದಾರೆ.: ದ್ವೈತದರ್ಶನವೆಂದರೂ, ಪೂರ್ಣಪ್ರಜ್ಞದರ್ಶನವೆಂದರೂ, ಮಧ್ವಸಿದ್ಧಾಂತವೆಂದರೂ, ದಶಮತಿದರ್ಶನವೆಂದರೂ, ಅರ್ಥ ಒಂದೇ. ನಾವು ಆರಿಸಿಕೊಂಡಿರುವ ಮುಖ್ಯ ದರ್ಶನಗಳಲ್ಲಿ ಈ ದಶಮದರ್ಶನವು ಕಡೆಯುದಾದ ದಶಮತಿದರ್ಶನವಾಗಿರುತ್ತದೆ. ಇದಕ್ಕಿಂತ ಪೂರ್ವದಲ್ಲಿದ್ದ ಇಪ್ಪತ್ತೊಂದು ಭಾಷ್ಯಗಳನ್ನು ಪರಿಶೀಲಿಸಿ ಮಾಡಿರುವ ಸಿದ್ಧಾಂತವಿದಾಗಿರುವದರಿಂದ, ಇದನ್ನು ಮಧ್ವಸಿದ್ಧಾಂತವೆಂದು ಕರೆಯುವ ರೂಢಿ ಬಹಳವಾಗಿದೆ.

ಪ್ರಮಾಣ.—ಸರ್ವ ವಸ್ತುಗಳ ಜ್ಞಾನವು ಪ್ರಮಾಣಾಧೀನವಾದುದರಿಂದ, ಸಾಂಖ್ಯರಂತೆ ಈ ದರ್ಶನಕಾರರು ಪ್ರತ್ಯಕ್ಷ, ಅನುಮಾನ, ಆಗಮ ಪ್ರಮಾಣಗಳನ್ನು ಅಂಗೀಕರಿಸಿರುತ್ತಾರೆ. ಅದ್ವೈತದರ್ಶನಕಾರರು ಇವುಗಳ ಜೊತೆಗೆ ಸೇರಿಸಿಕೊಂಡಿರುವ ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿಪ್ರಮಾಣಗಳು ಮೇಲ್ಕಂಡ ಮೂರು ಪ್ರಮಾಣಗಳಲ್ಲಿ ಅಂತರ್ಭೂತವಾಗವೆಯೆಂಬುವದು ಈ ದರ್ಶನಕಾರರ ಅಭಿಪ್ರಾಯ.

ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ವಿಶಿಷ್ಟ, ಅಂಶಿ, ಶಕ್ತಿ, ಸಾದೃಶ್ಯ, ಅಭಾವ ; ಎಂಬ ಹತ್ತು ಪದಾರ್ಥಗಳು. ಪರಮಾತ್ಮ, ಲಕ್ಷ್ಮೀ ಜೀವಾತ್ಮ, ಅವ್ಯಾಕೃತಾಕಾಶ, ಪ್ರಕೃತಿ, ಗುಣತ್ರಯ, ಮಹತ್ತತ್ವ, ಅಹಂಕಾರತತ್ವ, ಬುದ್ಧಿ, ಮನಸ್ಸು, ಇಂದ್ರಿಯ, ಮಾತ್ರಾ, ಭೂತ, ಬ್ರಹ್ಮಾಂಡ, ಅವಿದ್ಯೆ, ವರ್ಣ, ಅಂಧಕಾರ, ಕಾಲ, ವಾಸನಾ, ಪ್ರತಿಬಿಂಬ; ಎಂಬ ಇಪ್ಪತ್ತು ದ್ರವ್ಯಗಳು. ರೂಪ, ರಸ, ಗಂಧ, ಸ್ಪರ್ಶ, ಸಂಖ್ಯಾ, ಪರಿಮಾಣ, ಸಂಯೋಗ, ವಿಭಾಗ, ಪರತ್ವ, ಅಪರತ್ವ, ಗುರುತ್ವ, ದ್ರವ್ಯತ್ವ, ಲಘುತ್ವ, ಮೃದುತ್ವ, ಕಠಿಣತ್ವ, ಸ್ನೇಹ, ಶಬ್ದ, ಬುದ್ಧಿ, ಸುಖ, ದುಃಖ, ಇಚ್ಛಾ, ದ್ವೇಷ, ಪ್ರಯತ್ನ, ಧರ್ಮ, ಅಧರ್ಮ, ಸಂಸ್ಕಾರ, ಆಲೋಕ,

ಶಮ, ದಮ, ದಯೆ, ತಿತಿಕ್ಷಾ, ಭಯ, ಬಲ, ಲಜ್ಜೆ, ಗಾಂಭೀರ್ಯ, ಸೌಂದರ್ಯ, ಔದಾರ್ಯ, ಸ್ಥೈರ್ಯ, ಶೌರ್ಯ, ಸೌಭಾಗ್ಯ ಎಂಬ ನಲವತ್ತು ಗುಣಗಳು. ವಿಹಿತ, ನಿಷಿದ್ಧ, ಉದಾಸೀನ ಎಂಬ ತ್ರಿವಿಧ ಕರ್ಮಗಳು. ಜಾತಿ, ಉಪಾಧಿ ಎಂಬ ಸಾಮಾನ್ಯ. ಅಚಿಂತ್ಯಶಕ್ತಿ, ಆಧೇಯಶಕ್ತಿ, ಸಹಜಶಕ್ತಿ, ಪದಶಕ್ತಿ ಎಂಬ ನಾಲ್ಕು ವಿಧ ಶಕ್ತಿಗಳು. ಇಷ್ಟು ಪರಿಕರಗಳ ಜೋಡಣೆಯಿಂದ ಕಟ್ಟಿದಕಟ್ಟಡದಂತೆ ದ್ವೈತದರ್ಶನವಿದೆ

ಚಾರ್ವಾಕಾದಿ ಸಕಲ ದರ್ಶನಗಳಲ್ಲಿರುವ ಗುಣಭಾಗಗಳನ್ನು ಈ ದರ್ಶನವು ಸ್ವೀಕರಿಸದೆ ಬಿಟ್ಟಿಲ್ಲ ಪ್ರಮಾಣತ್ರಯಗಳಿಗೆ ವಿರುದ್ಧವಾಗಿರುವ ಸಂಗತಿಗಳನ್ನು ಒಂದೊಂದು ದರ್ಶನದಲ್ಲೂ ಈ ದರ್ಶನವು ಪರಿಶೀಲಿಸದೆ ಬಿಟ್ಟಿಲ್ಲ. ಈ ದರ್ಶನವು ಒಂದೊಂದು ದರ್ಶನಕ್ಕೂ ಪ್ರತಿದರ್ಶನದಂತೆ ಕಂಡುಬಂದರೂ, ಎಲ್ಲ ದರ್ಶನಗಳ ಸಾರವನ್ನು ಸಂಗ್ರಹಿಸಿ ಎಲ್ಲಕ್ಕೂ ಮಧ್ಯಸ್ಥಮಾರ್ಗದಲ್ಲಿ ಈ ದರ್ಶನವಿರುವದೆಂದು ದರ್ಶನ ಶಾಸ್ತ್ರವಿಶಾರದರು ಅಭಿಪ್ರಾಯಪಡುತ್ತಾರೆ.

ಕಾರ್ಯಕಾರಣಭಾವದಲ್ಲಿ—ಕೆಲವರು ಸತ್ಕಾರ್ಯವಾದಿಗಳು, ಕೆಲವರು ಅಸತ್ಕಾರ್ಯವಾದಿಗಳು, ಕೆಲವರು ಸದಸತ್ಕಾರ್ಯವಾದಿಗಳು, ಮತ್ತೆ ಕೆಲವರು ಸದಸದ್ವಿಲಕ್ಷಣಕಾರ್ಯವಾದಿಗಳಾಗಿದ್ದರೆ, ಇವರು ಮತ್ತೊಂದು ಬಗೆಯ ಸದಸತ್ಕಾರ್ಯವಾದಿಗಳಾಗಿರುತ್ತಾರೆ.

ಭೇದ ನಿರೂಪಣದಲ್ಲಿ—ಈ ದರ್ಶನದಲ್ಲಿ ಅಂಗೀಕರಿಸಲ್ಪಟ್ಟಿರುವ ಪದಾರ್ಥಗಳು ಅಬಾಧಿತ ಲೌಕಿಕಪ್ರಮಾಣಗಳಿಂದಲೂ, ಶ್ರುತಿಪ್ರಮಾಣ ದಿಂದಲೂ, ಪರಮಪ್ರಾಮಾಣಿಕಗಳೆಂದೇ ನಿರೂಪಿಸಲ್ಪಟ್ಟಿವೆ ಇಂತಹ ಪದಾರ್ಥಗಳಲ್ಲಿ ಜೀವಾತ್ಮ, ಪರಮಾತ್ಮ, ಆಕಾಶ, ಕಾಲ ಮೊದಲಾದ ವಸ್ತುಗಳನ್ನು ಇತರ ಕೆಲವು ದರ್ಶನಕಾರರು ನಿರವಯವವೆಂದು ನಿರೂಪಿಸಿದರೆ ಈ ದರ್ಶನಕಾರರು ಸಾವಯವವೆಂದು ಸಿದ್ಧಾಂತವಾಡುತ್ತಾರೆ. ನಿತ್ಯವಾಗಿರುವ ಜೀವಾತ್ಮ ಪರಮಾತ್ಮ ವಸ್ತುಗಳು ಸಹ ಈ ದರ್ಶನವಲ್ಲಿ ಸ್ವರೂಪತಃ ಸಾವಯವಗಳು. ಅನಿತ್ಯವಾದ ಘಟಪಟಾದಿಗಳ ಅವಯವ ಗಳು ಆರಂಭಕಾವಯವಗಳಾಗಿ ಆಗಿದ್ದರೆ, ನಿತ್ಯವಾದ ಆತ್ಮ ಮೊದಲಾದ

ವಸ್ತುಗಳ ಅವಯುವಗಳು ಅನಾರಂಭಕಗಳು. ನಿರವಯುವಿಯಾದ ಆಕಾಶ ವಾದರೂ ಅಂಶ ಅಂಶೀಭಾವದಿಂದ ಅಂದಗೆ ಘಟಾಕಾಶ ಮಠಾಕಾಶಗಳೆಂಬ ಅಂಶದೃಷ್ಟಿಯಿಂದ ಸಾವಯುವಿಯು ವಸ್ತ್ರವು ತಂತುಭೇದದಿಂದ ಅಳತೆಯ ಭೇದದಿಂದ ಸಾವಯುವಿಯು. ಸಾವಯುವಿಯಲ್ಲದ ಅಖಂಡ ವಸ್ತುವೆಂಬುವದು ಈ ದರ್ಶನಕಾರರ ದೃಷ್ಟಿಯಲ್ಲಿ ಇಲ್ಲವೇ ಇಲ್ಲ.

ಬಿಂಬ ಪ್ರತಿಬಿಂಬಭಾವ ವಿಷಯದಲ್ಲಿ—ಬಿಂಬಕ್ಕಿಂತ ಪ್ರತಿಬಿಂಬ ಭಾವವು ಪ್ರತ್ಯೇಕ ವಸ್ತುವಲ್ಲವೆಂದು ಕೆಲವು ದರ್ಶನಕಾರರು ಹೇಳುತ್ತಾರೆ. ಕಣ್ಣಿನ ತೇಜಸ್ಸು ಸ್ವಚ್ಛ ದ್ರವ್ಯದಲ್ಲಿ ಪ್ರವೇಶಿಸಿ ಪ್ರತಿಫಲಿಸಿ, ಬಿಂಬವನ್ನು ಗ್ರಹಿಸುವದರಿಂದ, ತನ್ನ ಮುಖವನ್ನೇ ದರ್ಪಣದಲ್ಲಿ ಗ್ರಹಿಸಿದಂತಾಯಿ ತೆಂದು ಹೇಳುತ್ತಾರೆ. ಈ ದರ್ಶನದಲ್ಲಾದರೋ—ಬಿಂಬದಿಂದ ಬಿಂಬಾಧೀನ ಸ್ಥಿತಿಗಳುಳ್ಳ ಪ್ರತಿಬಿಂಬವೆಂಬ ಅನ್ಯವಸ್ತು ಸಾಮಗ್ರಿ ವಿಶೇಷದಿಂದ ದರ್ಪಣ ವೆಂಬ ಸ್ವಚ್ಛ-ದ್ರವ್ಯದಲ್ಲಿ ಉದಯವಾಯಿತು ; ಬಿಂಬಕ್ಕಿಂತ ಪ್ರತಿಬಿಂಬ ದಲ್ಲಿ ಆಕಾರವ್ಯತ್ಯಾಸ, ಪಾರ್ಶ್ವವ್ಯತ್ಯಾಸ, ದಿಗ್ವ್ಯತ್ಯಾಸಗಳು ಉಪಪನ್ನ ವಾದವು ; ಆದ್ದರಿಂದ ಬಿಂಬ ಬೇರೆ, ಪ್ರತಿಬಿಂಬ ಬೇರೆ ; ಅದೇ ಇದಲ್ಲ ; ಎಂದು ಬಹು ತೀವ್ರ ಯುಕ್ತಿಯನ್ನುಪಸ್ಥಾಪಿಸುತ್ತಾರೆ. ಈ ದರ್ಶನದಲ್ಲಿ ನಿತ್ಯ ವಸ್ತುಗಳೆಲ್ಲವೂ ನಿತ್ಯನಾದ ಪರಮಾತ್ಮನಿಗೆ ನಿತ್ಯ ಪ್ರತಿಬಿಂಬಗಳೇ ಆಗಿರುತ್ತವೆ. ಬಿಂಬ ಪ್ರತಿಬಿಂಬ ಭಾವ ವಿಚಾರದಲ್ಲಿ ಜೈನದರ್ಶನಕಾರರ ಅಭಿಪ್ರಾಯವು ಈ ದರ್ಶನದಂತೇ ಇದೆ. ಈ ದರ್ಶನಕಾರರಿಗಿಂತ ಎಷ್ಟೋ ಕಾಲದ ಹಿಂದಿದ್ದ ಕುಮಾರಿಲಭಟ್ಟರು ಶ್ಲೋಕವಾರ್ತಿಕವೆಂಬ ತಮ್ಮ ಗ್ರಂಥದಲ್ಲಿ ಆರ್ಹದ್ದರ್ಶನದ ಬಿಂಬ ಪ್ರತಿಬಿಂಬಭಾವದ ಅರ್ಥ ವಿದೆಂದು ನಿರೂಪಿಸಿರುತ್ತಾರೆ.

ಭೇದವಾದ ವಿಷಯದಲ್ಲಿ—ವಸ್ತುಗಳು, ವ್ಯಕ್ತಿಗಳು, ಅಸಂಖ್ಯಾತ ವಾಗಿರುವಂತೆ ಅನಂತ ಭೇದಗಳಿದ್ದರೂ, ಅವುಗಳನ್ನು ಈಶ, ಜೀವ, ಜಡ; ಎಂಬ ಮೂರು ಮುಖ್ಯ ಭೇದಗಳಲ್ಲಿ ಅಡಗಿಸಿ, ಮೂರರಿಂದ ಐದು ಪ್ರಕಾರದ ವಾದವನ್ನು ಸಮರ್ಥಿಸಿರುತ್ತಾರೆ. ಈ ವಾದಕ್ಕೆ ಪಂಚ ಭೇದವಾದನೆಂದು ಹೆಸರು. ಈಶಜೀವ ಭೇದ, ಜೀವಜೀವ ಭೇದ, ಜಡ

ಜಡ ಭೇದ, ಜಡಜೀವಭೇದ, ಜಡಈಶ ಭೇದ ; ಇವು ಈ ಪಂಚಭೇದ ಗಳು. ಈ ಭೇದಗಳಲ್ಲಿ ಎರಡನ್ನು ಮಾತ್ರ ವಿಮರ್ಶಿಸಿದರೆ ಮಿಕ್ಕ ಭೇದ ಗಳು ತಾನಾಗಿ ಅರ್ಥವಾಗುವವು

ಜೀವೇಶ್ವರ ಭೇದದ ಯಥಾರ್ಥ ಜ್ಞಾನ ಬರದಿದ್ದರೆ ಜೀವನು ತಾನೇ ಈಶ್ವರನೆಂದು ಭ್ರಮಿಸಿಬಿಡುವನು. ಲೋಕನ್ಯಾಯದಲ್ಲೂ ಭೃತ್ಯನ ತಾನೇ ರಾಜನೆಂದು ಭ್ರಮಿಸಿದರೆ ಅನೇಕ ಕಷ್ಟಗಳಿಗೊಳಗಾಗು ವನು. ಹಾಗೆ ಭ್ರಮಿಸದೆ ತಾನ ಭೃತ್ಯನೆಂದು ಯಥಾರ್ಥ ರೀತಿಯಿಂದ ವಿಧೇಯನಾಗಿ ವರ್ತಿಸಿದರೆ, ರಾಜಾನುಗ್ರಹದಿಂದ ಸಕಲಸುಖಗಳನ್ನೂ ಅನುಭವಿಸುವನು. ಜೀವನಾದರೂ ಇದರಂತೆ ಈಶ್ವರಾನುಗ್ರಹದಿಂದ ಸುಖಿಯಾಗುವನು. ಜೀವ ಜಡ ಭೇದಜ್ಞಾನ ಜೀವನಿಗೆ ಬರದಿದ್ದರೆ ದೇಹಾತ್ಮವಾದಿಯಾಗುವನು ಉಚಿತಾನುಚಿತಗಳನ್ನು ಮರೆತು ಸ್ವಚ್ಛಂದ ವೃತ್ತಿಯಿಂದ ನಡೆಯುವನು. ಇದರಿಂದ ತನ್ನಿಂದ ತನಗೂ ಸಮಾಜಕ್ಕೂ ಎಷ್ಟೋ ಹಾನಿಯಾಗುವದು. ಯಥಾರ್ಥ ಭೇದಜ್ಞಾನದಿಂದ ಪ್ರತಿ ಮಾನ ವನು ನಡೆದರೆ ಲೋಕ ಕಲ್ಯಾಣವಾಗುವದು. ಈ ಭೇದಜ್ಞಾನವು ಇಹಪರ ಸಾಧಕವಾಗುವದು.

ದ್ರವ್ಯಗುಣಕರ್ಮ ಮೊದಲಾದ ಪದಾರ್ಥಗಳಲ್ಲಿ ದ್ರವ್ಯವು ನಿತ್ಯ ವಾಗಿದ್ದರೆ ಗುಣಕರ್ಮಗಳು ನಿತ್ಯನಾಗಿರುವವು. ನಿತ್ಯದ್ರವ್ಯಗಳಲ್ಲಿ ಕೆಲವು ಗುಣಕರ್ಮಗಳು ನೂತನವಾಗಿ ಕಂಡುಬಂದರೆ ಸ್ಥೂಲ ಸೂಕ್ಷ್ಮಭಾವ ಗಳಿಂದ ಅವುಗಳ ಅಭಿವ್ಯಕ್ತಿಯಾದವೆಂದು ಅರ್ಥಮಾಡಿಕೊಳ್ಳಬೇಕು.

ಮೂಲಕಾರಣವಾದ ಪ್ರಕೃತಿಯು ಸಾಂಖ್ಯದರ್ಶನದಂತೆ ನಿತ್ಯವಾಗಿ ದ್ದರೂ ಸ್ವತಂತ್ರವಾದುದಲ್ಲ. ಸೃಷ್ಟಿಗೆ ಪ್ರಕೃತಿಯು ಉಪಾದಾನ ಕಾರಣ ವಾಗಿರುವದು. ಪ್ರಕೃತಿ ಸಂಬಂಧದಿಂದ ಜೀವನಿಗೆ ಸಂಸಾರ ಪ್ರಾಪ್ತಿ ಯಾಗುವದು. ಪ್ರಕೃತಿ ಸಂಬಂಧವಾದ ಇಂದ್ರಿಯ ಪ್ರಾಣಸಂಘಾತಗಳು ಪ್ರತಿಜೀವನಿಗೆ ಲಿಂಗಶರೀರವಾಗಿರುವದು. ಲಿಂಗಶರೀರ ರಚನಾ ಸಾಮಗ್ರಿ ಗಳಲ್ಲಿ ಈ ದರ್ಶನಕ್ಕೂ ಸಾಂಖ್ಯಾದಿದರ್ಶನಗಳಿಗೂ ಅಂತರವಿರುವದಿಲ್ಲ. ಲಿಂಗಶರೀರ ಬಿಡುಗಡೆಯಾಗುವದು ಸ್ವಸ್ವರೂಪಸ್ಥಿತಿ ಪ್ರಾಪ್ತಿ. ಲಿಂಗ

ಭಂಗವಿಲ್ಲದೆ ಜೀವರಿಗೆ ಮುಕ್ತಿಯಿಲ್ಲ. ಸೃಷ್ಟಿಗೆ ಪ್ರಕೃತಿಯು ಉಪಾದಾನ ಕಾರಣವಾಗಿರುವಂತೆ ಈಶ್ವರನು ನಿಮಿತ್ತ ಕಾರಣನಾಗಿರುವನು.

ಪರಮಾತ್ಮ:—ಸೃಷ್ಟಿಗೆ ನಿಮಿತ್ತ ಕಾರಣನಾದ ಪರಮಾತ್ಮನು ಸರ್ವಜ್ಞನು, ಸರ್ವವ್ಯಾಪಕನು, ಸರ್ವಶಕ್ತನು, ನಿರತಿಶಯ ಜ್ಞಾನಾನಂದ ಕಲ್ಯಾಣಗುಣ ಪರಿಪೂರ್ಣನು. ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಎಂಬ ಅಷ್ಟಕರ್ತೃತ್ವವುಳ್ಳವನು. ಜಗತ್ಕರ್ತನು, ಅನಂತನು, ಸರ್ವಶಬ್ದವಾಚ್ಯನು, ಸರ್ವವೇದ ವೇದ್ಯನು. ಭಕ್ತ ಪರಾಧೀನನು, ದೇಶತಃ ಕಾಲತಃ ಸಮಳೂ ಗುಣತಃ ಅಸಮಳೂ ಆದ ಲಕ್ಷ್ಮೀ ಪತಿಯು ಇತ್ಯಾದಿ.

ವಿಶಿಷ್ಟಾದ್ವೈತದ ಪರಮಾತ್ಮನಿಗೂ ದ್ವೈತದರ್ಶನದ ಪರಮಾತ್ಮನಿಗೂ ವಿಶೇಷ ಅಂತರವಿರುವದಿಲ್ಲ.

ಜೀವಾತ್ಮ:—ಜೀವಾತ್ಮರು ಅಸಂಖ್ಯಾತರು. ಅಜ್ಞಾನಾದಿ ದೋಷ ಸಹಿತರು. ನಿತ್ಯರು. ಪರಸ್ಪರ ಭೇದವುಳ್ಳವರು. ಈ ಜೀವರಲ್ಲಿ ಸಾಂಶರು, ನಿರಂಶರು, ಎಂದು ಎರಡು ದೊಡ್ಡ ಭೇದಗಳಿವೆ. ಅಂಶ ವಿಶೇಷದಿಂದ ಅವತಾರಮಾಡಬಲ್ಲ ಮತ್ತು ವ್ಯಾಪಕ ಶಕ್ತಿಯುಳ್ಳ ಜೀವರು ಸಾಂಶರು. ಈ ಶಕ್ತಿಗಳಿಲ್ಲದವರು ನಿರಂಶರು. ಪ್ರತಿ ಜೀವನೂ ಸ್ವರೂಪದಿಂದಲೇ ಸಾವಯುವನು. ಈ ಜೀವರಾಶಿಯಲ್ಲೂ ಸಾತ್ವಿಕರು, ರಾಜಸರು, ತಾಮಸರು; ಎಂಬ ಮೂರು ಭೇದವಿದೆ. ಇವರ ಸ್ವರೂಪಗಳು ಬದಲಾಗುವವಲ್ಲ.

ಶಬ್ದಪ್ರಮಾಣ:—ದ್ವೈತದರ್ಶನದರೀತ್ಯಾ ವೇದವು ತಾರ್ಕಿಕ ದರ್ಶನದಂತೆ ಈಶ್ವರಕೃತವಾದುದಲ್ಲ. ವೇದಕ್ಕೆ ಜ್ಞಾತಾಜ್ಞಾತ ಕರ್ತೃಗಳು ಯಾರೂ ಇಲ್ಲ. ಅಜ್ಞಾತಕರ್ತೃವಾದರೂ ಏತಕ್ಕಿರಬಾರದೆಂದರೆ ಇತರ ಅನೇಕ ಗ್ರಂಥಗಳಿಗೆ ಅಜ್ಞಾತಕರ್ತೃವಿರಬೇಕೆಂಬ ಪ್ರತೀತಿಯಿರುವಂತೆ, ಪರಂಪರೆಯಿರುವಂತೆ, ವೇದಕ್ಕಿರುವದಿಲ್ಲವೆಂಬುದೇ ಉತ್ತರ, ಇತರ ಕೆಲವು ದರ್ಶನಕಾರರು ಹೇಳುವಂತೆ ವೇದದ ಒಂದು ಭಾಗ ಶ್ರೇಷ್ಠವೆಂದಾಗಲಿ, ಮತ್ತೊಂದು ಭಾಗ ಕನಿಷ್ಠವೆಂದಾಗಲಿ, ಈ ದರ್ಶನ

ಕಾರರು ಹೇಳುವದಿಲ್ಲ. ಆದ್ದರಿಂದ ಈ ದರ್ಶನದಲ್ಲಿ ವೇದವು ಇತರ ಕೆಲವು ದರ್ಶನಗಳಿಗಿರುವಂತೆಯೇ ಸ್ವತಃಪ್ರಮಾಣವು.

ಭಕ್ತಿ:—ನಿರವಧಿಕ ಅನಂತ ಅನವದ್ಯ ಕಲ್ಯಾಣಗುಣತ್ವ ಜ್ಞಾನ ಪೂರ್ವಕವಾಗಿ ಸರ್ವವಸ್ತುಗಳಿಗಿಂತ ಅನೇಕ ಗುಣ ಅಧಿಕವಾಗಿ, ಸಹಸ್ರ ವಿಘ್ನಗಳು ಬಂದರೂ ತಡೆಯಲ್ಪಡದಿರುವ ನಿರಂತರವಾದ ಸ್ನೇಹ ಪ್ರವಾಹವೇ ಭಕ್ತಿಯೆನಿಸುವದು. ಈ ಭಕ್ತಿಮುಕ್ತಿಗೆ ಸಾಧನವು.

ಮುಕ್ತಿ:—ದ್ವೈತದರ್ಶನಕಾರರು ಸ್ವಸ್ವರೂಪಾನಂದ ಸುಖವನ್ನು ಮುಕ್ತಿಯೆಂದು ಕರೆಯುತ್ತಾರೆ ಮುಕ್ತಿಯಲ್ಲೂ ಜೀವರಿಗೆ ಪರಮಾತ್ಮನ ಸಾಮ್ಯವಾಗಲಿ, ಜೀವರಲ್ಲಿ ಒಬ್ಬೊಬ್ಬರಿಗೆ ಪರಸ್ಪರಸಾಮ್ಯವಾಗಲಿ ಇರುವದಿಲ್ಲ. ಜೀವರು ಪಡೆಯುವ ಆನಂದವು ಅವರವರ ಯೋಗ್ಯತಾನುಗುಣವಾಗಿರುತ್ತದೆ. ಆನಂದದಲ್ಲೂ ಇರುವ ತಾರತಮ್ಯವು ಅಸೂಯಾದಿಗಳಿಗೆ ಕಾರಣವಾಗುವದಿಲ್ಲ ಅವರವರಿಗೆ ಪ್ರಾಪ್ತವಾಗುವ ಆನಂದವು ಅವರಿಗೆ ಪರಿಪೂರ್ಣವಾಗಿರುತ್ತದೆ. ಜೀವರು ಅಣುರೂಪರಾದರೂ ಬೇಕುಬೇಕಾದ ರೂಪಗಳನ್ನು ಸ್ವೀಕರಿಸುತ್ತಾ ಮುಕ್ತಸ್ಥಾನದಲ್ಲಿ ಆನಂದದಿಂದ ವಿಹರಿಸುತ್ತಿರುವರು.

ಏಕವಿಂಶತಿ ದುಃಖನಿವೃತ್ತಿಯೆಂಬ ತಾರ್ಕಿಕರ ಮುಕ್ತಿಗೂ, ಜೀವ ಬ್ರಹ್ಮೈಕ್ಯವೆಂಬ ಅದ್ವೈತಿಗಳ ಮುಕ್ತಿಗೂ, ಕೆಲವಂಶಗಳಲ್ಲಿ ವಿನಾ ಪರಮಾತ್ಮನಿಗೆ ಸದೃಶರಾಗಿರುವರೆಂಬ ವಿಶಿಷ್ಟಾದ್ವೈತದ ಮುಕ್ತಿಗೂ, ದ್ವೈತ ದರ್ಶನದ ಮುಕ್ತಿಗೂ ಇರುವ ತಾರತಮ್ಯವಿದಾಗಿದೆ. ಅರ್ಹತೆಯುಳ್ಳವರಿಗೆ ವಿನಾ ಎಲ್ಲರಿಗೂ ಮುಕ್ತಿಯಾಗುವದೆಂಬ ಮುಖೋಲ್ಲಾಸದ ಮಾತು ಈ ದರ್ಶನದಲ್ಲಿಲ್ಲವಾದುದರಿಂದ ಅನೇಕರಿಗೆ ಖಂಡಿತೋಕ್ತಿಯಾಗಿ ಕಾಣುತ್ತದೆ.

ಚಾರ್ವಾಕದರ್ಶನದಿಂದಾರಂಭಿಸಿ ದಶಮತಿದರ್ಶನದವರೆಗೆ ಸಂಕ್ಷೇಪವಾಗಿ ಮಾಡಿರುವ ದಿಗ್ದರ್ಶನವು, ಕೇವಲದರ್ಶನ ಸ್ವರೂಪವನ್ನು ಅತಿ ಸೂಕ್ಷ್ಮವಾಗಿ ತಿಳಿಸಿರುವದು ಮಾತ್ರವಾಗಿದೆ. ಇವೆಲ್ಲವುಗಳ ವಿಸ್ತಾರ ಕಾಲಕ್ರಮದಲ್ಲಿ ಪ್ರತ್ಯೇಕ ಗ್ರಂಥಗಳಾಗಿ ಬರಲಿವೆ.

ಚೈತನ್ಯ ಮಹಾಪ್ರಭುಗಳ ಮತಾನುಯಾಯಿಗಳಾದ ವಿದ್ಯಾಭೂಷಣ ಬಲದೇವ ಪಂಡಿತರು "ಪ್ರಮೇಯ ರತ್ನಾವಳಿ" ಎಂಬ ಗ್ರಂಥದಲ್ಲಿ ದಶಮತಿದಶನದ ನವರತ್ನಗಳೆಂದು ಶ್ಲೋಕರೂಪವಾಗಿ ರಚಿಸಿರುವ ಕೆಳಕಂಡ ವಾಕ್ಯಗಳಿಂದ ದರ್ಶನಸ್ವರೂಪ ವಿವರಣೆಯ ಮಂಗಳವನ್ನಿಲ್ಲಿ ಆಚರಿಸೋಣ !

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂಜಗತ್ತತ್ವತೋ
ಭೇದೋ ಜೀವಗಣಾಹರೇರನುಚರಾಃ ನೀಚೋಚ್ಚಭಾವಂಗತಾಃ
ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ಚತತ್ಸಾಧನಂ
ಅಕ್ಷಾದಿತ್ರಿತಯಂ ಪ್ರಮಾಣಮುಖಿಳಾಮ್ನಾಯೈಕವೇದ್ಯೋಹರಿಃ

ಸಮನ್ವಯ

ಹಿಂದೆ ವಿವರಿಸಿದಂತೆ ದರ್ಶನಗಳ ಸ್ವರೂಪವಿದೆ. ಮಾನವ ಪ್ರಾಣಿ ತನಗೆ ಸುಖದುಃಖ ಜನನಮರಣಗಳ ಅರಿವಾದ ದಿನದಿಂದ ತಾನು ಯಾರು, ಈ ಸೃಷ್ಟಿ ಹೇಗಾಗಿದೆ, ಏಕಾಗಿದೆ, ಯಾರಿಂದಾಗಿದೆ, ಎಂಬುದನ್ನು ವಿಚಾರಿಸುತ್ತ ಬಂದಿದ್ದಾನೆ. ಪಾಶ್ಚಾತ್ಯರಂತೆ ಗುಡುಗುಮಿಂಚುಗಳಿಗೆ ಹೆದರಿ ದೇವರೊಬ್ಬನನ್ನು ಕರೆದುಕೊಂಡು ಬಂದ ಕುರುಹು ಭಾರತೀಯ ದರ್ಶನಗಳಲ್ಲಿ ಕಂಡುಬರುವದಿಲ್ಲ. ಹಾಗಿದ್ದರೆ ಆದಿದರ್ಶನವೆಂಬ ಭಾವನೆಗೊಳಗಾಗಿರುವ ಚಾರ್ವಾಕದರ್ಶನದಲ್ಲಿ ಭಯದ ದೇವರು ಬಂದಿರಬೇಕಾಗಿತ್ತು.

ಭಾರತೀಯನು ಸೃಷ್ಟಿಯ ಒಂದೊಂದು ಸಂಗತಿಯನ್ನೂ ಪ್ರತ್ಯಕ್ಷವಾಗಿ ಚರ್ಚಿಸಿದ್ದಾನೆ. ಪ್ರತ್ಯಕ್ಷಕ್ಕೆ ಅತೀತವಾದುದನ್ನು ಅನುಮಾನದಿಂದ ಗ್ರಹಿಸಿದ್ದಾನೆ. ಪ್ರಯತ್ನದಲ್ಲಿ ದಾರಿತಪ್ಪಿದಾಗ ಖಂಡಿಸಿದ್ದಾನೆ. ಪ್ರತಿ ದರ್ಶನದ ಪ್ರಾರಂಭಸ್ವರೂಪ ಅನುಯಾಯಿಗಳಿಂದ ಬದಲಾಗುತ್ತ ಬಂದಿದೆ. ಹೊಸ ಹೊಸ ವಾದಶೋಧಗಳು ದರ್ಶನಗಳಲ್ಲಿ ಮಿಳಿತವಾಗಿವೆ. ದರ್ಶನಕಾರರ ಭಿನ್ನಾಭಿಪ್ರಾಯಗಳು ದ್ವೇಷಮೂಲವಲ್ಲದ ದೋಷಶೋಧನೆಯಾಗಿದೆ. ಮುಂದೆ ಬಂದ ದರ್ಶನಕ್ಕೆ ಹಿಂದಿನದು ಹಿನ್ನೆಲೆಯಾಗಿದೆ. ಹೊಸ

ದರ್ಶನ ಬಂತೆಂದು ಹಳೆಯದು ಹಾಳಾಗಿಲ್ಲ. ಯಾವದು ಏನು ಹೇಳಿದೆ, ಎಲ್ಲಿ ನಿಂತಿದೆ, ಮುಂದೆಲ್ಲಿ ಹೋಗಲಿದೆ ಎಂಬ ದೃಷ್ಟಿಯಿಂದ ನೋಡಿದರೆ— ದರ್ಶನಗಳು ಸಂಸ್ಕಾರಿಯಾದ ಮಾನವನ ಭಾವನೆಯ ಅಂತಸ್ಥಗಳಂತ ಕಂಡುಬರುತ್ತವೆ. ಅನಂತವಾದ ಸೃಷ್ಟಿಯ ಜ್ಞಾನಕ್ಕೆ ಅಂತ್ಯಬರುವದು ಹೇಗೆ?

ದೇವರನ್ನು ನಂಬದಿರುವ ಚಾರ್ವಾಕ, ಬೌದ್ಧ, ಜೈನ, ಸಾಂಖ್ಯ, ಪೂರ್ವಮೀಮಾಂಸಾ ದರ್ಶನಗಳೊಂದೊಂದರಲ್ಲೂ, ಸಮಾಜ ಕಲ್ಯಾಣವು ಪರಮಧ್ಯೇಯವಾಗಿರುವದು ಕಂಡುಬರುತ್ತದೆ. ದೇವರನ್ನು ನಂಬಿರುವ ತಾರ್ಕಿಕ, ಯೋಗ, ಅದ್ವೈತ, ವಿಶಿಷ್ಟಾದ್ವೈತ, ದ್ವೈತದರ್ಶನಗಳು ಜಗಜ್ಜನ್ಮಾದಿಕಾರಣನಾದ ದೇವರನ್ನು ಮುಂದುಮಾಡಿಕೊಂಡು, ದೇವಜೀವ ಜಗತ್ತುಗಳಿಗೆ ಇರುವ ಸಂಬಂಧವನ್ನು ಪರಿಶೀಲಿಸಿ, ತನ್ಮೂಲಕ ಶಾಂತಿಯನ್ನು ಪ್ರಸ್ಥಾಪಿಸಲು ಯತ್ನಿಸಿವೆ. ಬೌದ್ಧ, ಅದ್ವೈತದರ್ಶನಗಳು ಅಭೇದವಾದದಲ್ಲಿ ನಿಂತಿವೆ. ತಾರ್ಕಿಕ, ಜೈನ, ಸಾಂಖ್ಯ, ಪೂರ್ವಮೀಮಾಂಸಾ, ವಿಶಿಷ್ಟಾದ್ವೈತ, ದ್ವೈತದರ್ಶನಗಳು ಭೇದವಾದದಲ್ಲಿ ನಿಂತಿವೆ.

ಸೃಷ್ಟಿ ವಿಚಾರದಲ್ಲಿ—ಪಾಶ್ಚಾತ್ಯ ವೇದಾಂತಿಗಳ ವಾದಸರಣಿ ಭಾರತೀಯರ ವಾದಸರಣಿಯಂತೆಯೇ ಇದೆ. ಅಪೌರುಷೇಯ ಶಬ್ದಪ್ರಮಾಣವೆಂಬ ವೇದದಂಥ ಹಿನ್ನೆಲೆ ಪಾಶ್ಚಾತ್ಯರಿಗಿಲ್ಲ. ಇದು ಒಂದು ವಿಧದಲ್ಲಿ ಭೂಷಣವಾಗಿರುವಂತೆ ದೂಷಣವೂ ಆಗಿದೆ. ಪಾಶ್ಚಾತ್ಯ ವೇದಾಂತಿಗಳಲ್ಲಿ ಪ್ರಮುಖರಾದ ಹ್ಯೂಂ, ಕ್ಯಾಂಟ್, ಮಿಲ್ ಮೊದಲಾದ ಪಂಡಿತರು ಪ್ರಕೃತಿಯನ್ನು ಈಶ್ವರನಂತೆ ನಿತ್ಯವಸ್ತುವೆಂದು ಪರಿಗಣಿಸಿರುತ್ತಾರೆ. ನಿತ್ಯವಾದ ಪ್ರಕೃತಿಯ ಪರಮಾಣುಗಳನ್ನು ವಿಶೇಷ ರೀತಿಯಿಂದ ಜೋಡಿಸಿ ಸೃಷ್ಟಿಮಾಡುವ ಕೈವಾಡ, ಸೃಷ್ಟಿಕರ್ತನದೆಂದು ಒಪ್ಪುತ್ತಾರೆ. ಈ ಕಾರಣದಿಂದ ಈಶ್ವರನು ಸೃಷ್ಟಿಗೆ ನಿಮಿತ್ತಕಾರಣ ಮಾತ್ರನಾಗುತ್ತಾನೆ. ಆಧುನಿಕ ವಿಜ್ಞಾನಶಾಸ್ತ್ರವು ಪ್ರತಿ ಪರಮಾಣುಗಳಲ್ಲಿ ಆಂತರಿಕ ಚೈತನ್ಯವೊಂದು ಇದ್ದೇ ಇರುವದೆಂದು ಸಮರ್ಥಿಸುತ್ತದೆ. ಪರಮಾತ್ಮನಂತೆ ಪ್ರಕೃತಿಗೆ ನಿತ್ಯತ್ವವೂ ಪರಮಾತ್ಮನಿಗೆ ನಿಮಿತ್ತಕಾರಣತ್ವವೂ ವಿಜ್ಞಾನದಿಂದ ಸಾಧಿ

ಸಲ್ಪಡುವಂತೆ ಕಾಣುತ್ತದೆ. ಅಂದ ಮಾತ್ರಕ್ಕೆ ವಿಜ್ಞಾನವು ಈಶ್ವರನನ್ನು ಒಪ್ಪಿಕೊಂಡಿರುವದೆಂದು ಅಭಿಪ್ರಾಯವಲ್ಲ. ತಿಳಿಯಲಸಾಧ್ಯವಾದ ಏನೋ ಒಂದು ಚೈತನ್ಯವಿರಬೇಕೆಂಬ ಸಂಶಯದಲ್ಲಿ ಇನ್ನೂ ಇರುವದು ವಿಜ್ಞಾನ. ಫ್ಲಿಂಟ್ ಮಹಾಶಯನು ಮಾತ್ರ ಅಖಂಡವಾದ ಪರಮಾಣುವಿನಲ್ಲೂ ಆಂತರಿಕ ಚೈತನ್ಯ ಪ್ರಭಾವವಿರುವದಾದರೆ, ಆ ಪರಮಾಣುವನ್ನೇ ಈಶ್ವರನು ಸೃಷ್ಟಿಸಿದನೆಂದು ಏಕೆ ತಿಳಿಯಬಾರದೆಂದು ಮೇಲ್ಕಂಡ ವಿದ್ವಾಂಸರುಗಳನ್ನು ಆಕ್ಷೇಪಿಸುತ್ತಾನೆ ಫ್ಲಿಂಟನಮೇಲೆ ಈಸಾಯಿ ಧರ್ಮದ ಪ್ರಭಾವವಿರುವದರಿಂದ ಹಾಗೆ ಅವನ ಪ್ರಶ್ನೆ ಹುಟ್ಟಿದೆ.

ಇಸಾಯಿ, ಇಸ್ಲಾಂ, ಧರ್ಮಗಳು ಪ್ರಕೃತಿಯನ್ನೂ ಜೀವರನ್ನೂ ಈಶ್ವರನು ಉತ್ಪತ್ತಿಮಾಡಿದನೆಂಡು ಹೇಳುತ್ತವೆ. ಇತ್ತೀಚೆಗೆ ಮೈಸೂರಿನ ಪಂಡಿತವರ್ಯರೊಬ್ಬರು ಜೀವರ ಸ್ವರೂಪಸೃಷ್ಟಿಗೂ ಈಶ್ವರನು ಕಾರಣ ನೆಂಬ ವಾದವನ್ನು ಬಲು ಸುಂದರವಾಗಿ ಮಂಡಿಸಿದ್ದಾರೆ. ಈ ಅಭಿಪ್ರಾಯ ಹೃದಯಂಗಮವಾಗಿರುವಂತೆ ಕಂಡುಬಂದರೂ, ವಾದದಲ್ಲಿ ಸಾಧಿಸಿ ನಿಲ್ಲು ವಂತಹುದಲ್ಲ.

ಸೃಷ್ಟಿಯ ಮೂಲಕಾರಣವನ್ನು ಕಂಡುಹಿಡಿಯುವದು ದರ್ಶನ ಶಾಸ್ತ್ರದ ಗುರಿಯಾಗಿರುತ್ತದೆ ಇದನ್ನು ಶಾಸ್ತ್ರಕಾರರು ಪರ್ಯಾಪ್ತಕಾರಣ ವೆಂದು ಕರೆಯುತ್ತಾರೆ. ಪರ್ಯಾಪ್ತಕಾರಣ ಒಂದೇ ಒಂದಿರಬೇಕೆಂದು ನಿಯಮವಿಲ್ಲ. ಯಾವದಕ್ಕೆ ಅನ್ಯಕಾರಣಗಳ ಅವಶ್ಯಕತೆಯಿರುವದಿಲ್ಲವೋ ಅದಕ್ಕೆ ಪರ್ಯಾಪ್ತಕಾರಣವೆಂದು ಹೆಸರು. ಈಶ್ವರನು ಸಹ ಪರ್ಯಾಪ್ತ ಕಾರಣನೆಂದು ಈ ಅರ್ಥದಿಂದ ಮಾತ್ರ ತಿಳಿಯಬೇಕು. ಸಮಾನವಸ್ತು ವಿನಿಂದ ಸಮಾನವಸ್ತುವಿನ ನಿರ್ಮಾಣವಾಗುವದಲ್ಲದೆ ಅಸಮಾನ ವಸ್ತು ವಿನ ನಿರ್ಮಾಣವಾಗುವದಿಲ್ಲ. ಪ್ರಕೃತಿಯನ್ನು ಈಶ್ವರನು ನಿರ್ಮಿಸಿದ ನೆಂದು ತಿಳಿಯುವದು ತಿಳಿಗೇಡಿತನವಾಗುತ್ತದೆ. ಅಭೌತಿಕ ವಸ್ತುವಿ ನಿಂದ ಭೌತಿಕ ವಸ್ತುವಿನ ನಿರ್ಮಾಣವೆಂದಿಗೂ ಆಗಲಾರದು. ಈಶ್ವರ ನಂತೆ ಪ್ರಕೃತಿಯು ನಿತ್ಯವಸ್ತುವಾಗಿರುತ್ತದೆ. ಜೀವರೂ ಅದರಂತೆ ನಿತ್ಯ ರಾಗಿರುತ್ತಾರೆ. ಜೀವರನ್ನು ಈಶ್ವರನು ಸೃಷ್ಟಿಸಿದನೆಂದರೆ ಪ್ರಪಂಚದ ಸಕಲ ದುಃಖಗಳಿಗೆ ಅವನು ಕಾರಣನಾಗುತ್ತಾನೆ.

ಶೂನ್ಯದಿಂದ ಜಗತ್ಸೃಷ್ಟಿಯಾಯಿತೆನ್ನುವದಂತು ಬೀಜವಿಲ್ಲದೆ ವೃಕ್ಷ ಹುಟ್ಟಿತೆಂದು ಹೇಳಿದಂತಾಗುತ್ತದೆ. ಪರ್ಯಾಪ್ತಕಾರಣನಾದ ಈಶ್ವರನೊಬ್ಬನೇ ಇದ್ದು ಅವನು ಜಗತ್ಸೃಷ್ಟಿಮಾಡಿದನೆಂದರೆ—ಏತಕ್ಕಾಗಿ ಮಾಡಿದ? ಯಾರಿಗಾಗಿ ಮಾಡಿದ? ತನಗಾಗಿ ಮಾಡಿಕೊಂಡನೆ? ಪರರಿಗಾಗಿ ಮಾಡಿದನೆ? ಎಂಬ ಪ್ರಶ್ನೆಗಳು ಒಂದರಮೇಲೊಂದು ಹುಟ್ಟುತ್ತವೆ. ತನ್ನನ್ನು ತಾನೇ ಸೃಷ್ಟಿಸಿಕೊಂಡನೆಂದರೆ, ತನ್ನ ಅಪೂರ್ಣತೆಯನ್ನೂ ಅವಶ್ಯಕತೆಯನ್ನೂ ಸ್ಥಾಪಿಸಿಕೊಂಡಂತಾಗುತ್ತದೆ. ಅನ್ಯರಿಗಾಗಿ ಅವನು ಸೃಷ್ಟಿ ಮಾಡಿದನೆಂದರೆ, ಅವನ ಪರಿಪೂರ್ಣತೆಗೆ ಕುಂದಕ ಬರುವದಿಲ್ಲ. ಸೃಷ್ಟಿಗೆ ಆಧಾರವಸ್ತು ನಿತ್ಯವಾಗಿದ್ದ ವಿನಾ ಸೃಷ್ಟಿಗೆ ಕಾರಣವಿರುವದಿಲ್ಲ.

ಜೇಡರಹುಳುವಿನಂತೆ ತನ್ನ ಇಚ್ಛಾಮಾತ್ರದಿಂದ ಸೃಷ್ಟಿಮಾಡಿದನೆಂದರೆ, ಜೇಡರಹುಳುವಿನ ಉಪಮಾನವು ಸಂಗತವಾಗುವದಿಲ್ಲ. ಜೇಡರಹುಳುವು ರಚಿಸುವ ಪಂಜರವು, ಹುಳುವಿನೊಳಗಿರುವ ಚೇತನದ ಪ್ರೇರಣೆಯಿಂದ, ಅದಕ್ಕೆ ಅಂಟಿಕೊಂಡಿರುವ ಪ್ರಾಕೃತಶರೀರದಿಂದಾಗುತ್ತದೆ. ಜೇಡರಹುಳುವಿನ ಜೀವ ಈಶ್ವರನಂತಿದ್ದರೆ, ಅದರ ದೇಹ ಪ್ರಕೃತಿಯಂತಿರುತ್ತದೆ. ಅಂತೆಯೇ ಪ್ರಕೃತಿಯ ಸಹಾಯದಿಂದ ಈಶ್ವರನು ಜಗತ್ಸೃಷ್ಟಿ ಮಾಡುತ್ತಾನೆಂದು ಅರ್ಥಮಾಡಿಕೊಳ್ಳಬೇಕು.

ಈಶ್ವರನು ಜೀವಸ್ವರೂಪವನ್ನೇ ಸೃಷ್ಟಿಸಿ ದೇಹವನ್ನೂ ಏಕೆ ಕೊಡಬಾರದೆಂದು ಕೇಳಿದರೆ, ಹಿಂದೆ ಹೇಳಿದಂತೆ ಅವನಿಗೆ ಅವಶ್ಯಕತೆಯೇನೆಂದು ಮತ್ತೆ ಕೇಳಬೇಕಾಗುತ್ತದೆ. ಜೀವರಿಗೆ ಪ್ರಾಪ್ತವಾಗುವ ಸಕಲ ದುಃಖಗಳ ಅಪರಾಧವನ್ನು ಅವನ ತಲೆಯ ಮೇಲೆ ಹೊರಿಸಬೇಕಾಗುತ್ತದೆ. ಈ ಎಲ್ಲ ವಿವಾದಗಳನ್ನೂ ಬಿಟ್ಟು ನಿತ್ಯರಾದ ಜೀವರ ಸ್ವರೂಪಾಭಿವ್ಯಕ್ತಿಗಾಗಿ ಈಶ್ವರನು ಪ್ರಕೃತಿಯ ಸಹಾಯದಿಂದ ದೇಹನಿರ್ಮಾಣಮಾಡಿ ಸೃಷ್ಟಿಯನ್ನು ರಚಿಸಿದನೆಂದರೆ, ಜೀವರ ಯೋಗ್ಯತೆಗೆ ತಕ್ಕ ಫಲವನ್ನು ಕೊಟ್ಟು ಸಂರಕ್ಷಿಸುವ ರಾಜಾಧಿರಾಜನಂತೆ ಈಶ್ವರನು ನ್ಯಾಯಾಧೀಶನಾಗುತ್ತಾನೆ.

ಈ ತೊಡಕುಗಳ ಬಿಡುಗಡೆಗೆ ಗೀತಾಚಾರ್ಯನಾದ ಶ್ರೀ ಕೃಷ್ಣನು

ಮಹದ್ಯೋನಿಯೆನಿಸಿರುವ ಮಹದ್ಬ್ರಹ್ಮ ಅಂದರೆ ಪ್ರಕೃತಿಯಲ್ಲಿ ನಾನು ಗರ್ಭವನ್ನು ಧಾರಣೆಮಾಡುತ್ತೇನೆ ಅಂದರೆ ಪ್ರಕೃತಿಯಲ್ಲಿ ಜ್ಞಾನಮಯ ಕ್ರಿಯಾಶಕ್ತಿಯನ್ನು ಪ್ರವೇಶಗೊಳಿಸುತ್ತೇನೆ ಎಂಬ ಅರ್ಥದ—

"ಮಹದ್ಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂದಧಾಮ್ಯಹಂ" ಎಂಬ ವಾಕ್ಯವನ್ನು ಅಪ್ಪಣೆಕೊಡಿಸಿರುತ್ತಾನೆ.

ಸಾರಾಂಶದ ಮಾತನ್ನು ಮತ್ತೆ ಬರೆಯಬೇಕೆಂದರೆ—ಚಾರ್ವಾಕ ದರ್ಶನದ ವಿನಾ ದೇವರನ್ನು ನಂಬದ ಅಥವ ದೇವರ ಸ್ಥಾನದಲ್ಲಿ ಸಿದ್ಧಾತ್ಮರನ್ನು ಪೂಜಿಸದ ದರ್ಶನವೊಂದೂ ಕಂಡುಬಂದಿಲ್ಲ. ಜನಗಳ ಮನಸ್ಸಿನ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಿರುವ ವೈಜ್ಞಾನಿಕರು, ಸೃಷ್ಟಿ ಹೇಗಾಗಿದೆ ಎಂಬುದರ ಪರಿಶೀಲನೆಯಲ್ಲಿರುವರಲ್ಲದೆ, ಏಕಾಗಿದೆ ಯಾರಿಂದಾಗಿದೆ, ಎಂಬ ತೊಡಕಿನಲ್ಲಿ ಸಿಲುಕಿಲ್ಲ. ಈಶ್ವರನಂತೆ—ಜಡಪ್ರಕೃತಿಯೂ ಜೀವರಾಶಿಯೂ ಎಂದಿನಿಂದ ಇದ್ದೇ ಇವೆಯೆಂದು ಸ್ಥಾಪಿಸಿರುವ ದರ್ಶನಗಳ ಸಂಖ್ಯೆ ಹೇರಳವಾಗಿದೆ. ದೇವರ, ಜೀವರ ಪ್ರಶ್ನೆ ಬಂದಕೂಡಲೇ ದೇವರು ಸರ್ವನಿಯಾಮಕನೆಂದೂ, ಅವನ ಅನುಗ್ರಹಪಡೆದು ಜೀವರು ಜೀವನ್ಮುಕ್ತರಾಗಬೇಕೆಂದೂ ಸ್ಫುರಿಸಿ ಬರುವ ಭಕ್ತಿಮಾರ್ಗ ಸಕಲ ದೇಶಗಳಲ್ಲೂ ಮುಂದೆ ಬಂದು ನಿಂತಿರುವದು ಕಂಡುಬರುತ್ತದೆ. ಭಕ್ತರ ಬ್ರಹ್ಮಾನುಭವದ ಚರಿತ್ರೆಗಳಿಗೆ ಯಾವ ದೇಶಗಳಲ್ಲೂ ಕೊರತೆಯಿಲ್ಲ. ಜ್ಞಾನದಿಂದ ಕರ್ಮದಿಂದ ಸಾಧಿಸಲಾರದುದನ್ನು ಭಕ್ತರು ಭಕ್ತಿಯಿಂದ ಸಾಧಿಸಿರುತ್ತಾರೆ.

ದೇವರನ್ನೊಪ್ಪದಿರುವ ಬೌದ್ಧ ಜೈನ ಸಾಂಖ್ಯದರ್ಶನಗಳಲ್ಲಿ ತಮ್ಮಲ್ಲಾದ ಸಿದ್ಧಪುರುಷರನ್ನಿಟ್ಟುಕೊಂಡು, ಅವರಲ್ಲಿ ಭಕ್ತಿಮಾಡಿ, ಮುಕ್ತಿ ಪಡೆಯಬೇಕೆಂಬ ಉಪದೇಶವಿದೆ ಜೀವ ಬ್ರಹ್ಮೈಕ್ಯವನ್ನು ಉಪದೇಶಿಸಿದ ಅದ್ವೈತದರ್ಶನದಲ್ಲಿ ಮೋಕ್ಷಸಾಧನ ಸಾಮಗ್ರಿಗಳಲ್ಲಿ ಭಕ್ತಿ ದೊಡ್ಡದೆಂಬ ಉಪದೇಶವಿದೆ. ಜೀವೇಶ್ವರ ಭೇದವಾದವನ್ನೊಪ್ಪಿರುವ ತಾರ್ಕಿಕ, ಯೋಗ ವಿಶಿಷ್ಟಾದ್ವೈತ, ದ್ವೈತದರ್ಶನಗಳಲ್ಲಿ ಭಕ್ತಿಗೆ ಅಗ್ರಸ್ಥಾನವಿದೆಯೆಂಬುದನ್ನು ಉಲ್ಲೇಖಿಸಬೇಕಾಗಿಲ್ಲ. ಅಂತು ಎಲ್ಲ ದರ್ಶನಗಳಲ್ಲೂ ಭಕ್ತಿಗೆ ತನ್ನ ತನ್ನ ರೀತಿಯಿಂದ ಮಹತ್ವಕೊಟ್ಟಿರುವದು ಕಂಡುಬರುತ್ತಿದೆ.

ಪ್ರಸ್ಥಾನತ್ರಯಗಳಲ್ಲೊಂದಾದ ಭಗವದ್ಗೀತೆಯು ದೊಡ್ಡದೊಂದು ಭಕ್ತಿ ಶಾಸ್ತ್ರವಾಗಿದೆ. ಗೀತೆಯ ಕರ್ಮಯೋಗ ಜ್ಞಾನಯೋಗಗಳಲ್ಲಿ ಸಹ ಭಕ್ತಿ ತುಂಬಿ ತುಳುಕುತ್ತಿದೆ. ಗೀತಾಚಾರ್ಯನಾದ ಶ್ರೀಕೃಷ್ಣನು—

ಮನ್ಮನಾಭವ ಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು
ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇಪ್ರಿಯೋಸಿಮೇ
ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂವ್ರಜ
ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿಮಾಶುಚಃ

ಎಂಬ ವಾಕ್ಯಗಳಿಂದ ಭಕ್ತಿಶಾಸ್ತ್ರವನ್ನುಪದೇಶಿಸಿರುತ್ತಾನೆ.

ವರ್ತಮಾನಕಾಲದಲ್ಲಾದರೋ-ಹಿಂದೂಜನತೆಗೆ ಎಂದೂ ಕಂಡು ಕೇಳದ ಆಪತ್ತುಗಳು ಬಂದೊದಗಿವೆ. ಯಾವ ಸದುದ್ದೇಶದಿಂದ ವರ್ಣಾಶ್ರಮ ಪದ್ಧತಿಗಳೇರ್ಪಟ್ಟವೋ ಅವೆಲ್ಲವೂ ಅಪಾರ್ಥವಾಗಿಬಿಟ್ಟವೆ. ತತ್ವದೃಷ್ಟಿಯಿಂದ ಪದ್ಧತಿಗಳಲ್ಲಿ ತಪ್ಪಿರದಿದ್ದರೂ, ಹೊಂದಿಕೊಂಡು ನಡೆಯುವ ವ್ಯಕ್ತಿಗಳು ಅಜ್ಞಾನದಿಂದ ಅಪರಾಧಿಗಳಾಗಿದ್ದಾರೆ. ಭರತಖಂಡದ ಧರ್ಮ ಶರೀರವು ವ್ರಣಮಯವಾಗಿದೆ. ಒಂದು ವ್ರಣಕ್ಕೆ ಔಷಧ ಬಳಿದು ವಾಸಿಮಾಡಿದರೆ ಪಕ್ಕದಲ್ಲಿ ದೊಡ್ಡದೊಂದು ವ್ರಣ ಹುಟ್ಟಿ ಬೆಳೆಯುತ್ತದೆ. ಮತಪ್ರವರ್ತಕರುಗಳಿಂದ ಮತದ ಪಾಲನೆಯಾಗುತ್ತಿಲ್ಲ. ರಾಜರಿಂದ ಪ್ರಜೆಗಳ ಪಾಲನೆಯಾಗುತ್ತಿಲ್ಲಿ. ಜನತೆಗೆ ಹಳೆಯ ಕಟ್ಟಡದಲ್ಲಿರುವ ಮನಸ್ಸಿಲ್ಲ. ಸಮಾಜದಲ್ಲಿ ಹೊಸ ಕಟ್ಟಡ ಕಟ್ಟುವ ಕಾರ್‍ಯಕರ್ತರಿಲ್ಲ. ಸಮಾಜದ ಏರುಪೇರುಗಳು ತಾನಾಗಿ ಅಳಿದುಹೋಗುತ್ತಲಿವೆ. ವಿಧರ್ಮಿಗಳ ಅಧಿಕಾರಲಾಲಸೆ ಧರ್ಮದ ಹುಚ್ಚಾಗಿ ಪೈಶಾಚಿಕ ಧರ್ಮಕ್ಕೆ ಧರ್ಮಾಂತರ ಮಾಡುತ್ತಲಿದೆ. ಗುಡಿಗಳು ಗುಂಡಾಂತರವಾಗಿವೆ. ಹಿಂದುಗಳು ಕಂದಿ ಹೋಗಿದ್ದಾರೆ. ವಂಗದೇಶದಲ್ಲಿ ನಡೆದ ಅತ್ಯಾಚಾರಗಳು ಪ್ರಪಂಚದಲ್ಲಿ ಮತ್ತೆಲ್ಲೂ ನಡೆದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಿಂದುಗಳು ಸಂಘಟಿತರಾಗಬೇಕು. ಹಳೆಯ ಹಳಸಿದ ಜಾತಿಮತಗಳ ಅರ್ಥ ಬದಲಾಗಬೇಕು.

ಭಾರತಾದಿ ಇತಿಹಾಸ ಗ್ರಂಥಗಳಲ್ಲಿ ಅತಿಹಿಂದಿನ ಕಾಲದಲ್ಲಿ ಮಾನವ ಸಾಮಾನ್ಯರಲ್ಲಿ ಜಾತಿ ವಿವಾದಗಳಿದ್ದದ್ದು ಕಂಡುಬರುವದಿಲ್ಲ. ತಮ್ಮ ತಮ್ಮ

ಕರ್ಮಗಳಿಂದ ಜನರು ಕೆಳವಟ್ಟಕ್ಕಿಳಿದರೆಂಬುದು ಒಡೆದುಕಾಣುತ್ತಿದೆ. ಮತ್ತದೇ ಜನರು ಉತ್ತಮ ಕರ್ಮಗಳಿಂದ ಮೇಲ್ತರಗತಿಗೇರಲು ಬಯಸು ತ್ತಿದ್ದಾರೆ. ಅಂಥವರನ್ನು ಮೇಲ್ತರಗತಿಯಲ್ಲಿರುವ ಜನರು ತಡೆಯುವುದು ಎಂದಿಗೂ ಸಾಧ್ಯವಲ್ಲ. ಹಿಂದುಗಳ ಸಂಖ್ಯಾಬಲ ಬೆಳೆದ ವಿನಾ, ಹಿಂದು ಗಳಲ್ಲಿ ಸಂಘಟನೆಯಾದ ವಿನಾ, ಹಿಂದೂ ಸಮಾಜವೇ ಉಳಿಯುವ ಲಕ್ಷಣ ಕಂಡುಬರುವದಿಲ್ಲ. ಹಿಂದುಗಳ ಅನುಯಾಯಿಗಳಾಗಿರುವ ಆರು ಕೋಟಿ ಹರಿಜನರ ಸಂಖ್ಯಾಬಲವನ್ನು ಉಪೇಕ್ಷಿಸುವ ಕಾಲವಿದಲ್ಲ. ಸಾವಿರಾರು ವರ್ಷಗಳಿಂದ ಆಯಾ ಕಾಲಪರಿಸ್ಥಿತಿಗೆ ತಕ್ಕಂತೆ ಹರಿಜನರ ಉದ್ಧಾರ ನಡೆದಿರುವ ಇತಿಹಾಸಕ್ಕೆ ನಮ್ಮ ದೇಶದಲ್ಲಿ ಕೊರತೆಯಿಲ್ಲ. ಆ ಕಾರ್ಯವು ಸತತವಾಗಿ ನಡೆದು ಬಂದಿದ್ದರೆ ಈಗಿನ ವಿಷಮ ಪ್ರಶ್ನೆಯಿರುತ್ತಿರಲಿಲ್ಲ. ಒಂದೂವರೆ ಶತಮಾನದ ಹಿಂದೆ ಶಿಷ್ಟಾಚಾರಸಂಪನ್ನರಾಗಿದ್ದ ವಿಜಯ ದಾಸರಂಥವರು ಹಾಡಿರುವ ಸುಳಾದಿಯ ವಾಕ್ಯಗಳು ಇಂದಿನವರಿಗೆ ಮಾರ್ಗದರ್ಶಕಗಳಾಗಿವೆ.

ಸುಳಾದಿ

ಹೊಲೆಯನಾವನು ಈ ಕಲಿಯುಗದೊಳಗೆ ನಿ
ಶ್ಚಲವಾಗಿ ತಿಳಿವುದು ಸುಲಭ ಮಾನವರೇ ॥ ಪ ॥

ಹಲವು ಮಾತೇನು ನಿರ್ಮಲನಾಗಿ ಕೋಪವ
ಕಳೆಯಲರಿಯದವ ಹೊಲೆಯ ಶುದ್ಧ ಹೊಲೆಯ
ಬಳಗಬರಲು ಬಿಟ್ಟು ಒಳಗೆ ಉಂಬುವ ಹೊಲೆಯ
ಕುಲಗೇಡಿಯಾಗಿ ವಂಶವಕೆಡಿಸುವ ಹೊಲೆಯ
ಇಳೆಯವಲ್ಲಭ ನಮ್ಮ ವಿಜಯವಿಠಲನ್ನ
ತಿಳಿದು ಪೂಜಿಸದವ ಮಲಿನ ಹೊಲೆಯ ॥ ೧ ॥

ಅನ್ನದಾನವನ್ನು ಮಾಡದಿದ್ದವ ಹೊಲೆಯ
ಹೆಣ್ಣಿನ ಬಣ್ಣಕ್ಕೆ ಸೋಲುವನು ಹೊಲೆಯ
ತನ್ನ ಪರಾಕ್ರಮ ಹೇಳಿಕೊಂಬುವ ಹೊಲೆಯ

ಅನ್ಯಜನರ ಸುಖನೋಡಿ ಬಳಲುವ ಹೊಲೆಯು
ಬೆನ್ನಬಿದ್ದನ್ನ ಒಪ್ಪಿಸಿಕೊಡುವ ಹೊಲೆಯು
ಪನ್ನಂಗಶಯನ ಶ್ರೀವಿಜಯ ವಿಠಲನ
ಸನ್ನುತಿಸಿ ಜ್ಞಾನಪಡೆಯದಿದ್ದವ ಹೊಲೆಯು ॥ ೨ ॥

ಶ್ರವಣ ಕೇಳುತಲೆದ್ದು ಹೋಗುವನೇ ಹೊಲೆಯು
ಕವಿಗಳನಾವಾಗ ನಿಂದಿಸುವನು ಹೊಲೆಯು
ಶವ ಕೇರಿಯೊಳಗಿರಲು ಉಂಬುವನು ಹೊಲೆಯು
ಕಿವಿಗೊಟ್ಟುಕೊಂಡೆಯು ಕೇಳುವನೇ ಹೊಲೆಯು
ಸವತಿಯಮೇಲೆ ಮಗಳ ಕೊಡುವನು ಹೊಲೆಯು
ಬವರದಲ್ಲಿ ನೃಪನ ಒಪ್ಪಿಸುವನು ಹೊಲೆಯು
ಪವಮಾನನುತ ನಮ್ಮ ವಿಜಯವಿಠಲನಂಘ್ರಿ
ನವಭಕುತಿಯಲ್ಲಿ ಅರ್ಚಿಸದವ ಹೊಲೆಯು ॥ ೩ ॥

ಬಿಸಜನಾಭನ ದಿವಸ ಮಾಡದಿದ್ದವ ಹೊಲೆಯು
ಆಶನಘಾತಕನಾಗಿ ತಿರುಗುವನೇ ಹೊಲೆಯು
ಶಿಶುಪಶುಗಳ ಒದ್ದು ನೂಕುವನೇ ಹೊಲೆಯು
ಸೊಸೆಯು ಮಕ್ಕಳಂತೆ ನೋಡದಿದ್ದವ ಹೊಲೆಯು
ಹಸನಾದ ಹರಿಪಾದ ತೀರ್ಥಕೊಳದವ ಹೊಲೆಯು
ವಸುಧೆಯೊಳನರ್ಪಿತ ಅನ್ನವುಂಬುವ ಹೊಲೆಯು
ಅಸುರಾರಿ ವಿಜಯವಿಠಲನ ದೈವವೆಂದು
ಕುಶಲದಿ ಹಾಡಿ ಪಾಡದವನೆ ಹೊಲೆಯು ॥ ೪ ॥

ಪ್ರಕೃತಪರಿಸ್ಥಿತಿಯಲ್ಲಾದರೋ—

ಸರ್ವನಾಶೇ ಸಮುತ್ಪನ್ನೇ ಅರ್ಧಂತ್ಯಜತಿಪಂಡಿತಃ
ಆತ್ಮನಾಶೇ ಸಮುತ್ಪನ್ನೇ ಸರ್ವಂತ್ಯಜತಿಪಂಡಿತಃ

ಎಂಬಂತೆ ಹಿಂದೂಜನತೆಗೆ ಆತ್ಮನಾಶಕಾಲ ಬಂದೊದಗಿದೆ. ಸರ್ವ ಹಳೆಯ ಭಾವನೆಗಳನ್ನು ಬಿಟ್ಟು ಧರ್ಮಕ್ಕೆ ಹೊಸ ಸ್ವರೂಪ ಕೊಟ್ಟು

ಬಾಳಬೇಕಾಗಿದೆ. ಜನ ಸಾಮಾನ್ಯರಿಗೆ ಒಂದೇ ಬಗೆಯ ಮತದ ಉಪದೇಶವಿರಬೇಕಾಗಿದೆ. ದೇವರ ಧರ್ಮದ-ಹೆಸರಿನಲ್ಲಿ ವ್ಯಕ್ತಿಗಳ ಏರುಪೆರುಗಳಿರದಂತೆ ನೋಡಿಕೊಳ್ಳಬೇಕಾಗಿದೆ. ಪ್ರಾರ್ಥನಾಲಯಗಳಲ್ಲಿ ಸರ್ವರೂ ಮಿಳಿತರಾಗಿ ಸಂಘಶಕ್ತಿ ಬೆಳೆಯಬೇಕಾಗಿದೆ. ಇಂದಿಗೂ ಈ ಭಾರ ಬ್ರಾಹ್ಮಣರ ಮೇಲಿದೆ. ಮಠಾಧಿಪತಿಗಳ ಮೇಲಿದೆ.

ಮತವು ಸಮಾಜವನ್ನು ಕಟ್ಟುವ ಒಂದು ವಿಧವಾದ ಶಕ್ತಿ. ಮತಶಕ್ತಿಯಂತೆ ಸಮಾಜವನ್ನು ಕಟ್ಟಲಾರದು ರಾಜಕೀಯ ಶಕ್ತಿ. ಮುಸಲ್ಮಾನರನ್ನು ಕಟ್ಟಿರುವದು ಮತದ ಶಕ್ತಿ. ಮದಾಂಧತೆಯಿಂದ ಆ ಜನರು ಏನುಮಾಡುವದಕ್ಕೂ ಹಿಂದೆಗೆಯದಿರಲು ಕಾರಣವಾಗಿರುವದು ಅವರ ಮತಶಕ್ತಿ. ಅವರಿಗೆ ಸತ್ಯಕ್ಕಿಂತ ದೊಡ್ಡದೆನಿಸಿರುವದು ಮತಶಕ್ತಿ.

ಹಿಂದೂ ಜನರಲ್ಲಿ ಮತವು ಶಕ್ತಿಯಾಗಿ ಪರಿಣಮಿಸದಿರಲು ಕಾರಣವಾಗಿರುವದು ಜಾತಿಭೇಧ. ಅಲ್ಪಸಂಖ್ಯಾಕರಿಂದ ಬಹು ಸಂಖ್ಯಾಕ ಹಿಂದುಗಳಿಗೆ ಯಾವಾಗಲೂ ಹಾನಿತಟ್ಟುತ್ತಿರುವದು ಮಹಾಭೇದ. ಇಂತಹ ಭೇದ ನಿವಾರಣೆಗೆ ಹೋಗಬೇಕು ಜಾತಿವಾದ

ಮತದ ಉಪದೇಶ ಸರ್ವರಿಗೂ ಸಮಾನವಾಗಿರದಿದ್ದರೆ ಮತವನ್ನು ಅವಲಂಬಿಸುವರ್‍ಯಾರು? ಪ್ರಾರ್ಥನಾಲಯಗಳಲ್ಲಿ ಸರ್ವರಿಗೂ ಪ್ರವೇಶವಿಲ್ಲದಿದ್ದರೆ ಆಪತ್ತು ಬಂದಾಗ ಪ್ರಾರ್ಥನಾಲಯಗಳನ್ನು ರಕ್ಷಿಸುವರ್‍ಯಾರು? ಮತಕ್ಕೆ ಆಪತ್ತು ಬಂದಾಗ ಮತೀಯರನ್ನು ಪಾಲಿಸುವರ್‍ಯಾರು? ಇವೆಲ್ಲವೂ ಹೊಸ ಪ್ರಶ್ನೆಗಳಾಗಿವೆ.

ಹೊಸದಾಗಿ ಹುಟ್ಟಿದ ಪ್ರಶ್ನೆಗೆ ಹೊಸ ರೀತಿಯಿಂದ ಉತ್ತರಕೊಡಲು ಸಮರ್ಥವಾಗಿರದಿದ್ದರೆ ಆ ಮತವು ಸನಾತನವಾಗಿ ನಿಲ್ಲುವದಿಲ್ಲ. ಮಲೆತ ನೀರಿನಂತೆ ನಿಂತಮತವು ನಾರದಿರುವದಿಲ್ಲ.

ಈ ಎಲ್ಲ ಪರಿಸ್ಥಿತಿಗಳನ್ನರಿತ ರಾಜಕೀಯಧುರೀಣರು ಸಮಾಜ ಸುಧಾರಣಾ ಕಾರ್ಯದಲ್ಲಿ ತೊಡಗಿದ್ದಾರೆ. ರಾಜಕೀಯಧುರೀಣರು ನಾಸ್ತಿಕರಲ್ಲ. ಸಂಪ್ರದಾಯಕ್ಕೆ ಕಟ್ಟುಬಿದ್ದ ಜನರ ಮನಸ್ಸು ನೋಯುತ್ತಿರುವದು ನಿಜ. ನೊಂದ ಮನಸ್ಸಿನಿಂದ ಬೆಂದ ನುಡಿಗಳು ಬರುವದು ನಿಜ.

ಈಗ ಬೇಕಾಗಿರುವದು ನಿಂತಲ್ಲಿ ನಿಲ್ಲದೆ ಮನಸ್ಸಿನ ಪರಿವರ್ತನೆಯಾಗುವದು ಮಾತ್ರ. ಪರಿವರ್ತನೆಗೊಳಗಾಗದವರ ಮೇಲೆ ರಾಜಶಾಸನ ಹುಟ್ಟುವದು ಸ್ವಭಾವ. ಶಾಸನ ಮೀರಿದರೆ ದಂಡನೆಯಾಗುವದೂ ಸ್ವಭಾವ.

ಈ ಎಲ್ಲ ಪರಿಸ್ಥಿತಿಗಳನ್ನರಿತು ಮತದ ಮುಂದಾಳುಗಳು, ಮಠಾಧಿಪತಿಗಳು, ಸಮಾಜ ಸಂಘಟನೆಗೆ ಕಟಿಬದ್ಧರಾಗಿ ನಿಲ್ಲಬೇಕು. ಪ್ರತಿ ಕರ್ಮಕ್ಕೂ ಶಾಸ್ತ್ರದಲ್ಲಿ ಪ್ರಾಯಶ್ಚಿತ್ತವಿದೆ. ಪಾಪಿಗಳನ್ನು ಪುನೀತಗೊಳಿಸುವ ಶಕ್ತಿ ಮಂತ್ರಕ್ಕಿದೆ. ನಾಮಸ್ಮರಣೆ ಮಾತ್ರದಿಂದ ಅಪವಿತ್ರರೂ ಪವಿತ್ರರಾಗುವರೆಂದು ಶ್ರುತಿ ಸಾರುತ್ತಿದೆ. ಬೆಳಕಿನಿಂದ ಕತ್ತಲೆ ಪರಿಹಾರವಾದೀತಲ್ಲದೆ ಕತ್ತಲೆಯಿಂದ ಬೆಳಕು ಮಸಕಾಗುವದಿಲ್ಲ. ಜನಸಂಖ್ಯೆ ಕಡಮೆಯಾಗಿದ್ದಾಗ—ಜೀವನ ಸಮೃದ್ಧಿಯಿದ್ದಾಗ-ರಾಜಾಶ್ರಯ ದೊರೆಯುತ್ತಿದ್ದಾಗ-ಮತವು ಬೆಳೆದ ಮಾರ್ಗ ಬೇರೆ. ಶಾಂತಿ ಪಾಠಗಳನ್ನು ಹೇಳುತ್ತ, ಕೆಲವರು ಮಾತ್ರ ಮುದುರಿ ಮುದುರಿ ಕೂತು ತೃಪ್ತರಾಗುತ್ತಿದ್ದ ಕಾಲ ಬೇರೆ. ಆ ಕಾಲ ಈಗಿಲ್ಲ. ಆ ಸಮಾಜ ಈಗಿಲ್ಲ. ಈ ಕಾಲಕ್ಕೆ ತಕ್ಕಂತೆ, ಈ ಸಮಾಜಕ್ಕೆ ತಕ್ಕಂತೆ ಮತವಾದದ್ದು ಅವತರಿಸಿ ಬರಬೇಕು. ತಿರಸ್ಕಾರವೆಲ್ಲಾ ಪುರಸ್ಕಾರವಾಗಬೇಕು. ಅದರಿಂದ ಸಮಾಜ ಸಂಘಟನೆಯಾಗಬೇಕು. ಸಮಾಜವು ಬಲಿಷ್ಠವಾಗಬೇಕು. ಬಲಿಷ್ಠ ಸಮಾಜದಿಂದ ಮತ ರಕ್ಷಣೆಯಾಗಬೇಕು. ಗುರುಪೀಠಗಳು ಗೌರವ ಪಡೆಯಬೇಕು.

ಸಮಾಧಿಯಲ್ಲಿ ಕುಳಿತು ತಪಸ್ಸು ಮಾಡುವ ಕಾಲವಿದಲ್ಲ. ಯಜ್ಞಾದಿಗಳನ್ನು ಆಚರಿಸಿ ತಾವು ಕರ್ಮಠರೆಂದು ಹಿಗ್ಗುವ ಕಾಲವಿದಲ್ಲ. ಈ ಕಾಲದಲ್ಲಿ, ಈ ಯುಗದಲ್ಲಿ, ಬೇಕಾಗಿರುವದು ಭಕ್ತಿ. ಜ್ಞಾನದಿಂದ ಜಗತ್ತಿಗೆ ಜನ್ಮಾದಿಕಾರಣನೊಬ್ಬನಿದ್ದಾನೆಂದು ತಿಳಿದು ಅವನಲ್ಲಿ ಪ್ರಿತಿ ಮಾಡುವದು ಭಕ್ತಿ. ಭಕ್ತಿಗೆ ಜಾತಿ ಲಿಂಗಭೇದಗಳಿಲ್ಲ. ಭಕ್ತಿಶಾಸ್ತ್ರಪ್ರವರ್ತಕರು ವೇದವ್ಯಾಸರು. ಭಕ್ತಿಶಾಸ್ತ್ರ ಪ್ರಚಾರಮಾಡಿದವರು ಶುಕಾಚಾರ್ಯರು. ನಾರದರು ಈ ಭಾಗವತ ಧರ್ಮವನ್ನು ಎತ್ತಿ ಹಿಡಿದರು. ಶಾಂಡಿಲ್ಯರು ಈ ಧರ್ಮವನ್ನು ಎತ್ತಿ ಹಿಡಿದರು. ಬಾದರಾಯಣರು ಸೂತ್ರಕರ್ತರಾದಂತೆ ಉಭಯ ಋಷಿಗಳೂ ಭಕ್ತಿಸೂತ್ರಕರ್ತರೆನಿಸಿದರು.

ಭಕ್ತಿಯು ಜ್ಞಾನ, ಕರ್ಮ, ಯೋಗಗಳಿಗಿಂತ ಅಧಿಕವಾದದ್ದು. ಭಕ್ತಿಯು ಸ್ವಯಂ ಫಲರೂಪವಾಗಿರುವದರಿಂದ ಅದಕ್ಕೆ ಅನ್ಯಸಾಧನೆಯು ಸಹಕಾರಿಯೆನಿಸುವದಿಲ್ಲ. ಜ್ಞಾನವು ಸ್ವಯಂ ಫಲಕಾರಿಯಾದುದಲ್ಲ. ಅರಮನೆಯ ದರ್ಶನ ಮಾತ್ರದಿಂದ ರಾಜದರ್ಶನವಾದಂತಾಗುವದಿಲ್ಲ. ಮೃಷ್ಟಾನ್ನವನ್ನು ಕಂಡಮಾತ್ರಕ್ಕೆ ಹೊಟ್ಟೆ ತುಂಬುವುದಿಲ್ಲ. ಜ್ಞಾನದ ಸ್ಥಿತಿಯಾದರೂ ಇದರಂತಿರುವದು. ಭಕ್ತನು ಪ್ರಪಂಚ ವ್ಯವಹಾರವನ್ನು ಎಷ್ಟು ಆಸಕ್ತನಂತೆ ಮಾಡಿದರೂ ಅವನು ಅನಾಸಕ್ತನಾಗಿರುವನು, ಏಕಾಂತಪ್ರಿಯನಾಗಿರುವನು, ತ್ರಿಗುಣಾತೀತನಾಗಿರುವನು, ಚಿಂತಾರಹಿತನಾಗಿರುವನು. ಅವನ ಕರ್ಮಗಳು ನಿಷ್ಕಾಮಕರ್ಮಗಳಾಗಿರುವವು. ಅವನ ಕರ್ಮಗಳಿಂದ ಲೋಕಕಲ್ಯಾಣವಾಗುವದು. ಭಕ್ತನು ಕಂಡ ಸ್ಥಳಗಳಲ್ಲೆಲ್ಲಾ ಪರಮಾತ್ಮನ ಲೀಲಾವಿಭೂತಿಯನ್ನು ಕಾಣುವನು. ಭಕ್ತರು ಸದಾ ತಮ್ಮ ಚಿತ್ತವನ್ನು ಪರಮಾತ್ಮನ ಪಾದಾರವಿಂದದಲ್ಲಿ ಲಯಗೊಳಿಸಲು ದಾಸ್ಯಭಾವವನ್ನು ತಾಳುವರು. ಮತ್ತೆ ಕೆಲವರು ಮಾಧುರೀಭಾವವನ್ನು ತಾಳುವರು. ಯಾವ ಪ್ರೇಮದಲ್ಲಿ ವ್ಯಕ್ತಿಯ ಅಸ್ತಿತ್ವವೇ ಮರೆತುಹೋಗುವದೋ, ಯಾವ ಪ್ರೇಮದಲ್ಲಿ ದೇಹಗೇಹ ಇಂದ್ರಿಯಾದಿಗಳೆಲ್ಲದರ ಸಮರ್ಪಣೆಯಿರುವದೋ ಅದು ಮಾಧುರೀ ಭಕ್ತಿಯೆನಿಸುವದು. ನಾನೆಂಬುದನ್ನು ಮರೆತು ತಾನೇತಾನಾದ ಆ ಪ್ರೇಮವು ರಾಧಾಮಾಧವರ ಪವಿತ್ರ ಪ್ರೇಮದಂತಿರುವದು. ಭಕ್ತಿಯು ಉದ್ರೇಕವಾಯಿತೆಂದರೆ—ಭಕ್ತನು ರೋಮಾಂಚಿತನಾಗುವನು; ಹೃದಯ ಕರಗಿ ನೇತ್ರಗಳಿಂದ ಅಮೃತವು ಪ್ರವಹಿಸುವದು; ಆನಂದದಿಂದ ಭಗವಂತನ ಗುಣಗಾನಮಾಡುವನು; ಅಂಥವರ ದರ್ಶನಮಾತ್ರದಿಂದ ಮಾನವರ ಕುಲಕೋಟಿಗಳು ಪಾವನವಾಗುವವು; ತೀರ್ಥಗಳಲ್ಲಿ ತೀರ್ಥತ್ವವುಂಟಾಗುವದು. ಶಾಸ್ತ್ರಗಳಲ್ಲಿ ಶಾಸ್ತ್ರತ್ವವುಂಟಾಗುವದು. ಭಕ್ತರು ಎಂದೂ ವಾದಕ್ಕೆ ಬರುವದಿಲ್ಲ. ವಾದದಿಂದ ಭಕ್ತಿಯು ಸಾಧಿಸುವದಲ್ಲ.

ಆದುದರಿಂದ ಜನಸಾಮಾನ್ಯರಿಗೆ ಭಕ್ತಿಶಾಸ್ತ್ರದ ಉಪದೇಶವಾಗಬೇಕು. ಅಹಿಂಸೆ, ಸತ್ಯ, ಶುಚಿತ್ವ, ದಯೆ, ಆಸ್ತಿಕ್ಯಗಳೆಂಬ ಪಂಚನಿಯಮ

ಗಳಿಂದ ಪ್ರಪಂಚ ರಚನೆಯಾಗಬೇಕು. ಭಕ್ತಿಯು ಗುಣಮಾಹಾತ್ಮ್ಯ ಸಕ್ತಿ, ಪೂಜಾಸಕ್ತಿ, ರೂಪಾಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ಸಖ್ಯಾಸಕ್ತಿ, ವಾತ್ಸಲ್ಯಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯಾಸಕ್ತಿಗಳೆಂದು ಹನ್ನೊಂದು ಪ್ರಕಾರವಾಗಿರುವದು ಜನಜೀವನದಲ್ಲಿ ಬೆರೆತುಹೋಗಬೇಕು. ಇಂತಹ ಭಕ್ತರಿಂದಲೇ ಸಮಾಜಸುಧಾರಣೆಯಾದೀತು. ಜನತೆಯು ಬಲಿಷ್ಠ ವಾದೀತು. ರಾಷ್ಟ್ರರಚನೆಯಾದೀತು. ಶಾಂತಿ ನೆಲಿಸೀತು.

ಇಂತಹ ಮಾರ್ಗವನ್ನು ಕನ್ನಡ ಹರಿದಾಸರು ಅನುಸರಿಸಿದರು. ರಾಜ್ಯಕ್ರಾಂತಿಗಳಾದಾಗ ಸಮಾಜವನ್ನು ಕಟ್ಟಿದರು. ಮಹಾರಾಷ್ಟ್ರ ರಾಜ್ಯಸ್ಥಾಪನೆಯಾದದ್ದು ಹರಿದಾಸರಿಂದ, ಧರ್ಮ ಸ್ಥಾಪನೆಯಾದದ್ದು ಹರಿದಾಸರಿಂದ. ಮಹಾ ಮಹಾಕ್ಷೇತ್ರಗಳಿಗೆ ವೈಭವವುಂಟಾದದು ಹರಿದಾಸರಿಂದ.

ಹರಿದಾಸ ಸಾಹಿತ್ಯವು ಸಾಹಿತ್ಯಕೆಲ್ಲಾ ಭೂಷಣವಾಗಿರುವದು. ಶ್ರವಣ ಮಾತ್ರದಿಂದ ಮನಸ್ಸಿಗೆ ಆನಂದಕೊಡುವದು, ಮನನದಿಂದ ಚಿತ್ತಶುದ್ಧಿಯಾಗುವದು, ಭಕ್ತಿ ಮೂಡುವುದು, ಭಕ್ತಿಯು ಮುಕ್ತಿಗೆ ಸಾಧಕವಾಗುವದು. ಈ ಸಾಹಿತ್ಯ ಜಾತಿ ಮತಲಿಂಗಭೇದಗಳಿಲ್ಲದ ಮಾನವರ ಸಾಹಿತ್ಯ. ಆದುದರಿಂದ ಇದು ವಿಶ್ವಸಾಹಿತ್ಯ. ವಿಶ್ವದ ಸ್ವತ್ತನ್ನು ವಿಶ್ವಕ್ಕೆ ಇಂತಹುದೆಂದು ತೋರಿಸಿ ಒಪ್ಪಿಸುವದು ಹರಿದಾಸನಿಗೆ ಔಚಿತ್ಯ.

ಹರಿದಾಸರದಾಸ

ಬೇಲೂರು ಕೇಶವದಾಸ

ಹರಿಭಕ್ತಿಸಾರ

ಶ್ರೀಯರಸಗಾಂಗೇಯನುತ ಕೌಂ
ತೇಯವಂದಿತಚರಣ ಕಮಲದ
ಳಾಯತಾಂಬಕರೂಪ ಚಿನ್ಮಯ ದೇವಕೀತನಯ
ರಾಯ ರಘುಕುಲವರ್ಯಭೂಸುರ
ಪ್ರಿಯ ಸುರಪುರನಿಲಯ ಚನ್ನಿಗ
ರಾಯ ಚತುರೋಪಾಯ ರಕ್ಷಿಸು ನಮ್ಮನನವರತ ॥ ೧ ॥

ದೇವದೇವ ಜಗದ್ಭರಿತ ವಸು
ದೇವಸುತ ಜಗದೇಕ ಸಾಥರ
ಮಾವಿನೋದಿತ ಸಕಲಸಜ್ಜನವಿನುತ ಗುಣಭರಿತ
ಭಾವಜಾರಿಪ್ರಿಯ ನಿರಾಮಯ
ರಾವಣಾಂತಕ ದಿನಕರಾನ್ವಯ
ದೇವ ಅಸುರವಿರೋಧಿ ರಕ್ಷಿಸು ನಮ್ಮನನವರತ ॥ ೨ ॥

ಅನುಪಮಿತ ಚಾರಿತ್ರಕರುಣಾ
ವನಧಿ ಭಕ್ತಕುಟುಂಬಿಯೋಗೀ
ಜನಹೃದಯ ಪರಿಪೂರ್ಣ ನಿತ್ಯಾನಂದ ನಿಗಮನುತ
ವನಜನಾಭ ಮುಕುಂದ ಮುರಮ
ರ್ದನ ಜನಾರ್ದನ ತ್ರೈಜಗತ್ಪಾ
ವನಸುರಾರ್ಚಿತ ದೇವರಕ್ಷಿಸು ನಮ್ಮನನವರತ ॥ ೩ ॥

ಕಮಲ ಸಂಭವವಿನುತವಾಸವ
ನಮಿತ ಮಂಗಳ ಚರಿತದುರಿತ
ಕ್ಷಮಿತರಾಘವ ವಿಶ್ವಪೂಜಿತೆ ವಿಶ್ವವಿಶ್ವಮಯ
ಅಮಿತವಿಕ್ರಮ ಭೀಮಸೀತಾ
ರಮಣ ವಾಸುಕಿಶಯನ ಖಗಪತಿ
ಗಮನಕಂಜಜನಯ್ಯ ರಕ್ಷಿಸು ನಮ್ಮನನವರತ || ೯ ||

ಕ್ಷೀರವಾರಿಧಿಶಯನ ಶಾಂತಾ
ಕಾರ ವಿವಿಧ ವಿಚಾರಗೋಪೀ
ಜಾರ ನವನಿತಚೋರ ಚಕ್ರಾಧಾರಭವದೂರ
ಮಾರಪಿತ ಗುಣಹಾರ ಸರಸಾ
ಕಾರ ರಿಪುಸಂಹಾರ ತುಂಬುರು
ನಾರದಪ್ರಿಯ ವರದ ರಕ್ಷಿಸು ನಮ್ಮನನವರತ || ೫ ||

ತಾಮರಸದಳನಯನ ಭಾರ್ಗವ
ರಾಮ ಹಲಧರರಾಮ ದಶರಥ
ರಾಮ ಮೇಘ ಶ್ಯಾಮಸದ್ಗುಣಧಾಮ ನಿಸ್ಸೀಮ
ಸಾಮಗಾನ ಪ್ರೇಮಕಾಂಚನ
ದಾಮಧರ ಸುತ್ರಾಮ ವಿನಮಿತ
ನಾಮರವಿಕುಲಸೋಮ ರಕ್ಷಿಸು ನಮ್ಮನನವರತ || ೬ ||

ವೇದಗೋಚರ ವೇಣುನಾದ ವಿ
ನೋದ ಮಂದರಶೈಲಧರ ಮಧು
ಸೂದನಾಚ್ಯುತ ಕಂಸದಾನವರಿಪು ಮಹಾಮಹಿಮ
ಯಾದವೇಂದ್ರ ಯಶೋದೆನಂದನ
ನಾದಬಿಂದು ಕಳಾತಿಶಯ ಪ್ರ
ಹ್ಲಾದ ರಕ್ಷಕವರದ ರಕ್ಷಿಸು ನಮ್ಮನನವರತ || ೭ ||

ಅಕ್ಷಯಾಶ್ರಿತ ಸುಜನ ಜನಸಂ
ರಕ್ಷಣ ಶ್ರೀವತ್ಸಕೌಂಸ್ತುಭ
ಮೋಕ್ಷದಾಯಕ ಕುಟಿಲದಾನವ ಶಿಕ್ಷಕುಮುದಾಕ್ಷ
ಪಕ್ಷಿವಾಹನ ದೇವಸಂಕುಲ
ಪಕ್ಷಜಗದಧ್ಯಕ್ಷವರನಿಟಿ
ಲಾಕ್ಷಸಖ ಸರ್ವೇಶ ರಕ್ಷಿಸು ನಮ್ಮನನವರತ ॥ ೮ ॥

ಚಿತ್ರಕೂಟನಿವಾಸ ವಿಶ್ವಾ
ಮಿತ್ರಕ್ರತುಸಂರಕ್ಷ ಶಶಿರವಿ
ನೇತ್ರಭವ್ಯಚರಿತ್ರ ಸದ್ಗುಣಗಾತ್ರ ಸತ್ಪಾತ್ರ
ಧಾತ್ರಿಜಾಂತಕ ಕಪಟನಾಟಕ
ಸೂತ್ರ ಪರಮಪವಿತ್ರ ಫಲ್ಗುಣ
ಮಿತ್ರವಾಕ್ಯವಿಚಿತ್ರ ರಕ್ಷಿಸು ನಮ್ಮನನವರತ ॥ ೯ ॥

ಮಂಗಳಾತ್ಮಕ ದುರಿತತಿಮಿರಪ
ತಂಗ ಗರುಡತುರಂಗರಿಪುಮದ
ಭಂಗ ಕೀರ್ತಿತರಂಗ ಪುರಹರಸಂಗನೀಲಾಂಗ
ಅಂಗದ ಪ್ರಿಯ ನಂಗಪಿತಕಾ
ಳಿಂಗಮರ್ದನ ಅಮಿತಕರುಣಾ
ಪಾಂಗ ಶ್ರೀನರಸಿಂಗರಕ್ಷಿಸು ನಮ್ಮನನವರತ ॥ ೧೦ ॥

ದಾಶರಥಿ ವೈಕುಂಠ ನಗರನಿ
ವಾಸತ್ರೈಜಗದೀಶ ಪಾಪವಿ
ನಾಶ ಪರಮವಿಲಾಸ ಹರಿಸರ್ವೇಶದೇವೇಶ
ವಾಸುದೇವ ದಿನೇಶ ಶತಸಂ
ಕಾಶ ಯಾದವವಂಶ ತಿಲಕ ಪ
ರಾಶರಾನತ ದೇವರಕ್ಷಿಸು ನಮ್ಮನನವರತ ॥ ೧೧ ॥

ಕುಂದಕುಟ್ಮಲರದನ ಪರಮಾ
ನಂದ ಹರಿಗೋವಿಂದ ಸನಕಸ
ನಂದವಂದಿತ ಸಿಂಧುಬಂಧನ ಮಂದರಾದ್ರಿಧರ
ಇಂದಿರಾಪತಿ ವಿಜಯಸಖ ಅರ
ವಿಂದನಾಭ ಪುರಂದರಾರ್ಚಿತ
ನಂದಕಂದ ಮುಕುಂದ ರಕ್ಷಿಸು ನಮ್ಮನನವರತ ॥ ೧೨ ॥

ಬಾಣಬಾಹುಚ್ಛೇದ ರಾವಣ
ಪ್ರಾಣನಾಶನ ಪುಣ್ಯನಾಮ ಪು
ರಾಣ ಪುರುಷೋತ್ತಮ ನಿಪುಣ ಅಣುರೇಣು ಪರಿಪೂರ್ಣ
ಕ್ಷೋಣಿಪತಿ ಸುಲಲಿತ ಸುದರ್ಶನ
ಪಾಣಿಪಾಂಡವ ರಾಜಕಾರ್ಯ ಧು
ರೀಣ ಜಗನಿರ್ಮಾಣ ರಕ್ಷಿಸು ನಮ್ಮನನವರತ ॥ ೧೩ ॥

ನೀಲವರ್ಣ ವಿಶಾಲ ಶುಭಗುಣ
ಶೀಲ ಮುನಿಕುಲಪಾಲ ಲಕ್ಷ್ಮೀ
ಲೋಲ ರಿಪು ಶಿಶುಪಾಲ ಮಸ್ತಕ ಶೂಲ ವನಮಾಲ
ಮೂಲಕಾರಣ ವಿಮಲಯಾದವ
ಜಾಲಹಿತಗೋಪಾಲ ಅಗಣಿತ
ಲೀಲ ಕೋಮಲಕಾಯ ರಕ್ಷಿಸು ನಮ್ಮನನವರತ ॥ ೧೪ ॥

ಶ್ರೀಮರುತ್ಸುತ ದೇವನುತ ಶ್ರೀ
ರಾಮ ನಿನ್ನಯ ಚರಣಸೇವಕ
ಪ್ರೇಮದಿಂ ಸಾಷ್ಟಾಂಗವೆರಗುತೆ ಮಾಳ್ಪೆಬಿನ್ನಹವ
ಈ ಮಹಿಯೊಳೀವರೆಗೆ ನಾವ್ಸು
ಕ್ಷೇಮಿಗಳು ನಿನ್ನಯ ಪದಾಬ್ಜವ
ನೇಮ ನೆನೆವ್ವುದನರುಹಿ ರಕ್ಷಿಸು ನಮ್ಮನನವರತ ॥ ೧೫ ॥

ಈಗಲೀಮರ್ಯಾದೆಯಲಿ ಶರ
ಣಾಗತರ ಸೇವೆಯೊಳು ಹೊಂಪುಳಿ
ಯಾಗಿ ಬಾಳುವರೇನು ಧನ್ಯರೊಹರಮಹಾದೇವ
ಭೋಗಭಾಗ್ಯವ ಬಯಸಿ ಮುಕ್ತಿಯ
ನೀಗಿ ನಿಮ್ಮನುಭಜಿಸಲರಿಯದ
ರಾಗಿಗಳ ಮಾತೇನು ರಕ್ಷಿಸು ನಮ್ಮನನವರತ ॥ ೧೬ ॥

ಭಕ್ತಿಸಾರದ ಚರಿತೆಯನು ಹರಿ
ಭಕ್ತರಾಲಿಸುವಂತೆ ರಚಿಸುವೆ
ಯುಕ್ತಿಯಲಿ ಬರೆದೋದಿದವರಿಷ್ಟಾರ್ಥ ಸಿದ್ಧಿಪುದು
ಮುಕ್ತಿಗಿದು ನೆಲೆದೋರುವದು ಹರಿ
ಭಕ್ತರಿದನಾಲಿಪುದು ನಿಜಮತಿ
ಭಕ್ತಿಗೊಲಿವಂದದಲಿ ರಕ್ಷಿಸು ನಮ್ಮನನವರತ ॥ ೧೭ ॥

ನಳಿನಲೋಚನ ನಿಮ್ಮ ಕೀರ್ತಿಯು
ಮೊಳಗುತಿರೆ ಸುರಲೋಕದೊಳು ಭೂ
ತಳದೊಳಚ್ಚರಿಯೇನು ನಾಮಾಮೃತವ ಸವಿದವರು
ಬೆಳೆಸುವರು ಸತ್ಕವಿತೆಯುವರ
ಗ್ಗಳಿಕೆ ಎನಗಿನಿತಿಲ್ಲ ಸನ್ಮತಿ
ಗಳಿಗೆ ಮಂಗಳವಿತ್ತು ರಕ್ಷಿಸು ನಮ್ಮನನವರತ ॥ ೧೮ ॥

ಗಿಳಿಯ ಮರಿಯನು ತಂದು ಪಂಜರ
ದೊಳಗೆ ಪೋಷಿಸಿ ಕಲಿಸಿ ಮೃದುನುಡಿ
ಗಳನುಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ
ತಿಳುಹಿಮತಿಯನು ಎನ್ನ ಜಿಹ್ವೆಗೆ
ಮೊಳಗುವಂದದಿ ನಿನ್ನನಾಮಾ
ವಳಿಯಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ ॥ ೧೯ ॥

ವೇದಶಾಸ್ತ್ರ ಪುರಾಣಪುಣ್ಯ
ಹಾದಿಯನುನಾನರಿಯೆ ತರ್ಕದ
ವಾದದಲಿ ಗುರುಹಿರಿಯರರಿಯದ ಮೂಢಮತಿಯೆನಗೆ
ಆದಿಮೂರುತಿ ನೀನು ನೆರೆಕರು
ಣೋದಯನು ಹೃದಯಾಂಗಣದಿಜ್ಞಾ
ನೋದಯವನೆನಗಿತ್ತು ರಕ್ಷಿಸು ನಮ್ಮನನವರತ ॥ ೨೦ ॥

ಹಸಿವರಿತು ತಾಯ್ತನ್ನ ಶಿಶುವಿಗೆ
ಒಸೆದು ಪಾಲ್ಕೊಡುವಂತೆ ನೀ ಪೋ
ಷಿಸದೆ ಬೇರಿನ್ನಾರು ಪೋಷಕರಾಗಿ ಸಲಹುವರು
ಬಸುರೊಳಗೆ ಬ್ರಹ್ಮಾಂಡಕೋಟಿಯ
ಪಸರಿಸಿದ ಪರಮಾತ್ಮನೀನೆಂ
ದುಸುರುತಿವೆ ವೇದಗಳು ರಕ್ಷಿಸು ನಮ್ಮನನವರತ ॥ ೨೧ ॥

ಇಬ್ಬರಣುಗರು ನಿನಗೆ ಅವರೊಳ
ಗೊಬ್ಬ ಮಗನೀರೇಳು ಲೋಕದ
ಹೆಬ್ಬೆಳೆಸು ಬೆಳೆವಂತೆ ಕಾರಣಕರ್ತನಾಗಿಹನು
ಒಬ್ಬ ಮಗನದ ಬರೆವಕರಣಿಕ
ರಿಬ್ಬರೀ ಲೋಕಪ್ರಸಿದ್ಧರು
ಹಬ್ಬಿಸಿದ ಪ್ರಾಣಿಗಳ ರಕ್ಷಿಸು ನಮ್ಮನನವರತ ॥ ೨೨ ॥

ಸಿರಿಯು ಕುಲಸತಿ ಸುತನುಕಮಲಜ
ಹಿರಿಯಸೊಸೆ ಶಾರದೆ ಸಹೋದರಿ
ಗಿರಿಜೆ ಮೈದುನ ಶಂಕರನು ಸುರರೆಲ್ಲ ಕಿಂಕರರು
ನಿರುತ ಮಾಯೆಯು ದಾಸಿ ನಿಜವಂ
ದಿರವಜಾಂಡವು ಜಂಗಮಸ್ಥಾ
ವರಕುಟುಂಬಿಗ ನೀನು ರಕ್ಷಿಸು ನಮ್ಮನನವರತ ॥ ೨೩ ॥

ಸಾಗರನ ಮಗಳರಿಯದಂತೆ ಸ
ರಾಗದಲಿ ಸಂಚರಿಸುತಿಹೆ ಉ
ದ್ಯೋಗವೇನಚ್ಯುತನೆ ಕಾರಣವಿಲ್ಲ ಲೋಕದಲಿ
ಭಾಗವತರಾದವರ ಸಲಹುವ
ನಾಗಿ ಸಂಚರಿಸುವೆಯೊ ಈ ಭವ
ಸಾಗರದಿ ಮುಳುಗಿಸದೆ ರಕ್ಷಿಸು ನಮ್ಮನನವರತ ‖ ೨೪ ‖

ಹಸ್ತಿವಾಹನನಾದಿಯಾದಸ
ಮಸ್ತದೇವನಿಕಾಯದೊಳಗೆ ಪ್ರ
ಶಸ್ತನಾವನು ನಿನ್ನವೊಲು ಶರಣಾಗತರ ಪೊರೆವ
ಹಸ್ತಕಲಿತ ಸುದರ್ಶನದೊಳರಿ
ಮಸ್ತಕವನಿಳುಹುವ ಪರಾತ್ಪರ
ವಸ್ತುವಲ್ಲವೆ ನೀನು ರಕ್ಷಿಸು ನಮ್ಮನನವರತ ‖ ೨೫ ‖

ಹಗೆಯರಿಗೆ ವರವೀವರಿಬ್ಬರು
ತೆಗೆಯಲರಿಯರು ಕೊಟ್ಟ ವರಗಳ
ತೆಗೆದುಕೊಡುವ ಸಮರ್ಥರಾರೀಜಗಕೆ ನಿನ್ನಂತೆ
ಸುಗುಣರಿನ್ನಾರುಂಟು ಕದನವ
ಬಗೆದು ನಿನ್ನೊಳು ಜೈಸುವವರೀ
ಜಗದೊಳುಂಟೇದೇವ ರಕ್ಷಿಸು ನಮ್ಮನನವರತ ‖ ೨೬ ‖

ಬಲಿಯ ಬಂಧಿಸಿ ಮೊರೆಯಿಡುವ ಸತಿ
ಗೊಲಿದು ಅಕ್ಷಯವಿತ್ತು ಕರುಣದಿ
ಮೊಲೆಯನುಣಿಸಿದ ಪೂತನಿಯ ಪಿಡಿದಸುವನಪಹರಿಸಿ
ಶಿಲೆಯ ಸತಿಯುಳಮಾಡಿ ತ್ರಿಪುರರ
ಲಲನೆಯರ ವ್ರತಗೆಡಿಸಿ ಕೂಡಿದ
ಕೆಲಸವುತ್ತಮವಾಯ್ತು ರಕ್ಷಿಸು ನಮ್ಮನನವರತ ‖ ೨೭ ‖

ಕರಿಯಕಾಯ್ದಾ ಜಲಧಿಮಕರಿಯ
ತರಿದು ಹಿರಣ್ಯಕನನ್ನು ಸೀಳ್ದಾ
ತರಳನನು ತಲೆಗಾಯ್ದು ಶಕಟಾಸುರನ ಹತಮಾಡಿ
ದುರುಳ ಕಂಸನ ಕೊಂದು ಮಗಧನ
ಮುರಿದು ವತ್ಸನ ಹಮ್ಮಳಿಸಿ ಖರ
ಹರಣವನು ಹಿಂಗಿಸಿದೆ ರಕ್ಷಿಸು ನಮ್ಮನನವರತ || ೨೮ ||

ಶಿಶುತನದ ಸಾಮರ್ಥ್ಯದಲಿ ಕೆಲ
ರಸುರರನು ಸಂಹರಿಸಿ ಚಕ್ರವ
ಬಿಸುಟು ಯವ್ವನಕಾಲದಲಿಯಾ ಪಾಂಡುಸುತರಿಂದ
ವಸುಮತಿಯ ಭಾರವನಿಳಿಸಿ ಸಾ
ಹಸದಿ ಮೆರೆದವನಾಗಿ ನೀ ಮೆ
ಚ್ಚಿಸಿದೆ ತ್ರಿಜಗವನೆಲ್ಲ ರಕ್ಷಿಸು ನಮ್ಮನನವರತ || ೨೯ ||

ಎಲ್ಲರಲಿ ನೀನಾಗಿ ಸುಮನಸ
ರಲ್ಲಿ ಅತಿಹಿತನಾಗಿ ಯಾದವ
ರಲ್ಲಿ ಬಾಂಧವನಾಗಿ ದಾನವರಲ್ಲಿ ಹಗೆಯಾಗಿ
ಕೊಲ್ಲಿಸಿದೆ ಭೀಮಾರ್ಜುನರ ಕೈ
ಯಲ್ಲಿ ಕೌರವಕುಲವನೆಲ್ಲವ
ಬಲ್ಲಿದನು ನೀನಹುದು ರಕ್ಷಿಸು ನಮ್ಮನನವರತ || ೩೦ ||

ನರಗೆ ಸಾರಥಿಯಾಗಿರಣದೊಳು
ತುರಗನೀರಡಿಸಿದರೆ ವಾರಿಯ
ಸರಸಿಯನು ನಿರ್ಮಿಸಿ ಕಿರೀಟಿಯ ಕೈಯ ಸೈಂಧವನ
ಶಿರವ ಕೆಡಹಿಸಿ ಅವನ ತಂದೆಯ
ಕರತಲಕೆ ನೀಡಿಸಿದೆ ಹರಹರ
ಪರಮ ಸಾಹಸಿ ನೀನು ರಕ್ಷಿಸು ನಮ್ಮನನವರತ || ೩೧ ||

ತಾಯನಗಲಿದ ತನಯನ ಹರಾ
ಧೇಯನೊಳಗೆ ರಹಸ್ಯದಲಿ ಕುಲ
ದಾಯವನು ನೆರೆತಿಳುಹಿ ಅರ್ಜುನನಿಂದ ಕೊಲ್ಲಿಸಿದೆ
ಮಾಯತಂತ್ರದ ಕುಟಿಲಗುಣವ
ನ್ಯಾಯವೋ ಸುನ್ಯಾಯವೋ ನಿ
ನ್ನಾಯತವ ನೀ ಬಲ್ಲೆ ರಕ್ಷಿಸು ನಮ್ಮನನವರತ || ೩೨ ||

ಏನಮಾಡಿದಡೇನು ಕರ್ಮವ
ನೀನೊಲಿಯದಿನ್ನಿಲ್ಲ ವಿದಕನು
ಮಾನವುಂಟೇ ಭ್ರಮರಕೀಟ ನ್ಯಾಯದಂದಲಿ
ನೀನೊಲಿಯೆ ತೃಣಪರ್ವತವು ಪುಸಿ
ಯೇನು ನೀಪತಿಕರಿಸಿ ಬಳಿಕಿ
ನ್ನೇನು ಚಿಂತಿಸಲೇಕೆ ರಕ್ಷಿಸು ನಮ್ಮನನವರತ || ೩೩ ||

ಎಷ್ಟುಮಾಡಲು ಮುನ್ನ ತಾಪಡೆ
ದಷ್ಟೆಯೆಂಬುದ ಲೋಕದೊಳು ಮತಿ
ಗೆಟ್ಟಮಾನವರಾಡುತಿಹರಾಮಾತದಂತಿರಲಿ
ಪಟ್ಟವಾರಿಂದಾಯ್ತು ಧೃವನಿಗೆ
ಕೊಟ್ಟ ವರ ತಪ್ಪಿತೆ ಕುಚೇಲಗೆ
ಇಷ್ಟಬಾಂಧವ ನೀನು ರಕ್ಷಿಸು ನಮ್ಮನನವರತ || ೩೪ ||

ತನ್ನ ದೇಹಾತುರದಲಡವಿಯೊ
ಳನ್ಯರನು ಸಂಹರಿಸುತಿರೆ
ನಿನ್ನ ನಾಮದೊಳಧಿಕವೆರಡಕ್ಷರವ ಬಣ್ಣಿಸುತ
ಧನ್ಯನಾದನು ಮುನಿಕುಲದಿ ಸಂ
ಪನ್ನನಾದನು ನೀನೊಲಿದ ಬಳಿ
ಕಿನ್ನು ಪಾತಕವುಂಟೆ ರಕ್ಷಿಸು ನಮ್ಮನನವರತ || ೩೫ ||

ನಿನ್ನ ಸತಿಗಳುಪಿದ ದುರಾತ್ಮನ
ಬೆನ್ನಿನಲಿ ಬಂದವನ ಕರುಣದಿ
ಮನ್ನಿಸಿದ ಕಾರಣ ದಯಾಪರಮೂರ್ತಿಯೆಂದೆನುತ
ನಿನ್ನ ಭಜಿಸಿದ ಸಾರ್ವಭೌಮರಿ
ಗಿನ್ನು ಇಹಪರವುಂಟು ಸದ್ಗುಣ
ರನ್ನ ಸಿರಿಸಂಪನ್ನ ರಕ್ಷಿಸು ನಮ್ಮನನವರತ || ೩೬ ||

ವೀರರಾವಣನೊಡನೆ ಹೋರಿದ
ವೀರರಗ್ಗದ ಕಪಿಗಳೆವರೊಳು
ಮಾರುತನ ಮಗನೇನು ಧನ್ಯನೊ ಬ್ರಹ್ಮಪಟ್ಟದಲಿ
ಸೇರಿಸಿದೆ ನಿನ್ನಂತೆ ಕೊಡುವ ಉ
ದಾರಿ ಯಾವನು ತ್ರಿಜಗದೊಳಗಾ
ಕಾರಣದಿ ನಂಬಿದೆನು ರಕ್ಷಿಸು ನಮ್ಮನನವರತ || ೩೭ ||

ಶಿವಶಿವಾನೀ ಮಾಡಿದುಪಕಾ
ರವನು ಮರೆದವರುಂಟೆ ಪಾಪದಿ
ನವೆದಜಾಮಿಳಗೊಲಿದು ಪ್ರಾಣವಿಯೋಗ ಕಾಲದಲಿ
ಜವನವರ ಕೈಗೊಪ್ಪಿಸದೆ ಕಾ
ದವನು ನೀ ಮಾಧವನು ಮಿಕ್ಕಾ
ದವರಿಗುಂಟೇ ಕರುಣ ರಕ್ಷಿಸು ನಮ್ಮನನವರತ || ೩೮ ||

ಇಲ್ಲಿಹನು ಅಲ್ಲಿಲ್ಲವೆಂಬೀ
ಸೊಲ್ಲುಸಲ್ಲದು ಒಳಹೊರಗೆ ನೀ
ನಿಲ್ಲದಿಲ್ಲನ್ಯತ್ರವೆಂಬುದನೆಲ್ಲ ಕೆಲಕೆಲರು
ಬಲ್ಲರಿಳೆಯೊಳು ಭಾಗವತರಾ
ದೆಲ್ಲರಿಗೆ ವಂದಿಸದ ಕುಜನರಿ
ಗಿಲ್ಲ ಸದ್ಗತಿ ನೋಡಿ ರಕ್ಷಿಸು ನಮ್ಮನನವರತ || ೩೯ ||

ಸಿರಿಯಸಂಪತ್ತಿನಲಿ ನೀ ನ್ಯೆ
ಮರೆದು ಪದಗರ್ವದಲಿ ದೀನರ
ಕರುಣದಿಂದೀಕ್ಷಿಸದೆ ಕಡೆಗಣ್ಣಿಂದ ನೋಡುವರೆ
ಹರಹರ ಅನಾಥರನು ಪಾಲಿಸಿ
ವರಕೊಡುವ ಉದಾರಿಯೆಂಬೀ
ಬಿರುದಬಿಡುವರೆ ತಂದೆ ರಕ್ಷಿಸು ನಮ್ಮನನವರತ ॥ ೪೦ ॥

ದೀನ ನಾನು ಸಮಸ್ತಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು
ಏನಬಲ್ಲೆನು ನಾನು ನೆರೆಸು
ಜ್ಞಾನಮೂರುತಿ ನೀನು ನಿನ್ನ ಸ
ಮಾನರುಂಟೇ ದೇವರಕ್ಷಿಸು ನಮ್ಮನನವರತ ॥ ೪೧ ॥

ತರಳತನದಲಿ ಕೆಲವು ದಿನದುರು
ಭರ್‍ಭದಗೆರ್ವದಿ ಕೆಲವು ದಿನ ನ್ಯೆ
ಮರೆದು ನಿಮ್ಮಡಿಗೆರಗದಾದೆನು ವಿಷಯ ಕೇಳಿಯಲಿ
ನರಕಭಾಜನನಾಗಿ ಕಾಮಾ
ತುರದಿ ಸರಧನ ಪರಸತಿಗೆ ಮನ
ಹರಿದ ಪಾಪವ ಕಳೆದು ರಕ್ಷಿಸು ನಮ್ಮನನವರತ ॥ ೪೨ ॥

ಮರೆದೆನಹೃದಯದಲಿ ನಿಮ್ಮನು
ಮರೆಯೆನಾಪತ್ತಿನಲಿ ಪೊರೆಯೆಂ
ದೊರಲುವೆನು ಮನಸೇಕಭಾವದೊಳಿಲ್ಲ ನಿಮ್ಮಡಿಯ
ಮರೆದು ಬಾಹಿರನಾದವನ ನೀ
ಮರೆವರೇ ಹಸು ತನ್ನ ಕಂದನ
ಮರೆವುದೇ ಮಮತೆಯಲಿ ರಕ್ಷಿಸು ನಮ್ಮನನವರತ ॥ ೪೩ ॥

ಧಾರುಣಿಗೆ ವರಚಕ್ರವರ್ತಿಗ
ಳಾರುಮಂದಿ ನೃಪಾಲಕರು ಹದಿ
ನಾರುಮಂದಿಯು ಧರಣಿಯನು ತಾವಾಳ್ದನೃಪರೆನಿತೋ
ವೀರರನು ಮೆಚ್ಚಿದಳೆ ಧರಣೀ
ನಾರಿ ಬಹುಮೋಹದೊಳು ನಿನ್ನನು
ಸೇರಿ ಓಲೈಸುವಳು ರಕ್ಷಿಸು ನಮ್ಮನನವರತ ॥ ೪೪ ॥

ಭಾರಕರ್ತನು ನೀನು ಬಹು ಸಂ
ಸಾರಿಯೆಂಬುದ ನಿಗಮತತಿ ಕೈ
ವಾರಿಸುತ್ತಿದೆ ದಿವಿಜಮನುಜ ಭುಜಂಗಮರೊಳಿನ್ನು
ಆರಿಗುಂಟು ಸ್ವತಂತ್ರ ನಿನ್ನಂ
ತಾರು ಮುಕ್ತಿಯನೀವ ಸದ್ಗುರು
ಪಾರು ಜಗದಧ್ಯಕ್ಷ ರಕ್ಷಿಸು ನಮ್ಮನನವರತ ॥ ೪೫ ॥

ಗತಿ ವಿಹೀನರಿಗಾರು ನೀನೇ
ಗತಿ ಕಣಾಪತಿಕರಿಸಿಕೊಡು ಸ
ದ್ಗತಿಯ ನೀನೆಲೆದೇವ ನಿನಗಪರಾಧಿ ನಾನಲ್ಲ.
ಶ್ರುತಿ ವಚನವಾಡುವದು ಶರಣಾ
ಗತರ ಸೇವಕನೆಂದು ನಿನ್ನನು
ಮತವಿಡಿದು ನಂಬಿದೆನು ರಕ್ಷಿಸು ನಮ್ಮನನವರತ ॥ ೪೬ ॥

ಈಗಲೋ ಈ ದೇಹ ವಿನ್ಯಾ
ವಾಗಲೋ ನಿಜವಲ್ಲವೆಂಬುದ
ನೀಗ ತಿಳಿಯದೆ ಮಡದಿ ಮನೆಮನೆ ವಾರ್ತೆಯೆಂದೆನುತ
ರಾಗಲೋಭದಿಮುಳುಗಿ ಮುಂದಣ
ತಾಗುಬಾಗುಗಳರಿಯೆ ನಿನ್ನ ಸ
ಮಾಗಮವ ಬಯಸುವೆನು ರಕ್ಷಿಸು ನಮ್ಮನನವರತ ॥ ೪೭ ॥

ಮಾಸರಕ್ತದ ಮಡುವಿನಲಿ ನವ
ಮಾಸ ಜನನಿಯ ಜಠರದೊಳಗಿರು
ವಾಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು
ನೀ ಸಲಹಿದವನಲ್ಲವೇ ಕರು
ಣಾಸಮುದ್ರನು ನೀನಿರಲು ಕಮ
ಲಾಸನನ ಹಂಗೇಕೆ ರಕ್ಷಿಸು ನಮ್ಮನನವರತ ॥ ೪೮ ॥

ಬಲುಮೃಗವು ಮರಪಕ್ಷಿಕೀಟಕ
ಜಲಚರೌಘದಿ ಜನಿಸಿದೆನು ಕೋ
ಟಲೆಗೊಳಿಸಬೇಡಕಟಮಾನವನಾದ ಬಳಿಕಿನ್ನು
ಕೊಲಿಸದಿರು ಯಮನಿಂದ ಮುರಹರ
ಒಲಿದು ನಿನ್ನನು ಭಜಿಸುವವರಿಗೆ
ಕೊಲೆಗೆ ಕಾರಣವೇನು ರಕ್ಷಿಸು ನಮ್ಮನನವರತ ॥ ೪೯ ॥

ಪಂಚಭೂತದ ಕಾಯದೊಳು ನೀ
ವಂಚಿಸದೆ ಇರುತಿರಲು ಪೂರ್ವದ
ಸಂಚಿತದ ಫಲವೆನ್ನಲೇಕಿದ ಮರುಳತನದಿಂದ
ಮಿಂಚಿದವರಿನ್ನುಂಟೆ ತಿಳಿಯೆ ಪ್ರ
ಪಂಚವೆಲ್ಲಕೆ ತಪ್ಪಿದವನೀ
ಕೊಂಚದವನೇ ಕೃಷ್ಣ ರಕ್ಷಿಸು ನಮ್ಮನನವರತ ॥ ೫೦ ॥

ಹಲವು ಕರ್ಮಗಳಿಂದ ಜಠರದ
ಹೊಲಸಿನಲಿ ಸಂಚರಿಸಿ ಪದವಿಯ
ಫಲವಕಾಣದೆ ಹೊಲಬು ತಪ್ಪದೆ ನನ್ನ ದೇಹದಲಿ
ಒಲಿದು ನೀನಿರೆ ನಿನ್ನ ಸಲುಗೆಯ
ಬಲುಮೆಯಲಿ ಬರೆಸೆಳೆವೆ ಮುಕ್ತಿಯ
ಲಲನೆಯನು ತಳುವಿಲ್ಲ ರಕ್ಷಿಸು ನಮ್ಮನನವರತ ॥ ೫೧ ॥

ಎತ್ತಿದೆನು ನಾನಾ ಶರೀರವ
ಹೊತ್ತು ಹೊತ್ತಲಸಿದೆನು ಸಲೆಬೇ
ಸತ್ತು ನಿನ್ನಯ ಪದವಕಾಣದೆ ತೊಳಲಿ ಬಳಲಿದೆನು
ಸತ್ತುಹುಟ್ಟುವ ಹುಟ್ಟಿಹಿಂಗುವ
ಸುತ್ತು ತೊಡಕನು ಮಾಣಿಸೆಲೆ ಪುರು
ಷೋತ್ತಮನೆ ಮನವೊಲಿದು ರಕ್ಷಿಸು ನಮ್ಮನನವರತ || ೫೨ ||

ಇಂದು ಈ ಜನ್ಮದಲಿ ನೀನೇ
ಬಂಧು ಹಿಂದಣ ಜನ್ಮದಲಿ ಬಳಿ
ಸಂದು ಮುಂದಣ ಜನ್ಮಕಧಿಪತಿಯಾಗಿ ಇರುತಿರಲು
ಎಂದಿಗೂ ಎನಗಿಲ್ಲತನು ಸಂ
ಬಂಧ ನಿನ್ನದು ಎನಗೆ ನೀಗತಿ
ಯೆಂದು ಬಿನ್ನೈಸಿದೆನು ರಕ್ಷಿಸು ನಮ್ಮನನವರತ || ೫೩ ||

ಗಣನೆಯಿಲ್ಲದೆ ಜನನಿಯರು ಮೊಲೆ
ಯುಣಿಸಲಾಪಯ ಬಿಂದುಗಳ ನದ
ನೆಣಿಸಲಳವೇ ಸಪ್ತಸಾಗರಕಧಿಕವೆನಿಸುವದು
ಬಣಗು ಕಮಲಜನದಕೆ ತಾನೇ
ಮಣಯುಗಾರನು ಈತಮಾಡಿದ
ಕುಣಿಕೆಗಳ ನೀ ಬಿಡಿಸಿ ರಕ್ಷಿಸು ನಮ್ಮನನವರತ || ೫೪ ||

ಲೇಸಕಾಣೆನು ಜನನ ಮರಣದಿ
ಘಾಸಿಯಾದೆನು ನೊಂದೆನಕಟಾ
ಲೇಸೆನಿಸಿ ನೋಡಲು ಪರಾತ್ಪರ ವಸ್ತು ನೀನಾಗಿ
ನೀ ಸಲಹುವವನಲ್ಲವೇ ಕರು
ಣಾಸಮುದ್ರನು ನೀನಿಲು ಕಮ
ಲಾಸನನ ಹಂಗೇಕೆ ರಕ್ಷಿಸು ನಮ್ಮನನವರತ || ೫೫ ||

ಕಾಪುರುಷರ್ಬೈದಾರು ಮಂದಿ ಸ
ಮಿಾಪದಲಿ ಕಾಡುವರು ಎನ್ನನು
ನೀಪರಾಮರಿಸದೆ ಪರಾಕಾಗಿಹುದು ಲೇಸಲ್ಲ
ಶ್ರೀಪದಾಬ್ಜದ ಸೇವೆಯಲೆ ನೆರೆ
ಪಾಪವನು ಪರಿಹರಿಸಿ ನೀ ನಿಜ
ರೂಪಿನಲಿ ಬಂದೊಲಿದು ರಕ್ಷಿಸು ನಮ್ಮನನವರತ || ೫೬ ||

ಐದು ತತ್ವಗಳಾದವೊಂದ
ಕ್ಕೈದು ಕಡೆಯಲಿ ತತ್ವವಿಪ್ಪ
ತ್ತೈದು ಕೂಡಿದ ತನುವಿನಲಿ ವಂಚಿಸದೆ ನೀನಿರಲು
ಭೇದಿಸದೆ ಜೀವಾತ್ಮನಾ ಸಂ
ಪಾದಿಸಿದ ಸಂಚಿತ ಸುಕರ್ಮವ
ನಾದರಿಸಿ ಕೈಕೊಂಡು ರಕ್ಷಿಸು ನಮ್ಮನನವರತ || ೫೭ ||

ಎಂಟುಗೇಣಿನ ದೇಹರೋಮಗ
ಳೆಂಟುಕೋಟಿಯು ಕೀಲ್ಗಳರವ
ತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು
ನೆಂಟ ನೀನಿರ್ದಗಲಿದೊಡೆ ಒಣ
ಹೆಂಟೆಯಲಿ ಮುಚ್ಚುವರು ದೇಹದ
ಲುಂಟೆ ಫಲಪುರುಷಾರ್ಥ ರಕ್ಷಿಸು ನಮ್ಮನನವರತ || ೫೮ ||

ಸ್ನಾನ ಸಂಧ್ಯಾಧ್ಯಾನ ಜಪತಪ
ದಾನಧರ್ಮ ಪರೋಪಕಾರ ವಿ
ಹೀನ ಜನ್ಮವದಳಿವುದಲ್ಲದೆ ಬೇರೆ ಗತಿಯುಂಟೆ
ಏನು ಮಾಡಿದೊಡೇನು ಮುಕ್ತಿ
ಜ್ಞಾನವಿಲ್ಲದೊಡಿಲ್ಲ ಭಕ್ತಿಗೆ
ನೀನೆ ಕಾರಣನಾಗಿ ರಕ್ಷಿಸು ನಮ್ಮನನವರತ || ೫೯ ||

ಕೋಪವೆಂಬುದು ತನುವಿನಲಿ ನೆರೆ
ಪಾಪಪಾತಕದಿಂದ ನರಕದ
ಕೂಪದಲಿ ಮುಳುಗುವದು ತಪ್ಪದು ಶಾಸ್ತ್ರಸಿದ್ಧವಲೆ
ರಾಪುಮಾಡದೆ ಬಿಡನು ಯಮನು ನಿ
ರಾಪರಾಧಿಯ ನೋಡಿ ಕೀರ್ತಿಕ
ಲಾಪವನು ನೀ ಕಾಯ್ದು ರಕ್ಷಿಸು ನಮ್ಮನನವರತ ॥ ೬೦ ॥

ನಿನ್ನ ಸೂತ್ರದೊಳಾಡುವವು ಜೈ
ತನ್ಯ ಸಚರಾಚರಗಳೆಲ್ಲವು
ನಿನ್ನ ಸೂತ್ರವು ತಪ್ಪಿದರೆ ಮೊಗ್ಗುವವು ಊಹೆಗಳು
ಇನ್ನು ನಮಗೆ ಸ್ವತಂತ್ರವೆಲ್ಲಿಯ
ದನ್ಯಕರ್ಮ ಸುಕರ್ಮವೆಲ್ಲವು
ನಿನ್ನದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತ ॥ ೬೧ ॥

ಒಡೆಯ ನೀನೆಂದರಿತು ಸಾನಿ
ಮ್ಮಡಿಯ ಭಜಿಸದೆ ದುರುಳನಾದೆನು
ಮಡದಿಮಕ್ಕಳ ಮೋಹದಲಿ ಮನಸಿಲುಕುತಡಿಗಡಿಗೆ
ಮಡದಿಯಾರೀ ಮಕ್ಕಳಾರೀ
ಒಡಲಿಗೊಡೆಯನು ನೀನು ನೀ ಕೈ
ವಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮನನವರತ ॥ ೬೨ ॥

ಶಕ್ತಿಯೆಂಬುದು ಮಾಯಮಾಯಾ
ಶಕ್ತಿಯದು ತನುವಿನಲಿ ನೀ ನಿಜ
ಮುಕ್ತಿದಾಯಕನಾಗಿರಲು ಸುಖದುಃಖಾದಿಗಳಿಗಾರು
ಯುಕ್ತಿಯೊಳಗಿದನರಿತು ಮನದ ವಿ
ರಕ್ತಿಯಲಿ ಭಜಿಸುವಗೆ ಮುಕ್ತಿಗೆ
ಭಕ್ತಿಯೇ ಕಾರಣವು ರಕ್ಷಿಸು ನಮ್ಮನನವರತ ॥ ೬೩ ॥

ಮೂರು ಗುಣ ವೊಳಿದೋರಿತದರೊಳು
ಮೂರು ಮೂರ್ತಿಗಳಾಗಿ ರಂಜಿಸಿ
ತೋರಿ ಸೃಷ್ಟಿಸ್ಥಿತಿಲಯಂಗಳ ರಚಿಸಿ ವಿಲಯದಲಿ
ಮೂರು ರೂಪೊಂದಾಗಿ ಪ್ರಳಯದ
ವಾರಿಯಲಿ ವಟಪತ್ರಶಯನದಿ
ಸೇರಿದವನೀನೀಗ ರಕ್ಷಿಸು ನಮ್ಮನನವರತ || ೬೪ ||

ನೀರಮೇಲಣ ಗುಳ್ಳೆಯಂದದಿ
ತೋರಿಯಡಗುವ ದೇಹವೀ ಸಂ
ಸಾರ ಬಹಳಾರ್ಣವದೊಳಗೆ ಮುಳುಗಿದೆನುಪತಿಕರಿಸಿ
ತೋರಿಸಚಲಾನಂದ ಪದವಿಯ
ಸೇರಿಸಕಟಾ ನಿನ್ನವೊಲು ನಮ
ಗಾರು ಬಾಂಧವರುಂಟು ರಕ್ಷಿಸು ನಮ್ಮನನವರತ || ೬೫ ||

ಹೊದ್ದಿನಿಲುವುದೆ ದರ್ಪಣದ ಮೇ
ಲುದ್ದರುಳಿ ಬೀಳ್ವಂತೆ ನಿಮಿಷದಿ
ಬಿದ್ದುಹೋಗುವ ಕಾಯವೀ ತನುವೆಂಬ ಪಾಶದಲಿ
ಬದ್ಧನಾದೆನು ಮಮತೆಯಲಿ ನೀ
ನಿದ್ದುದಕೆ ಫಲವೇನು ಭಕ್ತಿ ವಿ
ರುದ್ಧವಾಗದವೋಲು ರಕ್ಷಿಸು ನಮ್ಮನನವರತ || ೬೬ ||

ಕೇಳುವದು ಕಡುಕಷ್ಟ ಕಷ್ಟದ
ಬಾಳುವೆಯ ಬದುಕೇನು ಸುಡುಸುಡು
ಗಾಳಿಗೊಡ್ಡಿದ ಸೊಡರು ಈ ಸಂಸಾರದೇಳಿಗೆಯು
ಬಾಳಬೇಕೆಂಬುವಗೆ ನೆರೆ ನಿ
ಮ್ಮಾಳಿಗವ ಮಿಗೆಮಾಡಿ ಭಕ್ತಿಯೊ
ಳಾಳಿಬದುಕುವದುಚಿತ ರಕ್ಷಿಸುನಮ್ಮನನವರತ || ೬೭ ||

ದೇಹಧಾರಕನಾಗಿ ಬಹು ವಿಧ
ಮೋಹದೇಳಿಗೆಯಾಗಿ ಮುಕುತಿಗೆ
ಬಾಹಿರನು ತಾನಾಗಿ ವಿಷಯಾದಿಗಳಿಗೊಳಗಾಗಿ
ಹೇಯವೀ ಸಂಸಾರವೆನ್ನದೆ
ಮೋಹಿಸುವ ಮತಿಗೇಡಿ ಮಾನವ
ಸಾಹಸಿಯೆ ಸಟೆ ಮಾತು ರಕ್ಷಿಸು ನಮ್ಮನನವರತ || ೬೮ ||

ಅಳಿವ ಒಡಲನು ನೆಚ್ಚಿ ವಿಷಯಂ
ಗಳಿಗೆ ಕಾತುರನಾಗಿ ಮಿಗೆಕಳ
ವಳಿಸಿ ಕಾಲನ ಬಳಿಗೆ ಹಂಗಿಗನಾಗಿ ಬಾಳುವರೆ
ತಿಳಿದು ಮನದೊಳು ನಿನ್ನ ನಾಮಾ
ವಳಿಯ ಜಿಹ್ವೆಗೆ ತಂದು ಪಾಪವ
ಕಳೆದುಬಿಡುವದು ಲೇಸು ರಕ್ಷಿಸು ನಮ್ಮನನವರತ || ೬೯ ||

ವರುಷ ನೂರಾಯುಷ್ಯವದರೊಳ
ಗಿರುಳು ಕಳೆದೈವತ್ತು ನೃಪ
ತ್ತರಲಿವಾರ್ಧಿಕ ಬಾಲ್ಯಕೌಮಾರದಲಿ ಮೂವತ್ತು
ಇರದೆ ಸಂದುದು ಬಳಿಕ ಇಪ್ಪ
ತ್ತೊರುಷವದರೊಳಗಾದುದಂತಃ
ಕರಣ ನಿನ್ನೊಳು ತೋರಿ ರಕ್ಷಿಸು ನಮ್ಮನನವರತ || ೭೦ ||

ಊರು ತನಗೊಂದಿಲ್ಲ ಹೊತ್ತ ಶ
ರೀರಗಳು ಮಿತಿಯಿಲ್ಲ ತಾ ಸಂ
ಚಾರಿಸದ ನೆಲವಿಲ್ಲ ನುಡಿಯುದ ಭಾಷೆ ಮತ್ತಿಲ್ಲ
ಬೇರೆ ಹೊಸತೊಂದಿಲ್ಲ ಉಣ್ಣದ
ಸಾರವಸ್ತುಗಳಿಲ್ಲ ತನು ಸಂ
ಚಾರವೀ ಜಗಯಾಯ್ತು ರಕ್ಷಿಸು ನಮ್ಮನನವರತ || ೭೧ ||

ಗೋಪುರದ ಭಾರವನು ಗಾರೆಯ
ರೂಪುದೋರಿದ ಪ್ರತಿಮೆಯಂದದಿ
ಈಪರಿಯ ಸಂಸಾರಭಾರವನಾಂತು ಶಿರದಲ್ಲಿ
ತಾಪಠಾಕ್ರಮಿಯೆಂದು ಮನುಜನು
ಕಾಪಥವನೈದುವನು ವಿಶ್ವ
ವ್ಯಾಪಕನು ನೀನಹುದು ರಕ್ಷಿಸು ನಮ್ಮನನವರತ || ೭೨ ||

ಬೀಜವೃಕ್ಷದೊಳಾಯ್ತು ವೃಕ್ಷಕೆ
ಬೀಜವಾರಿಂದಾಯ್ತು ಲೋಕದಿ
ಬೀಜವೃಕ್ಷ ನ್ಯಾಯುವಿದ ಭೇದಿಸುವರಾರಿನ್ನು
ಸೋಜಿಗವನೀಬಲ್ಲೆ ನಿನ್ನೊಳು
ರಾಜಿಸುತ ಮೊಳೆದೋರುವದು ಸುರ
ರಾಜನಂದನ ನಮಿತ ರಕ್ಷಿಸು ನಮ್ಮನನವರತ || ೭೩ ||

ತೊಗಲು ಬೊಂಬೆಗಳಂತೆ ನಾಲಕು
ಬಗೆಯ ನಿರ್ಮಾಣದಲಿ ಇದರೊಳು
ನೆಗಳಿದೀಚೌಷಷ್ಟಿ ಲಕ್ಷಣ ಜಾತಿಧರ್ಮದಲಿ
ಬಗೆಬಗೆಯ ನಾಮಾಂಕಿತದ ಜೀ
ವಿಗಳವೆಲ್ಲವು ನಿನ್ನ ನಾಮದಿ
ಜಗಕೆ ತೋರುತ್ತಿಹವು ರಕ್ಷಿಸು ನಮ್ಮನನವರತ || ೭೪ ||

ಹೂಡಿದೆಲು ಮರಮುಟ್ಟು ಮಾಂಸದ
ಗೋಡೆಚರ್ಮದ ಹೊದಿಕೆ ನರಗಳ
ಕೂಡೆ ಹಿಂಡಿಗೆ ಬಿಗಿದ ಮನೆಯೊಳಗಾತ್ಮನಿರುತಿರಲು
ಬೀಡುತೊಲಗಿದ ಬಳಿಕಲಾ ಸುಡು
ಗಾಡಿನಲಿ ಬೆಂದುರಿವ ಕೊಂಪೆಯು
ನೋಡಿ ನಂಬಿರಬಹುದೆ ರಕ್ಷಿಸು ನಮ್ಮನನವರತ || ೭೫ ||

ಬೀಗ ಮುದ್ರೆಗಳಿಲ್ಲ ದೂರಿಗೆ
ಬಾಗಿಲುಗಳೊಂಭತ್ತು ಹಗಲಿರು
ಳಾಗಿ ಮುಚ್ಚದೆ ತೆರೆದಿಹುದು ಜೀವಾತ್ಮತಾನಿರುತ
ನೀಗಿ ಎಲ್ಲವ ಬಿಸುಟು ಬೇಗದಿ
ಹೋಗುತಿಹ ಸಮಯದಲಿ ಇವರವ
ರಾಗಬಲ್ಲರೆ ದೇವ ರಕ್ಷಿಸು ನಮ್ಮನನವರತ || ೨೬ ||

ಕೀಲುಬಿಗಿದಿಹು ದೈದುತಿರುಗುವ
ಗಾಲಿ ಎರಡರ ರಥದಿ ತ್ರೈಗುಣ
ಶೀಲನೋರ್ವನು ಸಂಚರಿಸುತಿಹನಾ ರಥಾಗ್ರದಲಿ
ಕೀಲು ಕಡೆಗೊಂದೂರಿ ಬೀಳಲು
ಕಾಲಗತಿ ತಪ್ಪುವದು ಅದರನು
ಕೂಲ ನಿನ್ನೊಳಗಿಹುದು ರಕ್ಷಿಸು ನಮ್ಮನನವರತ || ೨೭ ||

ಬಿಗಿದರಕುತದ ರೋಮಕೂಪದ
ತೊಗಲಕೋಟೆಯ ನಂಬಿ ರೋಗಾ
ದಿಗಳ ಮುತ್ತಿಗೆ ಬಲಿದು ಜೀವನ ಪಿಡಿಯಲನುವಾಯ್ತು
ವಿಗಡಯಮನಾಳುಗಳು ಬರುತಿರೆ
ತೆಗೆಸುಕಾಲನ ಬಲದಬಲು ಮು
ತ್ತಿಗೆಯನಿದ ಪರಿಹರಿಸಿ ರಕ್ಷಿಸು ನಮ್ಮನನವರತ || ೨೮ ||

ವಾರಣಗಳೆಂಟೆಸೆವ ನಗರಕೆ
ದ್ವಾರವೊಂಭತ್ತದಕೆ ಬಲುಮೊನೆ
ಗಾರರಾದಾಳುಗಳ ಕಾವಲುಗಾರರನು ಮಾಡಿ
ಆರರಿಯದಂತದರೊಳಗೆ ಹೃದ
ಯಾರವಿಂದದಿ ನೀನಿರಲು ಬರಿ
ದೂರು ಜೀವನಿಗುಂಟೆ ರಕ್ಷಿಸು ನಮ್ಮನನವರತ || ೨೯ ||

ಪೇಳಲೆನ್ನಳವಲ್ಲ ವೀಯುವ
ನಾಳುಗಳು ನೆರೆಯಂಗ ದೇಶವ
ಧಾಳಿಮಾಡುವರಕಟಕಟ ಸೆರೆಸೂರೆಗಳ ಹಿಡಿದು
ಕಾಳುಮಾಡುವರಿನ್ನು ತನುವಿದು
ಬಾಳಲರಿಯದು ಕೋಟೆಯವರಿಗೆ
ಕೋಳುಹೋಗದ ಮುನ್ನ ರಕ್ಷಿಸು ನಮ್ಮನನವರತ ‖ ೮೦ ‖

ನಾಲಿಗೆಯು ನಾಸಿಕವು ನಯನ ಕ
ಪಾಲಪದ ಪಾಣಿಗಳು ತನುವಿನ
ಮೂಲಕರ್ತೃವಿನಲ್ಲಿ ಪರಿಚಾರಕರು ತಾವಾಗಿ
ಲೀಲೆಯಿಂದಿರುತಿರ್ದು ಕಡೆಯಲಿ
ಕಾಲತೀರಿದ ಬಳಿಕಲದರನು
ಕೂಲ ನಿನ್ನೊಳಗಿಹುದು ರಕ್ಷಿಸು ನಮ್ಮನನವರತ ‖ ೮೧ ‖

ಸತ್ತವರಿಗಳಲೇಕೆ ತನ್ನನು
ಹೊತ್ತವರು ಹೆತ್ತವರುಗಳು ತಾವ್
ಸತ್ತುಹೋಗುವರಲ್ಲದುಳಿವರೆ ಮರುಗಲೇಕಿನ್ನು
ಮೃತ್ಯು ಬೆನ್ನಿನೊಳಿಹುದು ತಾವಿ
ನ್ನತ್ತುಮಾಡುವದೇನು ಪೂರ್ವದ
ತೆತ್ತಿಗನು ನೀನೀಗ ರಕ್ಷಿಸು ನಮ್ಮನನವರತ ‖ ೮೨ ‖

ಮಣ್ಣು ಮಣ್ಣಿನೊಳುದಿಸಲದರಲಿ
ಮಣ್ಣು ಬೊಂಬೆಗಳಾಗಿ ರಂಜಿಸಿ
ಮಣ್ಣಿನಾಹಾರದಲಿ ಜೀವವ ಹೊರೆದು ಉಪಚರಿಸಿ
ಮಣ್ಣಿನಲಿ ಬಂಧಿಸಿದ ದೇಹವ
ಮಣ್ಣುಗೂಡಿಸಬೇಡ ಜ್ಞಾನದ
ಕಣ್ಣು ದೃಷ್ಟಿಯನಿತ್ತು ರಕ್ಷಿಸು ನಮ್ಮನನವರತ ‖ ೮೩ ‖

ಬೀಯವಾಗುವ ತನುವಿನಲಿ ನಿ
ರ್ದಾಯಕನು ನೀನಿರ್ದು ಅತಿಹಿರಿ
ದಾಯಸಂಬಡಿಸುವರೆ ನೀನನುಕೂಲವಾಗಿದ್ದು
ತಾಯನಗಲಿದ ಶಿಶುವಿನಂದದಿ
ಬಾಯ ಬಿಡುವಂತಾಯ್ತುಲೇ ಚಿಂ
ತಾಯಕನೆ ಬಿಡಬೇಡ ರಕ್ಷಿಸು ನಮ್ಮನನವರತ || ೮೪ ||

ಮೊದಲು ಜನನವನರಿಯೆ ಮರಣದ
ಹದನ ಕಡೆಯಲಿ ತಿಳಿಯೆನಾ ಮ
ಧ್ಯದಲಿ ನೆರೆನಾನಿಪುಣನೆಂಬುದು ಬಳಿಕ ನಗೆಗೇಡು
ಮೊದಲು ಕಡೆ ಮಧ್ಯಗಳ ಬಲ್ಲವ
ಮದನ ಜನಕನು ನೀನು ನಿನ್ನಯ
ಪದಯುಗವ ಬಯಸುವೆನು ರಕ್ಷಿಸು ನಮ್ಮನನವರತ || ೮೫ ||

ಸಾರವಿಲ್ಲದ ದೇಹವಿದು ನಿ
ಸ್ಸಾರವಾಗಿಹ ತನುವಿನಲಿ ಸಂ
ಚಾರಿಯಹನೀನಿರ್ದು ಕಡೆಯಲಿ ತೊಲಗಿಹೋಗುತಲಿ
ದೂರ ತಪ್ಪಿಸಿಕೊಂಡು ಬರಿಯಪ
ದೂರ ಹೊರಿಸಿದೆ ಜೀವನಲಿ ಇದ
ನಾರುಮೆಚ್ಚುವರಕಟ ರಕ್ಷಿಸು ನಮ್ಮನನವರತ || ೮೬ ||

ಅಂಡವೆರಡುದ್ಭವಿಸಿದವು ಬ್ರ
ಹ್ಮಾಂಡ ವದರೋಪಾದಿಯಲಿ ಪಿಂ
ಡಾಂಡವೆಸೆದುದು ಸ್ಥೂಲಕಾರಣ ಸೂಕ್ಷ್ಮ ತನುವಿನಲಿ
ಅಂಡನಿನ್ನಯರೋಮಕೂಪದೊ
ಳಂಡಲೆದವಖಿಲಾಂಡವಿದು ಬ್ರ
ಹ್ಮಾಂಡನಾಯಕ ನೀನು ರಕ್ಷಿಸು ನಮ್ಮನನವರತ || ೮೭ ||

ಒಂದು ದಿನ ತನುವಿನಲಿ ನಡೆವುವು
ಇಂದು ಭಾಸ್ಕರ ಸ್ವರಗಳಿಗಿಪ್ಪ
ತ್ತೊಂದು ಸಾವಿರದಾರನೂರನು ಏಳು ಭಾಗದಲಿ
ಬಂದುದನು ಉಡು ಚಕ್ರದಲ್ಲಿಗೆ
ತಂದು ಧಾರೆಯನೆರೆದಮುನಿಕುಲ
ಬೃಂದ ಹೃದಯನು ನೀನು ರಕ್ಷಿಸು ನಮ್ಮನನವರತ ‖ ೮೮ ‖

ತೊಲಗುವರು ಕಡೆಕಡೆಗೆ ತಾ ಹೊಲೆ
ಹೊಲೆಯೆನುತ ಕಳವಳಿಸಿ ಮೂತ್ರದ
ಹೊಲೆಯೊಳಗೆ ಬಂದಿಹುದ ಕಾಣದೆ ಬರಿದೆ ಮನನೊಂದು
ಜಲದೊಳಗೆ ಮುಳುಗಿದರೆ ತೊಲಗದು
ಹೊಲೆಗೆಲಸ ವೀದೇಹದೊಳು ನೀ
ನೆಲೆಸಿರಲು ಹೊಲೆಯುಂಟೆ ರಕ್ಷಿಸು ನಮ್ಮನನವರತ ‖ ೮೯ ‖

ಬರಿದಹಂಕಾರದಲಿ ತತ್ವದ
ಕುರುಹಕಾಣದೆ ನಿನ್ನ ದಾಸರ
ಜರಿದು ವೇದ ಪುರಾಣ ಶಾಸ್ತ್ರಗಳೋದಿ ಫಲವೇನು
ನರರು ದುಷ್ಕರ್ಮದಲಿ ಮಾಡಿದ
ದುರಿತವಡಗಲು ನಿನ್ನ ನಾಮ
ಸ್ಮರಣೆಯೊಂದೇ ಸಾಕು ರಕ್ಷಿಸು ನಮ್ಮನನವರತ ‖ ೯೦ ‖

ಎಂಜಲೆಂಜಲು ಎಂಬರಾನುಡಿ
ಎಂಜಲಲ್ಲವೆ ವಾರಿ ಜಲಚರ
ದೆಂಜಲಲ್ಲವೆ ಹಾಲು ಕರುವಿನ ಎಂಜಲೆನ್ನಿಸಲೆ
ಎಂಜಲೆಲ್ಲಿಯುದೆಲ್ಲಿಯುಂ ಪರ
ರೆಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೇ ದೇವ ರಕ್ಷಿಸು ನಮ್ಮನನವರತ ‖ ೯೧ ‖

ಕೇಳುವದು ಹರಿಕಥೆಯ ಕೇಳಲು
ಹೇಳುವುದು ಹರಿಭಕ್ತಿ ಮನದಲಿ
ತಾಳುವದು ಹಿರಿದಾಗಿ ನಿನ್ನಯ ಚರಣಸೇವೆಯಲಿ
ಊಳಿಗವ ಮಾಡುವದು ವಿಷಯುವ
ಹೂಳುವದು ನಿಜಮುಕ್ತಿ ಕಾಂತೆಯ
ನಾಳುವದು ಕೃಪೆಮಾಡಿ ರಕ್ಷಿಸು ನಮ್ಮನನವರತ || ೯೨ ||

ಈ ತೆರದೊಳಚ್ಯುತನ ನಾಮವ
ನೂತನದಿ ವಸುಧಾತಲದಿ ವಿ
ಖ್ಯಾತಿ ಬಯಸದೆ ಬಣ್ಣಿಸಿದೆ ಭಾಮಿನಿವೃತ್ತದಲಿ ನಾನು
ನೀತಿಕೋವಿದರಾಲಿಸುವದತಿ
ಪ್ರೀತಿಯಲಿ ಕೇಳ್ದರಿಗೆ ಅಸುರಾ
ರಾತಿ ಚೆನ್ನಿಗರಾಯ ಸುಖಗಳನೀವನನವರತ || ೯೩ ||

ಬಾದರಾಯಣ ಪೇಳ್ದ ಭಾರತ
ಕಾದಿಕರ್ತನುದಾರ ಶ್ರೀಪುರ
ದಾದಿ ಕೇಶವಮೂರ್ತಿಗಂಕಿತವಾದ ಚರಿತೆಯನು
ಮೇದಿನಿಯೊಳಿದನಾರು ಹೃದಯದೊ
ಳಾದರಿಸಿ ಕೇಳ್ದಪರೊ ಮುದದಲಿ
ಆದಿಮೂರುತಿ ಸುರವರಾಧಿಪನೊಲಿವನನವರತ || ೯೪ ||

ಕುಲಗಿರಿಗಳನ್ವಯವು ಧಾರುಣಿ
ಜಲಧಿ ಪಾವಕ ಮರುತ ಜಲನಭ
ಜಲಜಸಖ ಶೀತಾಂಶು ತಾರೆಗಳುಳ್ಳ ಪರಿಯಂತ
ಚಲನೆಯಿಲ್ಲದೆ ನಿನ್ನ ಚರಿತೆಯು
ಬಲಿದು ಧರೆಯೊಳಗಿಪ್ಪುದದರಿಂ
ಚೆಲುವಚೆನ್ನಿಗರಾಯ ರಕ್ಷಿಸು ನಮ್ಮನನವರತ || ೯೫ ||

ನೂರು ಕನ್ಯಾದಾನವನು ಭಾ
ಗೀರಥೀ ಸ್ನಾನವನು ಮಿಗೆ ಕೈ
ಯಾರೆಗೋಗಳ ಪ್ರೇಮದಿಂದಲಿ ಭೂಸುರರಿಗೊಲಿದು
ಊರುಗಳ ನೂರಗ್ರಹಾರವ
ಧಾರೆಯೆರೆದಿತ್ತಂತೆ ಫಲ ಕೈ
ಸೇರುವುದು ಹರಿಭಕ್ತಿಸಾರದ ಕಥೆಯ ಕೇಳ್ದರಿಗೆ ॥ ೯೬ ॥

ಮೇರು ಮಂದರ ನಿಭಸುವರ್ಣವ
ವಾರಿಮಧ್ಯದೊಳಿರುವ ಅವನಿಯ
ನಾರಿಯರ ಗಾಯಿತ್ರಿ ಪಶುಗಳನಿತ್ತ ಫಲವಹುದು
ಧಾರುಣಿಯೊಳೀ ಭಕ್ತಿಸಾರವ
ನಾರು ಓದುವರವರಿಗನುದಿನ
ಚಾರುವರಗಳನಿತ್ತು ರಕ್ಷಿಪನಾದಿ ಕೇಶವನು ॥ ೯೭ ॥

ಲೋಕದೊಳಗತ್ಯಧಿಕ ವೆನಿಸುವ
ಕಾಕಿನೆಲೆಸಿರಿಯಾದಿ ಕೇಶವ
ತಾ ಕೃಪೆಯೊಳಗೆ ನುಡಿಸಿದನು ಈ ಭಕ್ತಿಸಾರವನು
ಜೋಕೆಯಲಿ ಬರೆದೋದಿ ಕೇಳ್ದರ
ನಾಕುಲದಿ ಮಾಧವನು ಕರುಣಿಪ
ಶ್ರೀಕಮಲವಲ್ಲಭನು ಮಿಗೆಬಡದಾದಿ ಕೇಶವನು ॥ ೯೮ ॥

ಮಂಗಳಂ ಸರ್ವಾಧಿಭೂತಗೆ
ಮಂಗಳಂ ಸರ್ವವನು ಪೊರೆವಗೆ
ಮಂಗಳಂ ತನ್ನೊಳಗೆ ಲೋಕವ ಲಯಿಸಿ ಕೊಂಬುವಗೆ
ಮಂಗಳಂ ಸರ್ವ ಸ್ವತಂತ್ರಗೆ
ಮಂಗಳಂ ಸತ್ಯ ಸ್ವರೂಪಗೆ
ಮಂಗಳಂ ಸಿರಿಯೊಡೆಯ ಚನ್ನಿಗರಾಯ ಕೇಶವಗೆ ॥ ೯೯ ॥

ಮಂಗಳಂ ಜಗದಾದಿಮೂರ್ತಿಗೆ
ಮಂಗಳಂ ಜಯ ಪುಣ್ಯ ಕೀರ್ತಿಗೆ
ಮಂಗಳಂ ಕರಕಲಿತ ಚಕ್ರವಿದಳಿತ ನಕ್ರನಿಗೆ
ಮಂಗಳಂ ದ್ರೌಪದಿಯ ಪೊರೆದಗೆ
ಮಂಗಳಂ ಧ್ರುವರಾಯಗೊಲಿದಗೆ
ಮಂಗಳಂ ಬೇಲೂರು ಚೆನ್ನಿಗರಾಯ ಕೇಶವಗೆ ॥ ೧೦೦ ॥

ಹರಿಕಥಾಮೃತಸಾರ ಸಂಗ್ರಹ

ಸೂಚನೆ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು

ಗಣಪತಿಸ್ತೋತ್ರ

ಜಯಜಯತು ವಿಘ್ನೇಶ ತಾಪ
ತ್ರಯ ವಿನಾಶನ ವಿಶ್ವಮಂಗಳ
ಜಯಜಯತು ವಿದ್ಯಾಪ್ರದಾಯಕ ವೀತ ಭಯಶೋಕ
ಜಯಜಯತು ಚಾರ್ವಾಂಗ ಕರುಣಾ
ನಯನದಿಂದಲಿ ನೋಡಿ ಜನುಮಾ
ಮಯ ಮೃತಿಗಳನು ಭಕ್ತರಿಗೆ ಭವದೊಳಗೆ ಪರಿಹರಿಸು ॥ ೧ ॥

ವೇದವ್ಯಾಸಸ್ತೋತ್ರ

ವೇದ ಪೀಠ ವಿರಿಂಚಿ ಭವ ಶ
ಕ್ರಾದಿ ಸುರ ವಿಜ್ಞಾನ ದಾಯಕ
ಮೋದ ಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ
ಛೇದ ಭೇದ ವಿಷಾದ ಕುಟಿಲಾಂ
ತಾದಿ ಮಧ್ಯ ವಿದೂರನಾದಾ
ನಾದಿ ಕಾರಣ ಬಾದರಾಯಣ ಪಾಹಿ ಸತ್ರಾಣ ॥ ೨ ॥

ಆಚಾರ್ಯಸ್ತೋತ್ರ

ಪಂಚಭೇದಾತ್ಮಕ ಪ್ರಪಂಚಕೆ
ಪಂಚರೂಪಾತ್ಮಕನೆ ದೈವತ
ಪಂಚಮುಖಶಕ್ರಾದಿಗಳು ಕಿಂಕರರು ಶ್ರೀಹರಿಗೆ
ಪಂಚವಿಂಶತಿ ತತ್ವ ತರತಮ
ಪಂಚಿಕೆಗಳನು ಪೇಳ್ದ ಭಾವಿ ವಿ
ರಿಂಚನೆನಿಪಾನಂದತೀರ್ಥರ ನೆನೆವೆನನುದಿನವು ॥ ೩ ॥

ಶಂಕರಸ್ತೋತ್ರ

ವಾಮದೇವ ವಿರಿಂಚಿತನಯ ಉ
ಮಾ ಮನೋಹರ ಉಗ್ರಧೂರ್ಜಟಿ
ಸಾಮಜಾಜಿನವಸನ ಭೂಷಣ ಸುಮನಸೋತ್ತಂಸ
ಕಾಮಹರ ಕೈಲಾಸಮಂದಿರ
ಸೋಮ ಸೂರ್ಯಾನಲ ವಿಲೋಚನ
ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಳವ ॥ ೪ ॥

ಸಕಲ ದೇವತಾಸ್ತೋತ್ರ

ಪಾಕಶಾಸನ ಮುಖ್ಯಸಕಲ ದಿ
ವೌಕಸರಿಗಭಿನಮಿಪೆ ಋಷಿಗಳಿ
ಗೇಕಚಿತ್ತದಿ ಪಿತೃಗಳಿಗೆ ಗಂಧರ್ವ ಕ್ಷಿತಿಪರಿಗೆ
ಆ ಕಮಲನಾಭಾದಿ ಯತಿಗಳ
ನೀಕಕಾನಮಿಸುವೆನು ಬಿಡದೆ ರ
ಮಾಕಳತ್ರನ ದಾಸವರ್ಗಕೆ ನಮಿಪೆನನವರತ ॥ ೫ ॥

ಪರಿಮಳವು ಸುಮನದೊಳಗನಲನು
ಅರಣಿಯೊಳಗಿಪ್ಪಂತೆ ದಾವೋ
ದರನು ಬ್ರಹ್ಮಾದಿಗಳ ಮನದಲಿ ತೋರಿತೋರದಲೆ
ಇರುತಲಿಹ ಜಗನಾಥ ವಿಠಲನ
ಕರುಣ ಪಡೆವ ಮುಮುಕ್ಷುಜೀವರು
ಪರಮ ಭಾಗವತರನು ಕೊಂಡಾಡುವದು ಪ್ರತಿದಿನವು ॥ ೬ ॥

ಶ್ರವಣ ಮನಕಾನಂದವೀವುದು
ಭವಜನಿತ ದುಃಖಗಳ ಕಳೆವುದು
ವಿವಿಧ ಭೋಗಗಳಿಹಪರಂಗಳಲಿತ್ತು ಸಲಹುವದು
ಭುವಪಾವನವೆನಿಪ ಲಕುಮಿ
ಧವನ ಮಂಗಳಕಥೆಯು ಪರಮೋ
ತ್ಸವದಿ ಕಿವಿಗೊಟ್ಟಾಲಿಪುದು ಮಾನವರು ದಿನದಿನದಿ ॥ ೭ ॥

ಮಳೆಯನೀರೋಣಿಯಲಿ ಪರಿಯಲು
ಬಳಿಸ್ವರೂರೊಳಗಿದ್ದ ಜನರಾ
ಜಲವು ಹೆದ್ದೊರೆಗೂಡೆ ಮಜ್ಜನ ಪಾನ ಗೈದಪರು
ಕಲುಷವಚನಗಳಾದರಿವು ಬಾಂ
ಬೊಳೆಯ ಪೆತ್ತನ ಪಾದಮಹಿಮಾ
ಜಲಧಿ ಪೊಕ್ಕುದರಿಂದ ಮಾಣ್ದಪರೇ ಮಹೀಸುರರು ॥ ೮ ॥

ಶ್ರುತಿತತಿಗಳಭಿಮಾನಿ ಲಕುಮಿ
ಸ್ತುತಿಗಳಿಗೆ ಗೋಚರಿಸದಪ್ರತಿ
ಹತ ಮಹೈಶ್ವರ್ಯಾದ್ಯಖಿಳ ಸದ್ಗುಣಗಣಾಂಭೋಧಿ।
ಪ್ರತಿ ದಿವಸ ತನ್ನಂಘ್ರಿಸೇವಾ
ರತಮಹಾತ್ಮರು ಮಾಡುತಿಹ ಸಂ
ಸ್ತುತಿಗೆ ವಶನಾಗುವನಿವನ ಕಾರುಣ್ಯಕೇನೆಂಬೆ ॥ ೯ ॥

ಮನವಚನಕತಿದೂರ ನೆನೆವವ
ರನುಸರಿಸಿ ತಿರುಗುವನು ಜಾಹ್ನವಿ
ಜನಕ ಜನರೊಳಗಿದ್ದು ಜನಿಸುವ ಜಗದುದರ ತಾನು
ಘನಮಹಿಮ ಗಾಂಗೇಯನುತ ಗಾ
ಯನವ ಕೇಳುತ ಗಗನಚರವಾ
ಹನ ದಿವೌಕಸರೊಡನೆ ತಿರುಗುವ ಮನೆಮನೆಗಳಲ್ಲಿ ॥ ೧೦ ॥

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ ಕುಳಿತು ಪಾಡಲು
ನಿಲುವ ನಿಂತರೆ ನಲಿವ ನಲಿದರೆ ಒಲಿವೆ ನಿಮಗೆಂಬ
ಸುಲಭನೋ ಹರಿ ತನ್ನ ವರನರ
ಗಳಿಗೆ ಬಿಟ್ಟಗಲನು ರಮಾಧವ
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ ॥ ೧೧ ॥

ಮನದೊಳಗೆ ತಾನಿಪ್ಪ ಮನವೆಂ
ದೆನಿಸಿಕೊಂಬನು ಮನದ ವೃತ್ತಿಗ
ಳನುಸರಿಸಿ ಭೋಗಗಳನೀವನು ತ್ರಿವಿಧ ಚೇತನಕೆ
ಮನವನಿತ್ತರೆ ತನ್ನನೀವನು
ತನುವ ದಂಡಿಸಿ ದಿನದಿನದಿ ಸಾ
ಧನವ ಮಾಳ್ಪರಿಗಿತ್ತಪನು ಸ್ವರ್ಗಾದಿ ಭೋಗಗಳ ॥ ೧೨ ॥

ಪರಮ ಸತ್ಪುರುಷಾರ್ಥರೂಪನು
ಹರಿಯೆ ಲೋಕಕೆ ಎಂದು ಪರಮಾ
ದರದಿ ಸದುಪಾಸನೆಯ ಗೈವರಿಗಿತ್ತವನು ತನ್ನ
ಮರೆದು ಧರ್ಮಾರ್ಥಗಳ ಕಾಮಿಸು
ವರಿಗೆ ನಗುತತಿ ಶೀಘ್ರದಿಂದಲಿ
ಸುರಪತನಯ ಸುಯೋಧನರಿಗಿತ್ತಂತೆ ಕೊಡುತಿಪ್ಪ ॥ ೧೩ ॥

ಒಬ್ಬನಲಿ ನಿಂತಾಡುವನು ಮ
ತ್ತೊಬ್ಬನಲಿ ನೋಡುವನು ಬೇಡುವ
ನೊಬ್ಬನಲಿ ನೀಡುವನು ಮಾತಾಡುವನು ಬೆರಗಾಗಿ
ಅಬ್ಬರದ ಹೆದ್ದೈವನಿವ ಮ
ತ್ತೊಬ್ಬರನು ಲೆಕ್ಕಿಸದೆ ಲೋಕದೊ
ಳೊಬ್ಬನೇ ತಾಬಾಧ್ಯ ಬಾಧಕನಾಹ ನಿರ್ಭೀತ || ೧೪ ||

ಶರಣಜನಮಂದಾರ ಶಾಶ್ವತ
ಕರುಣಿ ಕಮಲಾಕಾಂತ ಕಾಮದ
ಪರಮ ಪಾವನತರ ಸುಮಂಗಳಚರಿತ ಪಾರ್ಥಸಖ
ನಿರುಪಮಾನಂದಾತ್ಮನಿರ್ಗತ
ದುರಿತ ದೇವವರೇಣ್ಯನೆಂದಾ
ದರದಿ ಕರೆಯಲು ಬಂದೊದಗುವನು ತನ್ನವರ ಬಳಿಗೆ || ೧೫ ||

ಜನನಿಯನು ಕಾಣದಿಹ ಬಾಲಕ
ನೆನೆನೆನೆದು ಹಲುಬುತಿರೆ ಕತ್ತಲೆ
ಮನೆಯೊಳಡಗಿದ್ದವಳು ನೋಡುತ ನಗುತ ಹರುಷದಲಿ
ತನಯನಂ ಬಿಗಿದಪ್ಪಿ ಮುದ್ದಿಸಿ
ಕನಲಿಕೆಯ ಕಳೆವಂತೆ ಮಧುಸೂ
ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು || ೧೬ ||

ಇಟ್ಟಿಕಲ್ಲನು ಭಕುತಿಯಿಂದಲಿ
ಕೊಟ್ಟಭಕತಗೆ ಮೆಚ್ಚಿತನ್ನನೆ
ಕೊಟ್ಟ ಬಡ ಬ್ರಾಹ್ಮಣನ ಒಪ್ಪಿಡಿಯವಲಿಗಖಿಳಾರ್ಥ
ಕೆಟ್ಟ ಮಾತುಗಳಂದ ಚೈದ್ಯನ
ಪೊಟ್ಟೆಯೊಳಗಿಂ ಬಿಟ್ಟ ಬಾಣದ
ಲಿಟ್ಟ ಭೀಷ್ಮನ ಅವಗುಣಗಳೆಣಿಸಿದನೆ ಕರುಣಾಳು || ೧೭ ||

ಬಾಲಕನ ಕಲಭಾಷೆ ಜನನಿಯು
ಕೇಳಿ ಸುಖಬಡುವಂತೆ ಲಕುಮಿಾ
ಲೋಲಭಕ್ತರು ಮಾಡುತಿಹ ಸಂಸ್ತುತಿಗೆ ಹಿಗ್ಗುವನು
ತಾಳ ತನ್ನವರಲ್ಲಿ ಮಾಡುವ
ಹೇಳನವ ಹೆದ್ದೈವ ವಿದುರನ
ಆಲಯದಿ ಪಾಲುಂಡು ಕುರುಪನ ಮಾನವನೆ ಕೊಂಡ ॥ ೧೮ ॥

ಸ್ಮರಿಸುವವರಪರಾಧಗಳ ತಾ
ಸ್ಮರಿಸ ಸಕಲೇಷ್ಟಪ್ರದಾಯಕ
ಮರಳಿ ತನಗರ್ಪಿಸಲು ಕೊಟ್ಟದನಂತ ಮಡಿಮಾಡಿ
ಪರಿಪರಿಯಲಿಂದುಣಿಸಿ ಸುಖಸಾ
ಸಿರದೊಳೋಲಾಡಿಸುವ ಮಂಗಳ
ಚರಿತ ಚಿನ್ಮಯ ಗಾತ್ರ ಲೋಕಪವಿತ್ರ ಸುಚರಿತ್ರ ॥ ೧೯ ॥

ಏನು ಕರುಣಾನಿಧಿಯೊ ಹರಿ ಮ
ತ್ತೇನು ಭಕ್ತಾಧೀನನೋ ಇ
ನ್ನೇನು ಈತನ ಲೀಲೆ ಇಚ್ಛಾಮಾತ್ರದಲಿ ಜಗವ
ತಾನೆ ಸೃಜಿಸುವ ಪಾಲಿಸುವ ನಿ
ರ್ವಾಣ ಮೊದಲಾದಖಿಳ ಲೋಕ
ಸ್ಥಾನದಲಿ ಮತ್ತವರ ನಿಟ್ಟಾನಂದ ಪಡಿಸುವನು ॥ ೨೦ ॥

ಜನಪ ಮೆಚ್ಚಿದರೀವಧನ ವಾ
ಹನ ವಿಭೂಷಣ ವಸನ ಭೂಮಿಯ
ತನು ಮನಗಳಿತ್ತಾದರಿಸರುಂಟೇನು ಲೋಕದೊಳು
ಅನವರತನೆನೆವವರನಂತಾ
ಸನವೆ ಮೊದಲಾದಾಲಯದಲಿ
ಟ್ಟಣುಗನಂದದಲವರ ವಶವಾಗುವನು ಮುಹಮುಹಿನು ॥ ೨೧ ॥

ಪಾಪಕರ್ಮವ ಸಹಿಸುವರೆ ಲ
ಕ್ಷ್ಮೀಪತಿಗೆ ಸಮರಾದ ದಿವಿಜರ
ನೀಪಯೋಜ ಭವಾಂಡದೊಳಗಾವಲ್ಲಿ ನಾಕಾಣೆ
ಗೋಪ ಗುರುವಿಸ ಮಡದಿ ಭೃಗು ನಗ
ಚಾಪ ಮೊದಲಾದವರು ಮಾಡ್ದ ಮ
ಹಾಪರಾಧಗಳೆಣಿಸಿದನೆ ಕರುಣಾಸಮುದ್ರಹರಿ || ೨೨ ||

ಕಾಮಧೇನು ಸುಕಲ್ಪತರುಚಿಂ
ತಾಮಣಿಗಳಮರೇಂದ್ರ ಲೋಕದಿ
ಕಾಮಿತಾರ್ಥಗಳೀವುವಲ್ಲದೆ ಸೇನೆವಾಳ್ಪರಿಗೆ
ಶ್ರೀ ಮುಕುಂದನ ಪರಮ ಮಂಗಳ
ನಾಮ ನರಕಸ್ಥರನು ಸಲಹಿತು
ಪಾಮರರಪಂಡಿತರೆನಿಸಿ ಪುರುಷಾರ್ಥ ಕೊಡುತಿಹುದು || ೨೩||

ಮನದೊಳಗೆ ಸುಂದರ ಪದಾರ್ಥವ
ನೆನೆದು ಕೊಡೆ ಕೈ ಕೊಂಡು ಬಲು ನೂ
ತನ ಸುಶೋಭಿತ ಗಂಧ ಸುರಸೋಪೇತ ಫಲರಾಶಿ
ದ್ಯುನದಿನಿವಹಗಳಂತೆ ಕೊಟ್ಟವ
ರನು ಸದಾ ಸಂತೈಸುವನು ಸ
ದ್ಗುಣವ ಕದ್ದವರಘವ ಕದಿವನು ಅನಘನೆಂದೆನಿಸಿ || ೨೪ ||

ಚೇತನಾಚೇತನ ವಿಲಕ್ಷಣ
ನೂತನ ಪದಾರ್ಥಗಳೊಳಗೆ ಬಲು
ನೂತನತಿಸುಂದರಕೆ ಸುಂದರ ರಸಕೆ ರಸರೂಪ
ಜಾತರೂಪೋದರ ಭವಾದ್ಯರೊ
ಳಾತತಪ್ರತಿಮ ಪ್ರಭಾವ ಧ
ರಾತಳದೊಳಿವ್ಮೊಡನೆಯಾಡುತಲಿಪ್ಪ ನಮ್ಮಪ್ಪ || ೨೫ ||

ತಂದೆತಾಯ್ಗಳು ತಮ್ಮ ಶಿಶುವಿಗೆ
ಬಂದ ಭಯಗಳ ಪರಿಹರಿಸಿ ನಿಜ
ಮಂದಿರದಿ ಬೇಡಿದುದನಿತ್ತಾದರಿಸುವಂದದಲಿ
ಹಿಂದೆಮುಂದೆಡಬಲದಿ ಒಳ ಹೊರ
ಗಿಂದಿರೇಶನು ತನ್ನವರನೆಂ
ದೆಂದು ಸಲಹುವನಾಗಸದವೋಲೆತ್ತ ನೋಡಿದರು ॥ ೨೬ ॥

ಒಡಲನೆಳಲಂದದಲಿ ಹರಿನ
ಮ್ಮೊಡನೆ ತಿರುಗುವ ಒಂದರಕ್ಷಣ
ಬಿಡದೆ ಬೆಂಬಲನಾಗಿ ಭಕ್ತಾಧೀನನೆಂದೆನಿಸಿ
ತಡೆವ ದುರಿತೌಘಗಳ ಕಾವುದ
ಕೊಡುವ ಸಕಲೇಷ್ಟಗಳ ಸಂತತ
ನಡೆವ ನಮ್ಮಂದದಲಿ ನವಸುವಿಶೇಷ ಸನ್ಮಹಿಮ ॥ ೨೭ ॥

ಕಣ್ಣಿಗೆವೆಯಂದದಲಿ ಕೈಮ್ಮೈ
ತಿಣ್ಣೆಗೊದಗುವ ತೆರದಿ ಪಲ್ಗಳು
ಪಣ್ಣುಫಲಗಳನಗಿದು ಜಿಹ್ವೆಗೆ ರಸವನೀವಂತೆ
ಪುಣ್ಯಫಲವೀವಂದದಲಿ ನುಡಿ
ವೆಣ್ಣಿನಾಣ್ಮಂಡದೊಳು ಲಕ್ಷ್ಮಣ
ನಣ್ಣನೊದಗುವ ಭಕತರವಸರಕನುರಗಣ ಸಹಿತ ॥ ೨೮ ॥

ಕೊಟ್ಟದನು ಕೈಕೊಂಬರಕ್ಷಣ
ಬಿಟ್ಟಗಲ ತನ್ನವರ ದುರಿತಗ
ಳಟ್ಟುವನು ದೂರದಲಿ ದುರಿತಾರಣ್ಯಪಾವಕನು
ಬೆಟ್ಟಬೆನ್ನಲಿ ಪೊರಿಸಿದವರೊಳು
ಸಿಟ್ಟುಮಾಡಿದನೇನು ಹರಿಕಂ
ಗೆಟ್ಟ ಸುರರಿಗೆ ಸುಧೆಯನುಣಿಸಿದ ವ :ರಿದನಹಿತರನು ॥ ೨೯ ॥

ಖೇದವೋದ ಜಯಾಪಜಯ ವೊದ
ಲಾದ ದೋಷಗಳಿಲ್ಲ ಚಿನ್ಮಯ
ನಾದರದಿ ತನ್ನಂಘ್ರಿಕಮಲವ ನಂಬಿ ತುತಿಸುವರ
ಕಾದುಕೊಂಡಿಹ ಪರಮ ಕರುಣ ಮ
ಹೋದಧಿಯು ತನ್ನವರು ಮಾಡ್ವಪ
ರಾಧಗಳ ನೋಡದಲೆ ಸಲಹುವ ಸರ್ವಕಾಮದನು || ೩೦ ||

ಮೀನಕೂರ್ಮವರಾಹನರ ಪಂ
ಚಾನನಾತುಳ ಶೌರ್ಯ ವಾಮನ
ರೇಣುಕಾತ್ಮಜ ರಾವಣಾದಿ ನಿಶಾಚರಧ್ವಂಸಿ
ಧೇನುಕಾಸುರಮಥನ ತ್ರಿಪುರವ
ಹಾನಿಗೈಸಿದ ನಿಪುಣ ಕಲಿಮುಖ
ದಾನವರ ಸಂಹರಿಸಿ ಧರ್ಮದಿ ಕಾಯ್ದ ಸುಜನರನು || ೩೧ ||

ಪುರುಷರೂಪತ್ರಯ ಪುರಾತನ
ಪುರುಷ ಪುರುಷೋತ್ತಮ ಕ್ಷರಾಕ್ಷರ
ಪುರುಷ ಪೂಜಿತಪಾದ ಪೂರ್ಣಾನಂದ ಜ್ಞಾನಮಯ
ಪುರುಷಸೂಕ್ತ ಸುಮೇಯ ತತ್ತ
ತ್ಪುರುಷ ಹೃತ್ಪುಷ್ಕರ ನಿಲಯಮಹ
ಪುರುಷಜಾಂಡಾಂತರದಿ ಬಹಿರದಿ ವ್ಯಾಪ್ತನಿರ್ಲಿಪ್ತ || ೩೨ ||

ಸ್ತ್ರೀ ನಪುಂಸಕ ಪುರುಷ ಭೂಸಲಿ
ಲಾನಲಾನಿಲ ಗಗನಮನಶಶಿ
ಭಾನು ಕಾಲಗುಣ ಪ್ರಕೃತಿಯೊಳಗೊಂದು ತಾನಲ್ಲ
ಏನು ಇವನ ಮಹಾಮಹಿಮೆ ಕಡೆ
ಗಾಣರಜಭವ ಶಕ್ರಮುಖರು ನಿ
ದಾನಿಸಲು ಮಾನವರಿಗಳವಡುವದೆ ವಿಚಾರಿಸಲು || ೩೩ ||

ಗಂಧರಸರೂಪ ಸ್ಪರುಶ ಶ
ಬ್ದೊಂದು ತಾನಲ್ಲದರದರ ಪೆಸ
ರಿಂದೆ ಕರೆಸುತ ಜೀವರಿಗೆ ತರ್ಪಕನು ತಾನಾಗಿ
ಪೊಂದಿಕೊಂಡಿಹ ಪರಮಕರುಣಾ
ಸಿಂಧು ಶಾಶ್ವತ ಮನವೆ ಮೊದಲಾ
ದಿಂದ್ರಿಯಗಳೊಳಗಿದ್ದು ಭೋಗಿಸುತಿಹನು ವಿಷಯಗಳ || ೩೪ ||

ಶ್ರವಣನಯನಘ್ರಾಣ ತ್ವಗ್ರಸ
ನಿವುಗಳಲಿ ವಾಕ್ಪಾಣಿ ಪಾದಾ
ದ್ಯವಯವಗಳಲಿ ತದ್ಗುಣಗಳಲಿ ತತ್ಪತಿಗಳೊಳಗೆ
ಪ್ರವಿತತನು ತಾನಾಗಿ ಕೃತಿಪತಿ
ವಿವಿಧ ಕರ್ಮವ ಮಾಡಿ ಮಾಡಿಸಿ
ಭವಕೆ ಕಾರಣನಾಗಿ ತಿರುಗಿಸುತಿಹನು ತಿಳಿಸದಲೆ || ೩೫ ||

ಗುಣಿಗಳೊಳಗಿದ್ದು ಗುಣಿಗುಣ
ನೆನಿಸುವನು ಗುಣಬದ್ಧನಾಗದೆ
ಗುಣಜ ಪುಣ್ಯಾಪುಣ್ಯಫಲ ಬ್ರಹ್ಮಾದಿ ಚೇತನಕೆ
ಉಣಿಸುತವರೊಳಗಿದ್ದು ವೃಜನಾ
ರ್ದನ ಚಿದಾನಂದೈಕ ದೇಹನು
ಕೊನೆಗೆ ಸಚರಾಚರ ಜಗದ್ಭುಕುವೆನಿಪ ನವ್ಯಯನು || ೩೬ ||

ವಿದ್ಯತಾನೆಂದೆನಿಸಿಕೊಂಬನಿ
ರುದ್ಧದೇವನು ಸರ್ವಜೀವರ
ಬುದ್ಧಿಯೊಳು ನೆಲೆಸಿದ್ದು ಕೃತಿಪತಿಬುದ್ಧಿಯೆನಿಸುವನು
ಸಿದ್ಧಿಯೆನಿಸುವ ಸಂಕರುಷಣ ಪ್ರ
ಸಿದ್ಧನಾಮಕ ವಾಸುದೇವನ
ವದ್ಯರೂಪ ಚತುಷ್ಟಯಗಳರಿತವನೆ ಕೋವಿದನು || ೩೭ ||

ತನು ಚತುಷ್ಟಯುಗಳೊಳು ನಾರಾ
ಯಣನು ಹೃತ್ಕಮಲಾಖ್ಯಸಿಂಹಾ
ಸನದೊಳನಿರುದ್ಧಾದಿ ರೂಪಗಳಿಂದ ಶೋಭಿಸುತ
ತನಗೆ ತಾನೇ ಸೇವ್ಯ ಸೇವಕ
ನೆನಿಸಿ ಸೇವಾಸಕ್ತಸುರರೊಳ
ಗನವರತ ನೆಲೆಸಿದ್ದು ಸೇವೆಯಕೊಂಬನವರಂತೆ ॥ ೩೮ ॥

ಜಾಗರ ಸ್ವಪ್ನಂಗಳೊಳುವರ
ಭೋಗಿಶಯನ ಬಹುಪ್ರಕಾರ ವಿ
ಭಾಗಗೈಸಿ ನಿರಂಶಜೀವರ ಚಿಚ್ಛರೀರವನು
ಭೋಗವಿತ್ತು ಸುಷುಪ್ತಿಕಾಲದಿ
ಸಾಗರವ ನದಿ ಕೂಡುವಂತೆ ವಿ
ಯೋಗರಹಿತನು ಅಂಶಗಳನೇಕತ್ರಯೈದಿಸುವ ॥ ೩೯ ॥

ಜನಕ ತನ್ನಾತ್ಮಜಗೆ ವರ ಭೂ
ಷಣದುಕೂಲವ ತೊಡಿಸಿ ತಾ ವಂ
ದನೆಯ ಕೈಕೊಳುತವನ ಹರಸುತ ಹರುಷಬಡುವಂತೆ
ವನರುಹೇಕ್ಷಣ ಪೂಜ್ಯ ಪೂಜಕ
ನೆನಿಸಿ ಪೂಜಾಸಾಧನ ಪದಾ
ರ್ಥನು ತನಗೆ ತಾನಾಗಿ ಫಲಗಳನೀವ ಭಜಕರಿಗೆ ॥ ೪೦ ॥

ತಂದೆ ಬಹು ಸಂಭ್ರಮದಿತನ್ನಯ
ಬಂಧು ಬಳಗವನೆರಹಿ ಮದುವೆಯ
ನಂದನಗೆ ತಾವಮಾಡಿ ಮನೆಯೊಳಗಿಡುವ ತೆರನಂತೆ
ಇಂದಿರಾಧವ ತನ್ನ ಇಚ್ಛೆಗ
ಳಿಂದ ಗುಣಗಳ ಚೇತನಕೆಸಂ
ಬಂಧ ಗೈಸಿ ಸುಖಾ ಸುಖಾತ್ಮಕ ಸಂಸೃತಿಯೊಳಿಡುವ ॥ ೪೧ ॥

ತೃಣ ಕೃತಾಲಯು ದೊಳಗೆ ಪೊಗೆಸಂ
ದಣಿಸಿ ಪ್ರತಿಛಿದ್ರದಲಿ ಪೊರಮ
ಟ್ಟನಲ ನಿರವನು ತೋರಿ ತೋರದಲಿಪ್ಪ ತೆರನಂತೆ
ವನಜ ಜಾಂಡದೊಳಖಿಳ ಜೀವರ
ತನುವಿನೊಳ ಹೊರಗಿದ್ದು ಕಾಣಿಸ
ದನಿಮಿಷೇಶನು ಸಕಲ ಕರ್ಮವ ಮಾಳ್ಪನವರಂತೆ || ೪೨ ||

ಪಾದಪಗಳಡಿಗೆರೆಯೆಸಲಿಲವು
ತೋದು ಕೊಂಬೆಗಳುಬ್ಬಿ ಪುಷ್ಪ
ಸ್ವಾದು ಫಲವೀವಂದದಲಿ ಸರ್ವೇಶ್ವರನು ಜನರಾ
ರಾಧನೆಯ ಕೈ ಕೊಂಡು ಬ್ರಹ್ಮ ಭ
ವಾದಿಗಳ ನಾಮದಲಿ ಫಲ ವಿ
ತ್ತಾದರಿಸುವನು ತನ್ನ ಮಹಿಮೆಯ ತೋರಗೊಡ ಜಗಕೆ || ೪೩ ||

ಮನವಿಷಯದೊಳಗಿರಿಸಿ ವಿಷಯುವ
ಮನದೊಳಗೆ ನೆಲೆ ಗೊಳಿಸಿ ಬಲು ನೂ
ತನವು ಸುಸಮೀಚೀನ ವಿದುಪಾದೇಯುವೆಂದೆನಿಸಿ
ಕನಸಿಲಾದರು ತನ್ನ ಪಾದದ
ನೆನೆವ ನೀಯದೆ ಸರ್ವರೊಳಗಿ
ದ್ದನುಭವಿಸುವನು ಸ್ಥೂಲವಿಷಯುವ ವಿಶ್ವನೆಂದೆನಿಸಿ || ೪೪ ||

ದೇವಮಾನವದಾನವರು ಎಂ
ದೀಪಿಧದಲಾವಾಗಲಿಪ್ಪರು
ಮೂವರೊಳಗಿವಗಿಲ್ಲ ಸ್ನೇಹೋದಾ ಸೀನದ್ವೇಷ
ಜೀವರಧಿಕಾರಾನು ಸಾರದ
ಲೀವ ಸುಖ ಸಂಸಾರ ದುಃಖವ
ಥಾವುಣದಲವರವರಿಗುಣಿಸುವ ನಿರ್ಗತಾಶನನು || ೪೫ ||

ಎಲ್ಲಿ ಕೇಳಿದರಲ್ಲಿ ನೋಡಿದ
ರಲ್ಲಿ ಬೇಡಿದರಲ್ಲಿ ನೀಡಿದ
ರಲ್ಲಿ ಓಡಿದರಲ್ಲಿ ಆಡಿದರಲ್ಲಿ ನೆಲೆಸಿಹನು
ಬಲ್ಲಿದರಿಗತಿ ಬಲ್ಲಿದನು ಸರಿ
ಯಿಲ್ಲ ಇವಗಾವಲ್ಲಿ ನೋಡಲು
ಖುಲ್ಲಮಾನವನಲ್ಲ ನಪ್ರತಿಮಲ್ಲ ಜಗಕೆಲ್ಲ || ೪೬ ||

ತಪ್ತ ಲೋಹವು ನೋಳ್ಪಜನರಿಗೆ
ಸಪ್ತಜಿಹ್ವನ ತೆರದಿ ತೋರ್ಪದು
ಲುಪ್ತಖಾಪಕ ಲೋಹಕಾಂಬುದು ಪೂರ್ವದೋಷಾದಿ
ಸಪ್ತವಾಹನ ನಿಖಿಲಜನರೊಳು
ವ್ಯಾಪ್ತನಾದುದರಿಂದ ಸರ್ವರು
ಆಪ್ತರಾಗಿಹರೆಲ್ಲ ಕಾಲದಿ ಹಿತವ ಕೈಕೊಂಡು || ೪೭ ||

ವಾರಿದನು ಮಳೆಗರೆಯೆ ಬೆಳೆದಿಹ
ಭೂರುಹಂಗಳ ಚಿತ್ರಫಲರಸ
ಬೇರೆ ಬೇರಿಪ್ಪಂತೆ ಬಹುವಿಧ ಜೀವರೊಳಗಿದ್ದು
ಮಾರರಮಣನವರವರ ಯೋಗ್ಯತೆ
ವಿಚಾರದಲೆಗುಣ ಕರ್ಮಗಳನನು
ಸಾರನಡೆಸುವ ದೇವನಿಗೆ ವೈಷಮ್ಯ ವೆಲ್ಲಿಹದು || ೪೮ ||

ವಾರಿಜಾಪ್ತನ ಕಿರಣಮಣಿಗಳ
ಸೇರಿತತ್ತದ್ವರ್ಣಗಳನು ವಿ
ಕಾರ ಗೈಸದೆ ನೋಳ್ಪರಿಗೆ ಥಳಥಳಿಸುವಂದದಲಿ
ಮಾರರಮಣ ಲೋಕತ್ರಯ ದೊಳಿಹ
ಮೂರು ವಿಧ ಜೀವರೊಳಗಿದ್ದು ವಿ
ಹಾರ ಮಾಡುವನವರ ಯೋಗ್ಯತೆ ಕರ್ಮವನುಸರಿಸಿ || ೪೯ ||

ಕಾದ ಕಬ್ಬಿಣ ಹಿಡಿದು ಬಡಿಯಲು
ವೇದನವು ಲೋಹಗಳಿಗಲ್ಲದೆ
ಆದುದೇನ್ನೈಅನಲಗಾವ್ಯಥೆಯೇನ ಮಾಡಿದರು
ಆದಿ ದೇವನು ಸರ್ವ ಜೀವರ
ಕಾದು ಕೊಂಡಿಹನೊಳ ಹೊರಗೆದು
ಕ್ಷಾದಿಗಳು ಸಂಬಂಧವಾಗುವವೇನು ಚಿನ್ಮಯುಗೆ || ೫೦ ||

ಮಳಲ ಮನೆಗಳ ಮಾಡಿ ಮಕ್ಕಳು
ಕೆಲವು ಕಾಲದಲಾಡಿ ಮೋದದಿ
ತುಳಿದು ಕೆಡಿಸುವ ತೆರದಿಲಕುವಿಾರಮಣ ಲೋಕಗಳ
ಹಲವುಬಗೆಯಲಿ ನಿರ್ಮಿಸುವ ನಿ
ಶ್ಚಲನು ತಾನಾಗಿದ್ದು ಸಲಹುವ
ನೆಲರುಣಿಯವೋಲ್ ನುಂಗುವಗೆ ಎಲ್ಲಿಯದು ಸುಖ ದುಃಖ || ೫೧ ||

ಅಥಮ ಮಾನವನೋರ್ವ ಮಂತ್ರೌ
ಷಧಗಳನು ತಾನರಿತು ಪಾವಕ
ಉದಕಗಳ ಸಂಬಂಧ ವಿಲ್ಲದಲಿಪ್ಪನದರೊಳಗೆ
ಪದುಮ ಜಾಂಡೋದರನು ಸರ್ವರ
ಹೃದಯದೊಳಗಿರೆ ಕಾಲ ಗುಣಕ
ರ್ಮದ ಕಲುಷ ಸಂಬಂಥ ವಾಗುವದೇ ನಿರಂಜನಗೆ || ೫೨ ||

ಬಿಂಬರೂಪನು ಈ ತೆರದಿ ಜಡ
ಪೊಂಬ ಸುರ ಮೊದಲಾದ ಸುರರೊಳು
ಇಂಬು ಗೊಂಡಿಹ ನೆಂದರಿತು ಧರ್ಮಾರ್ಥ ಕಾಮಗಳ
ಹಂಬಲಿಸದನುದಿನದಿ ವಿಶ್ವಕು
ಟುಂಬಿ ಕೊಟ್ಟ ಕಣಾನ್ನ ಕುತ್ಸಿತ
ಕಂಬಳಿಯೆ ಸೌಭಾಗ್ಯವೆಂದವನಂಘ್ರಿಗಳಭಜಿಸು || ೫೩ ||

ಅಷ್ಟದಳ ಸದ್ಹೃದಯಕಮಲಾ
ಧಿಷ್ಟಿತನು ತಾನಾಗಿ ಸರ್ವೋ
ತ್ಕೃಷ್ಟಮಹಿಮನು ದಳಗಳಲಿಸಂಚರಿಸುತೊಳಗಿದ್ದು
ದುಷ್ಟರಿಗೆ ದುರ್ಬುದ್ಧಿ ಕರ್ಮ ವಿ
ಶಿಷ್ಟರಿಗೆ ಸುಜ್ಞಾನಧರ್ಮ ಸು
ಪುಷ್ಟಿಗೈಸುತ ಸಂತವಿಪ ನಿರ್ದುಷ್ಟ ಸುಖಪೂರ್ಣ || ೫೪ ||

ಸುರಪನಾಲಯ ವೈದಿದರೆ ಮನ
ವೆರಗುವುದು ಸತ್ಪುಣ್ಯಮಾರ್ಗದಿ
ಬರಲುವಹ್ನಿಯಮನೆಗೆ ನಿದ್ರಾಲಸ್ಯಹಸಿ ತೃಷೆಯು
ತರಣಿ ತನಯನಿಕೇತನದಿ ಸಂ
ಭರಿತ ಕೋಪಾ ಟೋಪ ತೋರುವು
ದರವಿದೂರನು ನಿಋತಿಯಲಿರೆ ಪಾಪಗಳ ಮಾಳ್ಪ || ೫೫ ||

ವರುಣನಲ್ಲಿ ವಿನೋದ ಹಾಸ್ಯವು
ಮರುತನೊಳು ಗಮನಾಗಮನಹಿಮ
ಕರಧನಾಧಿಪರಲ್ಲಿ ಧರ್ಮದಬುದ್ಧಿ ಜನಿಸುವದು
ಹರನ ಮಂದಿರದಲ್ಲಿ ಗೋಧನ
ಧರಣಿ ಕನ್ಯಾದಾನಗಳ ಒಂ
ದರಗಳಿಗೆ ತಡೆಯದೆಲೆಕೊಡುತಿಹ ಚಿತ್ತಪುಟ್ಟುವದು || ೫೬ ||

ಹೃದಯದೊಳಗೆ ವಿರಕ್ತಿ ಕೇಸರ
ಕೊದಗೆ ಸ್ವಪ್ನ ಸುಷುಪ್ತಿಲಿಂಗದಿ
ಮಧುಹಕರ್ಣಿಕೆಯಲ್ಲಿ ಬರೆಜಾಗ್ರತೆಯು ಪುಟ್ಟುವದು
ಸುದರುಶನ ಮುಂತಾದ ಅಷ್ಟಾ
ಯುಧವ ಪಿಡಿದಾಶಾಧಿ ಪತಿಗಳ
ಸದನದಲಿ ಸಂಚರಿಸುತೀಪರಿ ಬುದ್ಧಿಗಳ ಕೊಡುವ || ೫೭ ||

ಸೂತ್ರನಾಮಕ ಪ್ರಾಣಪತಿಗಾ
ಯಿತ್ರಿ ಸಂಪ್ರತಿಪಾದ್ಯನಾಗೀ
ಗಾತ್ರದೊಳುನೆಲೆಸಿರಲು ತಿಳಿಯದೆ ಕಂಡಕಂಡಲ್ಲಿ
ಧಾತ್ರಿಯೊಳು ಸಂಚರಿಸಿ ಪುತ್ರಕ
ಳತ್ರ ಸಹಿತನುದಿನದಿ ತೀರ್ಥ
ಕ್ಷೇತ್ರಯಾತ್ರೆಯ ಮಾಡಿದೆವು ಎಂದೆನುತ ಹಿಗ್ಗುವರು ॥ ೫೮ ॥

ಈ ಶರೀರವೆ ರಥಪತಾಕಸು
ವಾಸಗಳೆ ಪುಂಡ್ರಗಳು ಧ್ವಜಸಿಂ
ಹಾಸನವೆ ಚಿತ್ತವು ಸುಬುದ್ಧಿಯೆ ಕಲಶ ಸನ್ಮನವು
ಪಾಶಗುಣದಂಡತ್ರಯಂಗಳು ಶು
ಭಾಶುಭದ್ವಯ ಕರ್ಮಚಕ್ರ ಮ
ಹಾಸಮರ್ಥಾಶ್ವಗಳು ದಶಕರಣಂಗಳೆನಿಸುವವು ॥ ೫೯ ॥

ಮಾತರಿಶ್ವನು ದೇಹಂಥದೊಳು
ಸೂತನಾಗಿಹ ಸರ್ವಕಾಲದಿ
ಶ್ರೀತರುಣಿವಲ್ಲಭ ರಥಿಕನೆಂದರಿತು ನಿತ್ಯದಲಿ
ಪ್ರೀತಿಯಿಂದಲಿ ಪೋಷಿಸುವ ವಾ
ತಾತಪಾದಿಗಳಿಂದಲನಿರತ
ನೀತನುವಿನೊಳು ಮಮತೆ ಬಿಟ್ಟಿಹನವನೆ ಮಹಯೋಗಿ ॥ ೬೦ ॥

ಭವವೆನಿಪ ವನಧಿಯೊಳು ಕರ್ಮ
ಪ್ರವಹದೊಳು ಸಂಚರಿಸುತಿಹ ದೇ
ಹವ ಸುನಾವೆಯ ಮಾಡಿ ತನ್ನವರಿಂದಲೊಡಗೂಡಿ
ದಿವಸ ದಿವಸಗಳಲ್ಲಿ ಲಕುಮೀ
ಧವನು ಕ್ರೀಡಿಪನೆಂದು ಚಿಂತಿಸೆ
ಪವನನಯ್ಯ ಭವಾಬ್ಧಿ ದಾಟಿಸಿ ಪರಮಸುಖವೀವ ॥ ೬೧ ॥

ವಾರಿಜಭವಾಂಡವೆ ಸುಮಂಟಪ
ಮೇರುಗಿರಿಸಿಂಹಾಸನವು ಭಾ
ಗೀರಥಿಯೆ ಮಜ್ಜನವು ದಿಗ್ವಸ್ತ್ರಗಳು ನುಡಿಮಂತ್ರ
ಭೂರುಹಜ ಫಲಪುಷ್ಪಗಂಧ ಸ
ಮೀರಶಶಿರವಿದೀಪಭೂಷಣ
ತಾರಕೆಗಳೆಂದರ್ಪಿಸಲು ಕೈಕೊಂಡು ಮನ್ನಿಸುವ || ೬೨ ||

ಕನ್ನಡಿಯ ಕೈವಿಡಿದು ನೋಡಲು
ತನ್ನಿರವು ಸವ್ಯಾಪಸವ್ಯದಿ
ಕಣ್ಣಿಗೊಪ್ಪುವ ತೆರದಲನಿರುದ್ಧನಿಗೆ ಈ ಜಗವು
ಭಿನ್ನಭಿನ್ನವೆ ತೋರುತಿಪ್ಪುದು
ಜನ್ಯವಾದುದರಿಂದ ಪ್ರತಿಬಿಂ
ಬನ್ನಮಯಗಾನೆಂದರಿತು ಪೂಜಿಸಲು ಕೈಗೊಂಬ || ೬೩ ||

ಬಿಂಬರೆನಿಪರು ಸ್ತೋತ್ರಮರು ಪ್ರತಿ
ಬಿಂಬರೆನಿಪರು ಸ್ವಾವರರು ಪ್ರತಿ
ಬಿಂಬಬಿಂಬಗಳೊಳಗೆ ಕೇವಲ ಬಿಂಬ ಹರಿಯೆಂದು
ಸಂಭ್ರಮದಿ ಪಾಡುತಲಿ ನೋಡುತ
ಲುಂಬುಡುವ ದಿಡುವದು ಕೊಡುವದೆ
ಲ್ಲಂಬುಜಾಂಬಕನಂಘ್ರಿಪೂಜೆಗಳೆಂದು ನಲಿದಾಡು || ೬೪ ||

ನದಿಯ ಜಲನದಿಗೆರೆವತೆರೆದಂ
ದದಲಿ ಭಗವದ್ದತ್ತ ಧರ್ಮಗ
ಳುದಧಿ ಶಯನನಿಗರ್ಪಿಸುತವ್ಯಾವರ್ತಸೀನಾಗಿ
ವಿಧಿನಿಷೇಧಾದಿಗಳಿಗೊಳಗಾ
ಗದಲೆ ಮಾಡುತದರ್ವಿಯಂದದಿ
ಪದುಮನಾಭನ ಸಕಲ ಕರ್ಮಗಳಲ್ಲಿ ನೆನೆವುತಿರು || ೬೫ ||

ಅರಿಯದಿದ್ದರು ಎಮ್ಮೊಳಿದ್ದನ
ವರತ ವಿಷಯಗಳುಂಬ ಜ್ಞಾನೋ
ತ್ತರದಿ ತನಗರ್ಪಿಸಲು ಚಿತ್ಸುಖವಿತ್ತು ಸಂತೈಪ
ಸರಿತು ಕಾಲಪ್ರವಹಗಳು ಕಂ
ಡರೆಯು ಸರಿಕಾಣದಿರೆ ಪರಿವವು
ಮರಳಿ ಮಜ್ಜನಪಾನ ಕರ್ಮಗಳಿಂದೆ ಸುಖವಿಹವು ॥ ೬೬ ॥

ಏನುಮಾಡುವ ಕರ್ಮಗಳಲಕು
ಮೀನಿವಾಸನಿಗರ್ಪಿಸನು ಸಂ
ಧಾನಪೂರ್ವಕದಿಂದ ಸಂದೇಹಿಸದೆ ದಿನದಿನದಿ
ಮಾನನಿಧಿ ಕೈ ಕೊಂಡು ಸುಖ ವಿ
ತ್ತಾನತರ ಸಂತೈಪ ತೃಣಜಲ
ಧೇನು ತಾನುಂಡನವರತಪಾಲ್ಗರೆವ ತೆರನಂತೆ ॥ ೬೭ ॥

ಕಲುಷವಿಲ್ಲದ ದರ್ಪಣದಿ ಪ್ರತಿ
ಫಲಿಸಿ ಸರ್ವಪದಾರ್ಥಗಳು ಕಂ
ಗೊಳಿಸು ವಂದದಿ ಬಿಂಬ ಜಡ ಚೇತನಗಳೊಳಗಿದ್ದು
ಪೊಳೆವ ಬಹುರೂಪದಲಿ ಸಜ್ಜನ
ರೊಳಗೆ ಮನದರ್ಪಣದಿ ತಾನಿ
ಶ್ಚಲನಿರಾಮಯ ನಿರ್ವಿಕಾರ ನಿರಾಶ್ರಯಾ ನಂತ ॥ ೬೮ ॥

ಆವದೇಹವ ಕೊಡಲಿ ಹರಿಮ
ತ್ತಾವ ಲೋಕದಲಿಡಲಿ ತಾಮ
ತ್ತಾವ ದೇಶದೊಳಿರಲಿ ಆವಾವಸ್ಥೆಗಳು ಬರಲಿ
ಈ ವಿಧದಿ ಜಡಚೇತನದೊಳು
ಪರಾವರೇಶನ ರೂಪಗುಣಗಳ
ಭಾವಿಸುತ ಸುಜ್ಞಾನ ಭಕುತಿಯ ಬೇಡು ಕೊಂಡಾಡು ॥ ೬೯ ॥

ಒಂದು ರೂಪದೊಳೊಂದವಯವದೊ
ಳೊಂದು ರೋಮದೊಳೊಂದು ದೇಶದಿ
ಪೊಂದಿ ಇಪ್ಪವ ಜಾಂಡ ನಂತಾನಂತ ಕೋಟಿಗಳು
ಹಿಂದೆ ಮಾರ್ಕಾಂಡೇಯಕಾಣನೆ
ಒಂದೆರೂಪದಿ ಸೃಷ್ಟಿ ಪ್ರಳಯಗ
ಳಿಂದಿರೇಶನೊಳೇನಿದಚ್ಚರಿಯ ಪ್ರಮೇಯ ಸದಾ ॥ ೨೦ ॥

ಒಂದನಂತಾನಂತ ರೂಪಗ
ಳೊಂದು ರೂಪದಲಿಹವು ಲೋಕಗ
ಳೊಂದೆರೂಪದಿ ಸೃಷ್ಟಿಸ್ಥಿತಿ ಮೊದಲಾದ ವ್ಯಾಪಾರ
ಒಂದೆ ಕಾಲದಿ ಮಾಡಿ ತಿಳಿಸದೆ
ಸಂದಣಿಸಿಕೊಂಡಿಪ್ಪ ಜಗದೊಳು
ನಂದನಂದನ ರಣದೊಳಿಂದ್ರಾತ್ಮಜಗೆ ತೋರಿಸನೆ ॥ ೨೧ ॥

ಶ್ರೀರಮೇಶನ ಮೂರ್ತಿಗಳು ನವ
ನಾರಿಕುಂಜರದಂತೆ ಏಕಾ
ಕಾರ ತೋರ್ಪುವು ಅವಯವಾಹ್ವಯವವಯವಗಳಲ್ಲಿ
ಬೇರೆಬೇರೆಯೆ ಕಂಗೊಳಿಸುವ ಶ
ರೀರದೊಳು ನಾನಾಪ್ರಕಾರ ವಿ
ಕಾರಶೂನ್ಯವಿರಾಟನೆನಿಸುವ ಪದುಮಜಾಂಡದೊಳು ॥ ೨೨ ॥

ಪ್ರಳಯಜಲಧಿಯೊಳುಳ್ಳ ನಾವೆಯು
ಹೊಲಬುಗಾಣದೆ ಸುತ್ತುವಂದದಿ
ಜಲರುಹೇಕ್ಷಣನಮಲಗುಣರೂಪಗಳ ಚಿಂತಿಸುತ
ನೆಲೆಯುಗಾಣದೆ ಮಹಲಕುಮಿ ಚಂ
ಚಲವನೈದಿಹಳಲ್ಪಜೀವರಿ
ಗಳವಡುವ ದೇನಿವನಮಹಿಮೆಗಳೀ ಜಗತ್ರಯದಿ ॥ ೨೩ ॥

ಹರಿಯೆ ಪಂಚಾಶದ್ವರಣ ಸು
ಸ್ವರಲುದಾತ್ತನುದಾತ್ತಪ್ರಚಯು
ಸ್ವರಿತ ಸಂಧಿವಿಸರ್ಗ ಬಿಂದುಗಳೊಳಗೆ ತದ್ವಾಚ್ಯ
ಇರುವ ತತ್ತನ್ನಾಮರೂಪಗ
ಳರಿತುಪಾಸನೆಗೈವರಿಳೆಯೊಳು
ಸುರರೆಸರಿನರರಲ್ಲವವರಾಡುವದೆ ವೇದಾರ್ಥ ॥ ೭೪ ॥

ಈಶನಲಿ ವಿಜ್ಞಾನ ಭಗವ
ದ್ದಾಸರಲಿ ಸದ್ಭಕ್ತಿ ವಿಷಯ ನಿ
ರಾಶೆ ಮಿಥ್ಯಾವಾದದಲಿ ಪ್ರದ್ವೇಷದಿನದಿನದಿ
ಈ ಸಮಸ್ತಪ್ರಾಣಿಗಳೊಳು ರ
ಮೇಶನಿಹನೆಂದರಿತು ಅವರಭಿ
ಲಾಷೆಗಳ ಪೂರೈಸುವದು ಮಹಯಜ್ಞಹರಿಪೂಜೆ ॥ ೭೫ ॥

ಅನಲ ಪಕ್ವವಗೈಸಿದನ್ನವ
ನನಲನೊಳು ಹೋಮಿಸುವ ತೆರನಂ
ತನಿಮಿಷೇಶನು ಮಾಡಿಮಾಡಿಸಿದಖಿಲ ಕರ್ಮಗಳ
ಮನವಚನ ಕಾಯದಲಿ ತಿಳಿದನು
ದಿನದಿ ಕೊಡು ಶಂಕಿಸದೆ ವೃಜಿನಾ
ರ್ದನ ಸದಾಕೈಕೊಂಡು ಸಂತೈಸುವನು ತನ್ನವರ ॥ ೭೬ ॥

ಕುದುರೆಬಾಲದ ಕೊನೆಯ ಕೂದಲು
ತುದಿವಿಭಾಗವ ಮಾಡೆ ಶತವಿಧ
ವದರೊಳೊಂದೆನು ನೂರುಭಾಗವ ಮಾಡಲೆಂತಿಹುದೊ
ವಿಧಿಭವಾದಿ ಸಮಸ್ತದಿವಿಜರ
ಮೊದಲು ಮಾಡಿ ತೃಣಾಂತ ಜೀವರೊ
ಳಧಿಕ ನ್ಯೂನತೆಯಿಲ್ಲವೆಂದಿಗು ಜೀವ ಪರಮಾಣು ॥ ೭೭ ॥

ಜೀವನಿಗೆ ತುಷದಂತೆ ಲಿಂಗವು
ಸಾವಕಾಶದಿ ಪೊಂದಿಸುತ್ತಲು
ಪ್ರಾವರಣರೂಪದಲಿ ಇಪ್ಪದು ಭಗವದಿಚ್ಛೆಯಲಿ
ಕೇವಲ ಜಡಪ್ರಕೃತಿಯಿದಕಥಿ
ಜೀವತೆಯು ಮಹಲಕುಮಿಯೆನಿಪಳು
ಆ ವಿರಜೆಯಸ್ನಾನಪರಿಯಂತರದಿ ಹತ್ತಿಹದು || ೭೮ ||

ಕೀಟಪೇಶಸ್ಕಾರನೆನವಿಲಿ
ಕೀಟಭಾವವ ತೊರೆದು ತದ್ವ
ತ್ಕೀಟರೂಪವನೈದಿ ಆಡುವತೆರದಿ ಭಕುತಿಯ ಲಿ
ಕೈಟಭಾರಿಯ ಧ್ಯಾನದಿಂದ ಭ
ವಾಟವಿಯನತಿ ಶೀಘ್ರದಿಂದಲಿ
ದಾಟಿ ಸಾರೂಪ್ಯವನು ಐದುವರಲ್ಪಜೀವಿಗಳು || ೭೯ ||

ಆವ ಪರಬೊಮ್ಮನಲಿ ವಿಮಲಾಂ
ಗಾವಬದ್ಧರು ಎಂದೆನಿಪರಾ
ಜೀವಭವ ಮೊದಲಾದಮರರನುದಿನದಿ ಹರಿಪದವ
ಸೇವಿಪರಿಗನುಕೂಲರಲ್ಲದೆ
ತಾವು ಇವರನು ಕೆಡಿಸಬಲ್ಲರೆ
ಶ್ರೀವಿಲಾಸಾಸ್ಪದನ ದಾಸರಿಗುಂಟೆ ಅಪಜಯವು || ೮೦ ||

ಶ್ರೀದನಂಘ್ರಿಸರೋಜಯುಗಳೇ
ಕಾದಶಸ್ಥಾನಾತ್ಮದೊಳಗಿ
ಟ್ಟಾದರದಿಸಂತುತಿಸುವವರಿಗೆ ಈ ನವಗ್ರಹವು
ಆದಿತೇಯರು ಸಂತತಾಧಿ
ವ್ಯಾಧಿಗಳ ಪರಿಹರಿಸುತವರನು
ಕಾದು ಕೊಂಡಿಹರೆಲ್ಲರೊಂದಾಗೀಶನಾಜ್ಞೆಯಲಿ || ೮೧ ||

ಮೇದಿನಿಯ ಮೇಲುಳ್ಳಗೋಷ್ಪಾ
ದೋದಕಗಳೆಲ್ಲಮಲ ತೀರ್ಥವು
ಪಾದ ಪಾದ್ರಿಧರಾತಳವೆ ಸುಕ್ಷೇತ್ರ ಜೀವಗಣ
ಶ್ರೀಧರನಪ್ರತಿಮೆಗಳು ಅವರುಂ
ಬೋದನವೆನೈವೇದ್ಯ ನಿತ್ಯದಿ
ಹಾದಿನಡೆವುದೆ ಯಾತ್ರೆಯೆಂದರಿತವನೆ ಮಹಯೋಗಿ || ೮೨ ||

ಸರ್ವದೇಶವು ಪುಣ್ಯದೇಶವು
ಸರ್ವಕಾಲವು ಪರ್ವಕಾಲವು
ಸರ್ವಜೀವರು ದಾನಪಾತ್ರರು ಮೂರುಲೋಕದೊಳು
ಸರ್ವಮಾತಃಗಳೆಲ್ಲ ಮಂತ್ರವು
ಸರ್ವಕೆಲಸಗಳೆಲ್ಲ ಪೂಜೆಯು
ಶರ್ವವಂದ್ಯನ ವಿಮಲಮೂರ್ತಿ ಧ್ಯಾನವುಳ್ಳವಗೆ || ೮೩ ||

ದೇವಖಾತತಟಾಕವಾಪಿಸ
ರೋವರಗಳಭಿಮಾನಿ ಸುರರು ಕ
ಳೇವರದೊಳಿಹ ರೋಮಕೂಪಗಳೊಳಗೆ ತುಂಬಿಹರು
ಆವಿಯದ್ಗಂಗಾದಿನದಿಗಳು
ಭಾವಿಸುವದೆಪ್ಪತ್ತೆರಡೆನಿಪ
ಸಾವಿರಸುನಾಡಿಗಳೊಳಗೆ ಪ್ರವಹಿಸುತಲಿಹವೆಂದು || ೮೪ ||

ಶ್ರೀವರನಿಗಭಿಷೇಕವೆಂದರಿ
ದೀವಸುಂಧರೆಯೊಳಗೆ ಬಲ್ಲವ
ರಾವಜಲದಲಿ ಮಿಂದರೆಯುಸರಿ ಗಂಗಾದಿ ತೀರ್ಥಗಳು
ತಾವೊಲಿದು ಬಂದಲ್ಲೆ ನೆಲೆಗೊಂ
ಡೀವವಖಿಳಾರ್ಥಗಳ ನರಿಯದ
ಜೀವರಮರತರಂಗಿಣಿಯು ನೈದಿದರೆ ಫಲವೇನು || ೮೫ ||

ನದನದಿಗಳಿಳೆಯೊಳಗೆ ಪರಿವವು
ಉದಧಿ ಪರಿಯಂತರದಿ ತರುವಾ
ಯದಲಿ ರಮಿಸುವವಲ್ಲಿ ತನ್ಮಯವಾಗಿ ತೋರದಲೆ
ನಿಧಿ ನಿಷೇಧಗಳಾಚರಿಸುವರು
ಬುಧರು ಭಗವದ್ರೂಪ ಸರ್ವ
ತ್ರದಲಿ ಚಿಂತನೆಬರಲು ತ್ಯಜಿಸುವರಖಿಳ ಕರ್ಮಗಳ ॥ ೮೬ ॥

ಆವದೇಹದೊಳಿದ್ದರೇನಿ
ಸ್ನಾವ ಕರ್ಮವ ಮಾಡಲೇ ನಿ
ಸ್ನಾವ ಗುಣ ರೂಪಗಳುಪಾಸನೆ ಮಾಡಲೇನವರು
ಕಾವನಯ್ಯನ ಪರಮ ಸತ್ಕರು
ಣಾವಲೋಕದ ಬಲದಿ ಚರಿಸುವ
ದೇವತೆಗಳನು ಮುಟ್ಟಲಾಪವೆ ಪಾಪಕರ್ಮಗಳು ॥ ೮೭ ॥

ನಾನು ನನ್ನದು ಎಂಬ ಜಡಮತಿ
ಮಾನವನು ದಿನದಿನದಿ ಮಾಡುವ
ಸ್ನಾನ ಜಪ ದೇವಾರ್ಚನೆಯೆ ಮೊದಲಾದ ಕರ್ಮಗಳ
ದಾನವರು ಸೆಳೆದೊಯ್ವರಲ್ಲದೆ
ಶ್ರೀನಿವಾಸನು ಸ್ವೀಕರಿಸ ಮ
ದ್ದಾನೆ ಪಕ್ವ ಕಪಿತ್ಥ ಫಲ ಭಕ್ಷಿಸಿದವೋಲಹುದು ॥ ೮೮ ॥

ಧಾತ್ರಿಯೊಳಗುಳ್ಳಖಿಳ ತೀರ್ಥ
ಕ್ಷೇತ್ರ ಚರಿಸಿದರೇನು ಪಾತ್ರಾ
ಪಾತ್ರವರಿತನ್ನಾದಿ ದಾನವ ಮಾಡಿ ಫಲವೇನು
ಗಾತ್ರನಿರ್ಮಲನಾಗಿ ಮಂತ್ರ
ಸ್ತೋತ್ರ ಪಠಿಸಿದರೇನು ಹರಿ ಸ
ರ್ವತ್ರಗತನೆಂದರಿಯದಲೆ ತಾಕರ್ತೃ ಎಂಬುವನು ॥ ೮೯ ॥

ಕೆಂಡ ನೀರೊಳು ಮುಳುಗಿ ದೇಹವ
ದಂಡಿಸಿದ ಫಲವೇನು ದಂಡ ಕ
ಮಂಡಲಗಳನೆ ಧರಿಸಿ ಯತಿಯೆಂದೆನಿಸಿ ಫಲವೇನು
ಅಂಡಜಾಧಿಪನಂಸಗನಪದ
ಪುಂಡರೀಕದಿ ಮನವ ಹರ್ಷಿಸಿ
ಒಂಡುಣಿಯವೋಲಿರಿಸಿ ಸುಖಬಡದಿಪ್ಪ ಮಾನವನು ॥ ೯೦ ॥

ವೇದಶಾಸ್ತ್ರಪುರಾಣಕಥೆಗಳ
ನೋದಿಪೇಳಿದರೇನು ಸಕಲ ನಿ
ಷೇಧಕರ್ಮವ ತೊರೆದು ಸತ್ಕರ್ಮಗಳ ಮಾಡೇನು
ಓದನಂಗಳ ಜರಿದು ಶ್ವಸನಿ
ರೋಧಗೈಸಿದರೇನು ಕಾಮ
ಕ್ರೋಧವಳಿಯದೆ ನಾನು ನನ್ನದು ಎಂಬ ಮಾನವನು ॥ ೯೧ ॥

ಏನುಕೇಳಿದರೇನು ನೋಡಿದ
ರೇನು ಓದಿದರೇನು ಪೇಳಿದ
ರೇನು ಪಾಡಿದರೇನು ಮಾಡಿದರೇನು ದಿನದಿನದಿ
ಶ್ರೀನಿವಾಸನ ಜನ್ಮಕರ್ಮ ಸ
ದಾನುರಾಗದಿ ನೆನೆದು ತತ್ತತ್
ಸ್ಥಾನದಲಿ ತದ್ರೂಪ ತನ್ನಾಮಕನಸ್ಮರಿಸದವ ॥ ೯೨ ॥

ಕಬ್ಬಿನೊಳಗಿಹ ರಸವಿದಂತನಿ
ಗಬ್ಬಬಲ್ಲದೆ ಭಾಗ್ಯಯವ್ವನ
ಮಬ್ಬಿನಲಿ ಮೈಮರೆದವಗೆ ಶ್ರೀಹರಿಕಥಾಮೃತವು
ಲಭ್ಯವಾಗದು ಹರಿಪದಾಬ್ಜದಿ
ಹಬ್ಬಿದತಿಸದ್ಭಕ್ತಿ ರಸವುಂ
ಡುಬ್ಬಿಕೊಬ್ಬಿ ಸುಖಾಬ್ಧಿಯೊಳಗಾಡುವವಗಲ್ಲದಲೆ ॥ ೯೩ ॥

ಖಗವರಧ್ವಜನಂಘ್ರಿಭಕುತಿಯು
ಬಗೆಯನರಿಯದ ಮಾನವರಿಗಿದು
ಒಗಟಿನಂದದಿ ತೋರುತಿಪ್ಪುದು ಎಲ್ಲಕಾಲದಲಿ
ತ್ರಿಗುಣವರ್ಜಿತನಮಲಗುಣಗಳ
ಪೊಗಳಿ ಹಿಗ್ಗುವ ಭಾಗವತರಿಗೆ
ಮಿಗೆ ಭಕುತಿ ವಿಜ್ಞಾನ ಸುಖವಿತ್ತವರ ರಕ್ಷಿಪುದು ॥ ೯೪ ॥

ಪರಮ ತತ್ವರಹಸ್ಯವಿದು ಭೂ
ಸುರರು ಕೇಳ್ವುದು ಸಾದರದಿ ನಿ
ಷ್ಠುರಿಗಳಿಗೆ ಮೂಢರಿಗೆ ಪಂಡಿತ ಮಾನಿ ಪಿಸುಣರಿಗೆ
ಅರಸಿಕರಿಗಿದು ಪೇಳ್ವುದಲ್ಲನ
ವರತ ಭಗವತ್ಪಾದಯುಗಳಾಂ
ಬುರುಹಮಧುಕರರೆನಿಸುವರಿಗರುಪುವದು ಮೋದದಲಿ ॥ ೯೫ ॥

ಲೋಕವಾರ್ತೆಯಿದಲ್ಲ ಪರಲೋ
ಕೈಕನಾಥನ ವಾರ್ತೆಕೇಳ್ವಡೆ
ಕಾಕುಮನುಜರಿಗಿದು ಸಮರ್ಪಕವಾಗಿ ಸೊಗಯಿಸದು
ಕೋಕನದ ಪರಿಮಳವು ಷಟ್ಪದ
ಸ್ವೀಕರಿಸುವಂದದಲಿ ಜಲಚರ
ಭೇಕಬಲ್ಲುದೆ ಇದರರಸಹರಿಭಕುತಗಲ್ಲದಲೆ ॥ ೯೬ ॥

ಅಸ್ವತಂತ್ರನು ಜೀವ ಹರಿಸ
ರ್ವಸ್ವತಂತ್ರನು ನಿತ್ಯ ಸುಖಮಯ
ನಿಸ್ವಬದ್ಧಲ್ಪಜ್ಞ ಶಕ್ತಿಸದುಃಖಿನಿರ್ವಿಣ್ಣ್ಯ
ಹ್ರಸ್ವದೇಹಿ ಸನಾಥಜೀವನು
ವಿಶ್ವವ್ಯಾಪಕ ಕರ್ತೃ ಬ್ರಹ್ಮಸ
ರಸ್ವತೀಶಾದ್ಯಮರನುತ ಹರಿಯೆಂದು ಕೊಂಡಾಡು ॥ ೯೭ ॥

ನಿನ್ನ ಸರ್ವತ್ರದಲಿ ನೆನೆವವ
ರನ್ಯಕರ್ಮವ ಮಾಡಿದರು ಸರಿ
ಪುಣ್ಯಕರ್ಮಗಳೆನಿಸುವವು ಸಂದೇಹ ವಿನಿತಿಲ್ಲ
ನಿನ್ನ ಸ್ಮರಿಸದೆ ಸ್ನಾನ ಜಪ ಹೋ
ಮಾನ್ನ ವಸ್ತ್ರ ಗಜಾಶ್ವ ಭೂಧನ
ಧಾನ್ಯ ಮೊದಲಾದಖಿಳ ಧರ್ಮವ ಮಾಡಿ ಫಲವೇನು ॥ ೯೮ ॥

ಹಾನಿವೃದ್ಧಿ ಜಯಾಪಜಯುಗಳ
ನೇನಕೊಟ್ಟದ ಭುಂಜಿಸುತ ಲ
ಕ್ಷ್ಮೀನಿವಾಸನಕರುಣವನೆ ಸಂಪಾದಿಸನುದಿನವಿ
ಜ್ಞಾನಸುಖಮಯ ತನ್ನವರ ಪರ
ಮಾನುರಾಗದಿ ಸಂತವಿಪ ದೇ
ಹಾನು ಬಂಧಿಗಳಂತೆ ಒಳಹೊರಗಿದ್ದು ಕರುಣಾಳು ॥ ೯೯ ॥

ಕಿಟ್ಟ ಗಿಟ್ಟದ ಲೋಕಪಾವಕ
ಸುಟ್ಟು ವಿಂಗಡಮಾಡುವಂತೆ ಘ
ರಟ್ಟು ವ್ರೀಹಿಯೊಳಿಪ್ಪ ತಂಡುಲ ಕಡೆಗೆ ತೆಗೆವಂತೆ
ವಿಠಲನೆಂದೊಮ್ಮೆ ವೈ ಮರೆ
ದಟ್ಟಹಾಸದಿ ಕರೆಯೆ ದುರಿತಗ
ಳಟ್ಟುಳಿಯ ಬಿಡಿಸುವನು ತನ್ನೊಳಗಿಟ್ಟು ಸಲಹುವನು ॥ ೧೦೦ ॥

ಜಲಧಿಯೊಳು ಸ್ವೇಚ್ಛಾನುಸಾರದಿ
ಜಲಚರಪ್ರಾಣಿಗಳ ತತ್ತತ್
ಸ್ಥಳಗಳಲಿ ಸಂತೋಷ ಪಡುತಲಿ ಸಂಚರಿಸುವಂತೆ
ನಳಿನನಾಭನೊಳಬ್ಜ ಭವಮು
ಖ್ಯಾಳಲುರಿಗ ವೈಗಣ್ಣಮೊದಲಹ
ಜಲವು ಜೀವರ್ಗಣವು ವರ್ತಿಸುತಿಹುದು ನಿತ್ಯದಲಿ ॥ ೧೦೧ ॥

ಇನಿತುಪಾಸನೆ ಗೈಯ್ಯುತಿಹ ಸ
ಜ್ಜನರು ಸಂಸಾರದಿ ಪ್ರತಿ ಪ್ರತಿ
ದಿನಗಳಲಿ ಏನೇನಮಾಡುವದೆಲ್ಲ ಹರಿಪೂಜೆ
ಎನಿಸಿಕೊಂಬುದು ಸತ್ಯವೀಮಾ
ತಿನಲಿಸಂಶಯುಬಡುವನರನ
ಲ್ಪನು ಸುನಿಶ್ಚಯು ಬಾಹ್ಯಕರ್ಮವ ಮಾಡಿ ಫಲವೇನು ॥ ೧೦೨ ॥

ಹಲವು ಬಗೆಯಲಿ ಹರಿಯುಮನದೊಳ
ಗೊಲಿಸಿ ನಿಲ್ಲಿಸಿ ಏನಮಾಡುವ
ಕೆಲಸಗಳು ಅವನಂಘ್ರಿ ಪೂಜೆಗಳೆಂದು ನೆನೆಯುತಿರು
ಹಲಧರಾನುಜ ತಾನೆ ಸರ್ವ
ಸ್ಥಳಗಳಲಿ ನೆಲೆಸಿದ್ದು ನಿಶ್ಚಂ
ಚಲ ಭಕುತಿ ಸುಜ್ಞಾನ ಭಾಗ್ಯವ ಕೊಟ್ಟು ಸಂತೈಪ ॥ ೧೦೩ ॥

ದೋಷ ಗಂಧ ವಿದೂರ ನಾನಾ
ವೇಷ ಧಾರಕ ನೀಜಗತ್ರಯು
ಪೋಷಕ ಪುರಾತನ ಪುರುಷ ಪುರುಹೂತ ಮುಖವಿನುತ
ಶೇಷವರಪರಿಯಂಕಶಯುನ ವಿ
ಭೀಷಣ ಪ್ರಿಯು ವಿಜಯುಸಖ ಸಂ
ತೋಷ ಪಡಿಸುವ ಸುಜನರಿಷ್ಟಾರ್ಥಪೂರೈಸಿ ॥ ೧೦೪ ॥

ಮುಕ್ಕಳಾಡಿಸುವಾಗ ಮಡದಿಯೊ
ಳಕ್ಕರದಿ ನುಡಿವಾಗ ಹಯುಪ
ಲ್ಲಕ್ಕಿ ಗಜ ಮೊದಲಾದ ವಾಹನವೇರಿ ಮೆರೆವಾಗ
ಬಿಕ್ಕುವಾಗಾಕಳಿಸುತಲಿ ದೇ
ವಕ್ಕಿ ತನಯುನ ನೆನೆಯುತಿಹ ನರ
ಸಿಕ್ಕ ಯುಮದೂತರಿಗೆ ಆವಾವಲ್ಲಿನೋಡಿದರು ॥ ೧೦೫ ॥

ಸರಿತು ಪ್ರವಹಗಳಲ್ಲಿ ದಿವ್ಯಾಂ
ಬರದಿ ಪತ್ರಾದಿಯಲಿ ಹರುಷಾ
ಪುರುಷ ವಿಸ್ಮೃತಿಯಿಂದಲಾಗಲಿ ಒಮ್ಮೆ ಬಾಯ್ದೆರದು
ಹರಿಹರೀಹರಿಯೆಂಬ ಎರಡ
ಕ್ಷರ ನುಡಿದಮಾತ್ರದಲಿ ದುರಿತ ಗ
ಳಿರದೆ ಪೋಪವು ತೂಲರಾಶಿಯೊಳನಲ ಪೊಕ್ಕಂತೆ || ೧೦೬ ||

ಮಲಗುವಾಗಲು ಏಳವಾಗಲು
ಕುಳಿತು ಮಾತಾಡುತಲು ಮನೆಯೊಳು
ಕೆಲಸಮಾಡುತಲು ಮೈದೊಳೆವಾಗ ಮೆಲುವಾಗ
ಕಲುಷದೂರನ ಸಕಲ ಠಾವಿಲಿ
ತಿಳಿಯೆತತ್ತನ್ನಾಮರೂಪವ
ಬಳಿಯಲಿಪ್ಪನು ಒಂದಿರಕ್ಷಣ ಬಿಟ್ಟಗಲನವರ || ೧೦೭ ||

ಆವಕುಲದವನಾದಡೇನಿ
ನ್ನಾವ ದೇಶದೊಳಿದ್ದಡೇನಿ
ನ್ನಾವ ಕರ್ಮವ ಮಾಡಲೇ ನಿನ್ನಾವ ಕಾಲದಲಿ
ಶ್ರೀವರನ ಸರ್ವತ್ರದಲಿ ಸಂ
ಭಾವಿಸುತ ಪೂಜಿಸುತವೋದಿಪ
ಕೋವಿದರಿಗುಂಟೇನು ಭಯದುಃಖಾದಿ ದ್ವಂದ್ವಗಳು || ೧೦೮ ||

ವಾಸುದೇವನ ಗುಣಸಮುದ್ರದೊ
ಳೀಸಬಲ್ಲವ ಭವಸಮುದ್ರಾ
ಯಾಸವಿಲ್ಲದೆ ದಾಟುವನು ಶೀಘ್ರದಲಿ ಜಗದೊಳಗೆ
ಬೇಸರದೆ ದುರ್ವಿಷಯಗಳ ನಭಿ
ಲಾಷೆಯಲಿ ಬಳಲುವವನಾನಾ
ಕ್ಲೇಶಗಳನನುಭವಿಪ ಭಕ್ತಿಯಮಾರ್ಗಕಾಣದಲೆ || ೧೦೯ ||

ಸ್ನಾನಜಪ ದೇವಾರ್ಚನೆಯು ವ್ಯಾ
ಖ್ಯಾನ ಭಾರತ ಮುಖಮುಹೋಪ ಪು
ರಾಣ ಕಥೆಗಳಕೇಳಿ ಪೇಳಿದರೇನು ದಿನದಿನದಿ
ಜ್ಞಾನಕರ್ಮೇಂದ್ರಿಯಗಳಿಂದೇ
ನೇನಮಾಡುವ ಕರ್ಮಗಳ ಲ
ಕ್ಷ್ಮೀನಿವಾಸನ ಪೂಜೆಯೆಂದರ್ಪಿಸದ ಮಾನವನು ॥ ೧೧೦ ॥

ದೇವಗಂಗೆಯೊಳುಳ್ಳವಗೆದುರಿ
ತಾವಳಿಗಳುಂಟೇ ವಿಚಾರಿಸೆ
ಪಾವುಗಳ ಭಯವುಂಟೆ ವಿಹಗಾಧಿಪನ ಮಂದಿರದಿ
ಜೀವಕರ್ತೃತ್ವವನು ಮರೆದುಪ
ರಾವರೇಶನೆ ಕರ್ತೃವೆಂದರಿ
ದಾವಕರ್ಮವಮಾಡಿದರು ಲೇಪಿಸವು ಕರ್ಮಗಳು ॥ ೧೧೧ ॥

ಏನುಮಾಡುವ ಪುಣ್ಯಪಾಪಗ
ಳಾನೆಮೊಡುವೆನೆಂಬುವಾಧಮ
ಹೀನಕರ್ಮಕೆ ಪಾತ್ರನಾ ಪುಣ್ಯಕ್ಕೆ ಹರಿಯೆಂಬ
ಮಾನವನು ಮಧ್ಯಮನು ದ್ವಂದ್ವಕ್ಕೆ
ಶ್ರೀನಿವಾಸನೆ ಕರ್ತೃವೆಂದು ಸ
ದಾನುರಾಗದಿನೆನೆದು ಸುಖಿಸುವರೇನರೋತ್ತಮರು ॥ ೧೧೨ ॥

ಈವುಪಾಸನೆ ಗೈವರಿಳೆಯೊಳು
ದೇವತೆಗಳಲ್ಲದಲೆನರರ
ಲ್ಲಾವಬಗೆಯಿಂದಾದರಿವರರ್ಚನೆಯು ಹರಿಪೂಜೆ
ಕೇವಲ ಪ್ರತಿಮೆಗಳೆನಿಪರು ರ
ಮಾವಿನೋದಗೆ ಇವರನುಗ್ರಹ
ದೇವರಾನುಗ್ರಹವೆನಿಸುವುದು ಮುಕ್ತಿ ಯೋಗ್ಯರಿಗೆ ॥ ೧೧೩ ॥

ತನುವೆನಾನೆಂಬುವನು ಸತಿ ಸುತ
ಮನೆಧನಾದಿಗಳೆನ್ನದೆಂಬನು
ದ್ಯುನದಿ ಮೊದಲಾದುದಕಗಳೆ ಸತ್ತೀರ್ಥವೆಂಬುವನು
ಆನಲಲೋಹಾದಿ ಪ್ರತೀಕಾ
ರ್ಚನೆಯೆ ದೇವರಪೂಜೆಸುಜನರೆ
ಮನುಜರಹುದೆಂಬುವನು ಗೋಖರನೆನಿಪ ಬುಧರಿಂದ || ೧೧೪ ||

ಅನಲಸೋಮಾರ್ಕೇಂದು ತಾರಾ
ವನಿಸುರಾಪಗ ಮುಖ್ಯತೀರ್ಥ ಗ
ಳನಿಲ ಗಗನ ಮನಾದಿ ಇಂದ್ರಿಯಗಳಿಗೆ ಅಭಿಮಾನಿ
ಎನಿಪಸುರರು ವಿಪಶ್ಚಿತರು ಸ
ನ್ಮನದಿ ಭಜಿಸದಲಿಪ್ಪವರಪಾ
ವನವಮಾಡರು ತಮ್ಮಪೂ ಜೆಯ ಮಾಡಿದರು ಸರಿಯೆ || ೧೧೫ ||

ಕೆಂಡ ಕಾಣದೆ ಮುಟ್ಟಿದರು ಸರಿ
ಕಂಡು ಮುಟ್ಟಲು ದಹಿ ಸದಿಪ್ಪದೆ
ಪುಂಡರೀಕದಳಾಯತಾಕ್ಷನ ವಿಮಲ ಪದ ಪದ್ಮ
ಬಂಡುಣಿಗಳೆಂದೆನಿಪ ಭಕ್ತರ
ಹಿಂಡು ನೋಡಿದ ಮಾತ್ರದಲಿತನು
ದಿಂಡುಗೆಡದಿದನರಸ ಪಾವನಮಾಳ್ಪರಾಕ್ಷಣದಿ || ೧೧೬ ||

ಈ ನಿಮಿತ್ತ ಪುನಃ ಪುನಃ ಸು
ಜ್ಞಾನಿಗಳಸಹವಾಸ ಮಾಡು ಕು
ಮಾನವರ ಕೂಡಾಡದಿರು ಲೌಕಿಕಕೆ ಮರುಳಾಗಿ
ವೈನತೇಯಾಂಸಗನಸರ್ವ
ಸ್ಥಾನದಲಿ ತನ್ನಾಮ ರೂಪವ
ಧೇನಿಸುತ ಸಂಚರಿಸು ಇತರಾಲೋಚನೆಯ ಬಿಟ್ಟು || ೧೧೭ ||

ಈ ನಳಿನಜಾಂಡದೊಳು ಸರ್ವ
ಪ್ರಾಣಿಗಳೊಳಿದ್ದನವರತ ವಿ
ಜ್ಞಾನಮಯ ವ್ಯಾಪಾರಗಳ ಮಾಡುವನು ತಿಳಿಸದಲೆ
ಏನುಕಾಣದೆ ಸಕಲ ಕರ್ಮಗ
ಳಾನೆ ಮಾಡುವೆನೆಂಬನರನು ಕು
ಯೋನಿಯೈದುವ ಕರ್ತೃ ಹರಿಯೆಂಬವನೆ ಮುಕ್ತನಹ ॥ ೧೧೮ ॥

ಕಲಿಮಲಾಪಹಳೆನಿಸುತಿಹ ಬಾಂ
ಬೊಳೆಯೊಳಗೆ ಸಂಚರಿಸಿ ಒದುಕುವ
ಜಲಚರ ಪ್ರಾಣಿಗಳು ಬಲ್ಲವೆ ತೀರ್ಥಮಹಿಮೆಯನು
ಹಲವುಬಗೆಯಲಿ ಹರಿಯಕರುಣಾ
ಬಲದಿ ಬಲ್ಲಿದರಾದ ಬ್ರಹ್ಮಾ
ನಿಲವಿಪೇಶಾದ್ಯಮರರರಿಯರನಂತನಮಲಗುಣ ॥ ೧೧೯ ॥

ಹಲವು ಕರ್ಮವ ಮಾಡಿ ದೇಹವ
ಬಳಲಿಸದೆ ದಿನದಿನದಿ ಹೃದಯಾ
ಮಲಸದನದಲಿ ರಾಜಿಸುವ ಹರಿಮೂರ್ತಿಯನೆ ಭಜಿಸು
ತಿಳಿವುದೀ ಪೂಜಾಪ್ರಕರಣವ
ಫಲಸುಪುಷ್ಪಾಗ್ರೋದಕ ಶ್ರೀ
ತುಲಸಿದಳವರ್ಪಿಸಲು ಒಪ್ಪನು ವಾಸುದೇವಸದಾ ॥ ೧೨೦ ॥

ಹರಿಕಥಾಮೃತಸಾರವಿದು ಸಂ
ತರು ಸದಾ ಚಿತ್ತೈಸುವದು ನಿ
ಷ್ಠುರಿಗಳಿಗೆ ಪಿಸುಣರಿಗಯೋಗ್ಯರಿಗಿದನು ಪೇಳದಲೆ
ನಿರುತ ಸದ್ಭಕ್ತಿಯಲಿ ಭಗವ
ಚ್ಚರಿತೆಗಳ ಕೊಂಡಾಡಿ ಹಿಗ್ಗುವ
ಪರಮ ಭಾಗವತರಿಗೆ ತಿಳಿಸುವದೀ ರಹಸ್ಯವನು ॥ ೧೨೧ ॥

ಸತ್ಯಸಂಕಲ್ಪನು ಸದಾ ಏ
ನಿತ್ತುದೇ ಪುರುಷಾರ್ಥವೆಂದರಿ
ದತ್ಯಧಿಕ ಸಂತೋಷದಲಿ ನೆನೆಯುತ್ತಭುಂಜಿಪುದು
ನಿತ್ಯಸುಖ ಸಂಪೂರ್ಣ ಪರಮ ಸು
ಹೃತ್ತಮ ಜಗನ್ನಾಥ ವಿಠಲ
ಬತ್ತಿಸಿ ಭವಾಂಬುಧಿಯ ಚಿತ್ಸುಖ ವ್ಯಕ್ತಿಕೊಡುತಿಪ್ಪ ॥ ೧೨೨ ॥

ದೇಹಗಳ ಕೊಡುವವನು ಅವರವ
ರಹರವನು ಕೊಡದಿಹನೆ ಸುಮನಸ
ಮಹಿತ ಮಂಗಳಚರಿತ ಸದ್ಗುಣಭರಿತನನವರತ
ಅಹಿಕ ಪಾರತ್ರಿಕ ಸುಖಪ್ರದ
ವಹಿಸಿ ಬೆನ್ನಲಿ ಬಿಟ್ಟವಮೃತವ
ದ್ರುಹಿಣ ಮೊದಲಾದವರಿಗುಣಿಸಿದ ಪರಮಕರುಣಾಳು ॥ ೧೨೩ ॥

ಸೋಜಿ ಕರದಲಿ ಪಿಡಿದು ಸಮರವ
ನಾ ಜಯಿಸುವೆನು ಎಂಬ ನರನಂ
ತೀ ಜಗತ್ತಿನೊಳುಳ್ಳ ಅಜ್ಞಾನಿಗಳು ನಿತ್ಯದಲಿ
ಶ್ರೀ ಜಗತ್ಪತಿ ಚರಣ ಯುಗಳ ಸ
ರೋಜ ಭಕ್ತಿಜ್ಞಾನಪೂರ್ವಕ
ಪೂಜಿಸದೆ ಧರ್ಮಾರ್ಥ ಕಾಮವ ಬಯಸಿ ಬಳಲುವರು ॥ ೧೨೪ ॥

ಮೂರು ಯುಗದಲಿ ಮೂಲ ರೂಪನು
ಸೂರಿಗಳ ಸಂತೈಸಿ ದಿತಿಯುಕು
ಮಾರಕರ ಸಂಹರಿಸಿ ಧರ್ಮವನುಳುಹ ಬೇಕೆಂದು
ಕಾರುಣಿಕ ಭೂಮಿಯೊಳು ನಿಜಪರಿ
ವಾರಸಹಿತವತರಿಸಿ ಬಹುವಿಧ
ತೋರಿದನು ನರವತ್ಪ್ರವೃತ್ತಿಯ ಸಕಲ ಚೇತನಕೆ ॥ ೧೨೫ ॥

ದೇಶ ದೇಶವಸುತ್ತಿ ದೇಹಾ
ಯಾಸಗೊಳ್ಳದೆ ಕಾವ್ಯ ಕರ್ಮದು
ರಾಸೆಗೊಳಗಾಗದಲೆ ಬ್ರಹ್ಮಾದ್ಯಖಿಳ ಚೇತನರು
ಭೂಸಲಿಲ ಪಾವಕ ಸಮೀರಾ
ಕಾಶವೊದಲಾದಖಿಳ ತತ್ವ ಪ
ರೇಶ ನಿಗಧಿಷ್ಠಾನವೆಂದರಿದರ್ಚಿಸನವರತ || ೧೬ ||

ಜೀವ ಜೀವರಭೇದ ಜಡ ಜಡ
ಜೀವ ಜಡಗಳ ಭೇದಪರಮನು
ಜೀವ ಜಡಸುವಿಲಕ್ಷಣನು ಎಂದರಿದು ನಿತ್ಯದಲಿ
ಈ ವಿರಿಂಚಾಂಡದೊಳು ಎಲ್ಲಾ
ಠಾವಿನಲಿ ತಿಳಿದೈದು ಭೇದಕ
ಳೀವರ ದೊಳರಿತಚ್ಯುತನ ಪದವೈದು ಶೀಘ್ರದಲಿ || ೧೭ ||

ದೀಪದಿಂ ದೀಪಗಳು ಪೊರೆವು
ಟ್ಟಾಪಣಾಲಯಗತ ತಿಮಿರಗಳ
ತಾಪರಿಹರಿಸಿ ತದ್ಗವ ಪದಾರ್ಥಗಳ ತೋರ್ಪಂತೆ
ಸೌಪರಣಿವರವಹನು ತಾಬಹು
ರೂಪನಾಮದಲೆಲ್ಲ ಕಡೆಯಲಿ
ವ್ಯಾಪಿಸಿದ್ದು ಯಥೇಷ್ಟಮಹಿಮೆಯ ತೋರ್ಪತಿಳಿಸದಲೆ || ೧೮ ||

ನಳಿನಮಿತ್ರಗೆ ಇಂದ್ರಧನು ಪ್ರತಿ
ಫಲಿಸುವಂತೆ ಜಗತ್ರಯವು ಕಂ
ಗೊಳಿಸುವದುಪಾಧಿಯಲಿ ಪ್ರತಿಬಿಂಬಾಹ್ವಯದಿ ಹರಿಗೆ
ತಿಳಿಯೆ ತ್ರಿಕಕುದ್ಧಾಮನತಿ ಮಂ
ಗಳಸುರೂಪವ ಸರ್ವಠಾವಿಲಿ
ಪೊಳೆವ ಹೃದಯಾಕೆ ಪ್ರತಿದಿವಸ ಪ್ರಹ್ಲಾದ ಪೋಷಕನು || ೧೯ ||

ಒಂದುದಿನ ದೊಳಗನಿಲನಿಪ್ಪ
ತ್ತೊಂದು ಸಾರವಿದಾರನೂರು ಮು
ಕುಂದನಾಜ್ಞದಿ ಶ್ವಾಸವಾಡಿಸಿ ಲೋಕಗಳ ಪೊರೆವ
ಎಂದು ಪ್ರಾಣನ ಪೊಗಳುತಿರು ಎಂ
ದೆಂದು ಮರೆಯುದಲೀ ಮಹಿಮೆ ಸಂ
ಕ್ರಂದನಾದ್ಯರಿಗಂಟಿ ನೋಡಲು ಸರ್ವ ಕಾಲದಲಿ || ೧೩೦ ||

ಇನಿತುಪಾಸನೆ ಸರ್ವಜೀವರೊ
ಳನಿಲ ದೇವನು ಮಾಡುತಿರೆ ಚಿಂ
ತನೆಯು ಮಾಡದೆ ಕಂಡನೀರೊಳುಮುಳುಗಿ ನಿತ್ಯದಲಿ
ಮನೆಯೊಳಗೆ ಕೃಷ್ಣಾಜಿನಾದ್ಯಾ
ಸನದಿ ಕುಳಿತು ವಿಶಿಷ್ಟ ಬಹು ಸ
ಜ್ಜನನೆನಿಸಿ ಜಪಮಣಿಗಳೆಸಿದರೇನು ಬೇಸರದೆ || ೧೩೧ ||

ಜಾಲಿತೊಪ್ಪಲ ಜಾವಿಗಳು ವೇ
ದ್ಯಾಲಯದಿ ಸ್ವೇಚ್ಛಾನುಸಾರದಿ
ಪಾಲಗರೆವಂದದಲಿ ಲಕುಮಿಸಾರಮಣ ತನ್ನವರ
ಕೇಳುಕರ್ಮವ ಸ್ವೀಕರಿಸಿ ತ
ನ್ನಾಲಯದೊಳಿಟ್ಟು ಪೊರೆವ ಕೃ
ಪಾಳುಕಾಮದ ಕೈರವದಳಶ್ಯಾಮ ಶ್ರೀರಾಮ || ೧೩೨ ||

ದೀಪಕರದಲಿ ಪಿಡಿದು ಕಾಣದೆ
ಕೂಪದಲಿ ಬಿದ್ದಂತೆ ವೇದಸು
ಹೋಪನಿಷದರ್ಥಗಳ ನಿತ್ಯದಿಪೇಳುವವರೆಲ್ಲ
ಶ್ರೀಪವನ ಮುಖಪಿನುತನಮಲಸು
ರೂಪಗಳವ್ಯಾಪಾರ ತಿಳಿಯದೆ
ಪಾಪಪುಣ್ಯಕೆ ಜೀವಕರ್ತೃವ ಕರ್ತೃಹರಿಯೆಂದು || ೧೩೩ ||

ಪರಮ ವಿಷ್ಣುಸ್ವತಂತ್ರ ಮಾಯಾ
ತರುಣಿ ವಕ್ಷಸ್ಥಳ ನಿವಾಸಿನಿಯು
ಸರಿಸಿಜೋದ್ಭವ ಪವನರೀರ್ವರು ಸಚಿವರೆನಿಸುವರು
ಸರುವ ಕರ್ಮಗಳಲ್ಲಿ ತತ್ಕ್ರಿಯು
ರುರಗ ಭೂಷನ ಹಂಕೃತಿತ್ರಯು
ಕರಸನಮರೇಂದ್ರಾರ್ಕಮುಖರಿಂದ್ರಿಯಪರೆನಿಸುವರು ॥ . ೩೪ ॥

ಈ ದಿವೌಕಸರಂತೆ ಕಲಿಮೊದ
ಲಾದ ದೈತ್ಯರು ಸರ್ವ ದೇಹದಿ
ತೋದಕರು ತಾವಾಗಿ ವ್ಯಾಪಾರಗಳ ಮಾಡುವರು
ವೇಧನಂದದಿ ಕಲಿಯಹಂಕಾ
ರಾಧಿಪಾಧಮ ಮಧುಕುಕೈಟಭ
ಕ್ರೋಧಿಶಂಬರಮುಖರು ಮನಸಿಗೆ ಸ್ವಾಮಿಯೆನಿಸುವರು ॥ ೧೩೫ ॥

ದೇವತೆಗಳೋಪಾದಿ ನಿತ್ಯದ
ಲೇವ ಮಾದಿಸ್ವನಾಮದಿಂದಲಿ
ಯಾವದಿಂದ್ರಿಯಗಳೊಳು ವ್ಯಾಪಾರಗಳ ಮಾಡುವರು
ಸೇವಕರ ಸೇವಾನುಗುಣ ಫಲ
ವೀವ ನೃಪನಂದದಲಿ ತನ್ನ ಸ್ವ
ಭಾವಸ್ವಾತಂತ್ರ್ಯವ ಭಾಗವಮಾಡಿ ಕೊಟ್ಟ ಹರಿ ॥ ೧೩೬ ॥

ಈ ವಿಧದಿ ಸ್ವಾತಂತ್ರ್ಯತ್ವವ
ದೇವಮಾನವದಾನವರೊಳು ರ
ಮಾವಿನೋದಿ ವಿಭಾಗ ಮಾಡಿಟ್ಟಲ್ಲೆ ರಮಿಸುವನು
ಮೂವರೊಳಗಿದ್ದವರ ಕರ್ಮವ
ತಾ ವಿಕಾರವಗೈಸದಲೆ ಕ
ಲ್ಯಾವಸಾನಕೆ ಕೊಡುವನಾಹರಿಯುವರವರ ಗತಿಯ ॥ ೧೩೭ ॥

ಆಲಯಗಳೊಳಗಿಪ್ಪದೀಪ
ಜ್ವಾಲೆವರ್ತಿಗಳನುಸರಿಸಿ ಜನ
ರಾಲಿಗೊಪ್ಪುವೆತೆರದಿ ಹರಿತಾತ್ತೋರ್ಪ ಸರ್ವತ್ರ
ಕಾಲಕಾಲದಿ ಶ್ರೀಧರಾದು
ಗ್ರಾಲಲನೆಯರ ಕೂಡಿ ಸುಖಮಯ
ಲೀಲೆಗೈಯಲು ತ್ರಿಗುಣಕಾರ್ಯಗಳಿಹವು ಜೀವರಿಗೆ || ೧೩೮ ||

ಇಂದ್ರಿಯಂಗಳಿಂ ಮಾಳ್ಪ ಕರ್ಮ
ದ್ವಂದ್ವಗಳ ತನಗರ್ಪಿಸಲು ಗೋ
ವಿಂದ ಪುಣ್ಯವ ಕೊಂಡು ಪಾಪವ ಭಸ್ಮವನೆಮಾಳ್ಪ
ಇಂದಿರೇಶನು ಭಕ್ತಜನರನು
ನಿಂದಿಸುವರೊಳಗಿಪ್ಪ ಪುಣ್ಯವ
ತಂದು ತನ್ನವಗೀವ ಪಾಪವನವರಿಗುಣಿಸುವನು || ೧೩೯ ||

ಹೊತ್ತು ಹೊತ್ತಿಗೆ ಪಾಪಕರ್ಮ ಪ್ರ
ವರ್ತನೆಯ ನಿಂದಿಸದೆ ತನಗಿಂ
ದುತ್ತಮರ ಗುಣಕರ್ಮಗಳ ಕೊಂಡಾಡದಲೆ ಇಪ್ಪ
ಮರ್ತ್ಯರಿಗೆ ಗೋಬ್ರಾಹ್ಮಣ ಸ್ತ್ರೀ
ಹತ್ಯ ಮೊದಲಾದಖಿಳ ದೋಷಗ
ಳಿತ್ತಪನು ಸಂದೇಹಬಡೆಸಲ್ಲಖಿಳಶಾಸ್ತ್ರ ಮತ || ೧೪೦ ||

ತಿಮಿರತರಣಿಗೆಳೇಕ ದೇಶದಿ
ಸಮನಿಸಿಪ್ಪವೆ ಎಂದಿಗಾದರು
ಭ್ರಮಣ ಛಳಿ ಬಿಸಿಲಂಜಿಕೆಗಳುಂಟೇನು ಪರ್ವತಕೆ
ಅಮಿತ ಜೀವರೊಳಿದ್ದು ಲಕುಮೀ
ರಮಣ ವ್ಯಾಪಾರಗಳ ಮಾಡುವ
ಕಮಲ ಪತ್ರ ಸರೋವರಗಳೊಳಗಿಪ್ಪ ತೆರನಂತೆ || ೧೪೧ ||

ಇನಿತು ವಿಷ್ಣು ರಹಸ್ಯದೊಳು ಭೃಗು
ಮುನಿಪ ನಿಂದ್ರದ್ಯುಮ್ನಗರುಪಿದು
ದನು ಬುಧರು ಕೇಳುವದು ನಿತ್ಯದಿ ಮತ್ಸರವ ಬಿಟ್ಟು
ಅನುಚಿತೋಕ್ತಿಗಳಿದ್ದರೆಯುಸರಿ
ಗಣನೆ ಮಾಡದಿರೆಂದು ವಿದ್ವ
ಜ್ಜನಕೆ ವಿಜ್ಞಾಪನೆಯ ಮಾಡುವೆ ವಿನಯ ಪೂರ್ವಕದಿ || ೧೪೨ ||

ಅವನಿಪ ಸ್ವಾಮಿತ್ವ ಧರ್ಮವ
ಸ್ವವಶಮಾತ್ಯರಿಗಿತ್ತು ತಾಮ
ತ್ತವರ ಮುಖದಲಿ ರಾಜಕಾರವ್ಯ ಮಾಡಿಸುವ ತೆರದಿ
ಕವಿಭಿರೀಡಿತ ತನ್ನ ಕಳೆಗಳ
ದಿವಿಜದಾನವಮಾನವರೊಳಿ
ಟ್ಟವಿರತ ಗುಣತ್ರಯಜ ಕರ್ಮವ ಮಾಡಿ ಮಾಡಿಸುವ || ೧೪೩ ||

ಪುಣ್ಯಪಾಪಗಳೀತೆರದಿ ಕಾ
ರುಣ್ಯಸಾಗರ ದೇವದಾನವ
ಮಾನವರೊಳಿಟ್ಟವರ ಫಲವ್ಯತ್ಯಾಸವನೆ ಮಾಡಿ
ಬನ್ನಬಡಿಸುವ ಭಕ್ತಿಹೀನರ
ಸನ್ನುತರ ಸುಕರ್ಮಗಳ ತೆಗೆದು ಪ್ರ
ಪನ್ನರಿಗೆ ಕೊಟ್ಟವರ ಸುಖಪಡಿಸುವನು ಸುಭುಜಾಹ್ವ || ೧೪೪ ||

ಏಣಲಾಂಛನನಮಲ ಕಿರಣ ಕ್ರ
ಮೇಣ ವೃದ್ಧಿಯನೈದಿ ಲೋಕರ
ಕಾಣಗೊಡದಿಹ ಕತ್ತಲೆಯ ಭಂಗಿಸುವ ತೆರನಂತೆ
ವೈನತೇಯಾಂಸಗನ ಮೂರ್ತಿ
ಧ್ಯಾನವುಳ್ಳ ಮಹಾತ್ಮರಿಗೆ ಸು
ಜ್ಞಾನಭಕ್ತ್ಯಾದಿಗಳು ವರ್ಧಿಸಿ ಸುಖವ ಕೊಡುತಿಹವು || ೧೪೫ ||

ಜನಪನರಿಕೆಯ ಚೋರ ಪೊಳಲೊಳು
ಧನವ ಕದ್ದೊಯ್ದಾಯಲವನವ
ಗುಣಗಳೆಣಿಸದ ಪೊರೆವ ಕೊಡದಿರೆ ಸಿಕ್ಷಿಸುವ ತೆರದಿ
ಅನುಚಿತೋಚಿತ ಕರ್ಮ ಕೃಷ್ಣಾ
ರ್ಪಣವೆನಲು ಕೈಕೊಂಡು ತನ್ನರ
ಮನೆಯೊಳಿಟ್ಟಾನಂದಪಡಿಸುವ ಮಾಧವಾನತರ || ೧೪೬ ||

ಮೊಗದೊಳಗೆ ಮೊಗವಿಟ್ಟು ಮುದ್ದಿಸಿ
ಮಗುವಿನಂ ಬಿಗಿದಪ್ಪಿ ಸ್ನೇಹದಿ
ತೆಗೆದು ತನ್ನಯ ಸ್ತನಗಳುಣಿಸುವ ಜನನಿಯಂದದಲಿ
ಅಗಣಿತಾತ್ಮನು ತನ್ನ ಪಾದಾ
ಬ್ಜಗಳ ಧೇನಿಪ ಭಕ್ತಜನರಿಗೆ
ಪ್ರಘಟಕನು ತಾನಾಗಿ ಸೌಖ್ಯಗಳೀವ ಸರ್ವತ್ರ . || ೧೪೭ ||

ತೋಟಿಗನು ಭೂಮಿಯೊಳು ಬೀಜವ
ನಾಟಬೇಕೆಂದೆನುತ ಹಿತದಲಿ
ಊಟೆಯಿಂ ನೀರೆತ್ತಿ ಸಸಿಗಳ ಸಂತಯಿಸುವಂತೆ
ಪಾಟುಬಡದಲೆ ಜಗದಿ ಜೀವರ
ಘೋಟಕಾಸ್ಯನು ಸೃಜಿಸಿ ಯೋಗ್ಯತೆ
ದಾಟಗೊಡದಲೆ ಸಲಹುತಿಪ್ಪನು ಸರ್ವಕಾಲದಲಿ || ೧೪೮ ||

ಭೂಮಿಯೊಳು ಜಲವಿರೆ ತೃಷಾರ್ತನು
ತಾಮರೆದು ಮೊಗವೆತ್ತಿ ಏಣ್ದೆಸೆ
ವ್ಯೋಮಮಂಡಲದೊಳಗೆ ಕಾಣದೆ ಮಿಣುಕುವಂದದಲಿ
ಶ್ರೀಮನೋರಮ ಸರ್ವರಂತ
ರ್ಯಾಮಿಯಾಗಿರೆ ತಿಳಿಯದನುದಿನ
ಭ್ರಾಮಕರು ಭಜಿಸುವರು ಭಕುತಿಯಲನ್ಯದೇವತೆಯ || ೧೪೯ ||

ಮುಖ್ಯಫಲವೈಕುಂಠ ಮುಖ್ಯಾ
ಮುಖ್ಯಫಲ ಮಹದಾದಿ ಲೋಕಾ
ಮುಖ್ಯಫಲ ವೈಷಯಿಕವೆಂದರಿದತಿ ಭಕುತಿಯಿಂದ
ರಕ್ಕಸಾರಿಯ ಭಜಿಸುತಲಿ ನಿ
ರ್ದುಃಖನಾಗು ನಿರಂತರದಿ ಮೊರೆ
ಯೊಕ್ಕವರ ಬಿಡ ಭಕ್ತವತ್ಸಲ ಭಾರತೀಶಪಿತ ॥ ೧೫೦ ॥

ವ್ಯಾಧಿಯಿಂಪೀಡಿತ ಶಿಶುವಿಗೆ ಗು
ಡೋದಕವನೆರೆದದಕೆ ಔಷಧ
ತೇದು ಕುಡಿಸುವ ತಾಯಿಯೋಪಾದಿಯಲಿ ಸರ್ವಜ್ಞ
ಬಾದರಾಯಣ ಭಕ್ತಜನಕೆ ಪ್ರ
ಸಾದರೂಪಕನಾಗಿ ಭಾಗವ
ತಾದಿಯಲಿ ಪೇಳಿದನು ಧರ್ಮಾದಿಗಳೆ ಫಲವೆಂದು ॥ ೧೫೧ ॥

ದೂರದಲ್ಲಿಹ ಪರ್ವತ ಘನಾ
ಕಾರ ತೋರ್ಪುದು ನೋಳ್ಪ ಜನರಿಗೆ
ಸಾರೆಗೈದಲು ಸರ್ಪ ವ್ಯಾಘ್ರಗಳಿಂದೆ ಭಯವಿಹುದು
ಘೋರತರ ಸಂಸಾರ ಸೌಖ್ಯಾ
ಸಾರತರವೆಂದರಿತು ನಿತ್ಯ ರ
ಮಾರಮಣನಾರಾಧಿಸುವರದರಿಂದ ಬಲ್ಲವರು ॥ ೧೫೨ ॥

ಎರಡುದೀಕ್ಷೆಗಳಿಹವು ಬಾಹ್ಯಾಂ
ತರವೆನಿಪನಾಮದಲಿ ಬುಧರಿಂ
ದರಿತು ದೀಕ್ಷಿತನಾಗು ದೀರ್ಘದ್ವೇಷಗಳ ಬಿಟ್ಟು
ಹರಿಯೆ ಸರ್ವೋತ್ತಮ ಕ್ಷರಾಕ್ಷರ
ಪುರುಷ ಪೂಜಿತಪಾದ ಜನ್ಮಾ
ದ್ಯರವಿದೂರ ಸುಖಾತ್ಮ ಸರ್ವಗನೆಂದು ಸ್ಮರಿಸುತಿರು ॥ ೧೫೩ ॥

ಹೇಯವಸ್ತುಗಳಿಲ್ಲ ಊಪಾ
ದೇಯವಸ್ತುಗಳಿಲ್ಲ ನ್ಯಾಯಾ
ನ್ಯಾಯ ಧರ್ಮಗಳಿಲ್ಲ ದ್ವೇಷಾಸೂಯೆ ಮೊದಲಿಲ್ಲ
ತಾಯಿತಂದೆಗಳಿಲ್ಲ ಕಮಲದ
ಳಾಯತಾಕ್ಷಂಗೆನಲು ಈಸುವ
ಕಾಯಿಯಂದದಿ ಮುಳುಗ ಗೊಡದೆಭವಾಬ್ಧಿ ದಾಟಿಸುವ || ೧೫೪ ||

ಪ್ರಾಯಧನ ಮದದಿಂದ ಜನರಿಗೆ
ನಾಯಕ ಪ್ರಭುವೆಂಬೆ ಪೂರ್ವದಿ
ತಾಯಪೊಟ್ಟೆಯೊಳಿರಲು ಪ್ರಭುವೆಂದೇಕೆ ಕರೆಯರಲ್ಲೈ
ಕಾಯ ನಿನ್ನನು ಬಿಟ್ಟು ಪೋಗಲು
ರಾಯನೀನೆಂಬರೆ ಪ್ರಭುತ್ವ ಪ
ಲಾಯನವ ನೈದಿತು ಸಮೀಪದಲಿದ್ದರಿರದೋರು || ೧೫೫ ||

ಆಪರಬ್ರಹ್ಮನಲಿ ತ್ರಿಜಗ
ದ್ವ್ಯಾಪಕತ್ವ ನಿಯಾಮಕತ್ವ
ಸ್ಥಾಪಕತ್ವವಶತ್ವ ಈಶತ್ವಾದಿ ಗುಣಗಳಿಗೆ
ಲೋಪವಿಲ್ಲೇಕಪ್ರಕಾರ ಸ್ವ
ರೂಪವೆನಿಪವು ಸರ್ವಕಾಲದಿ
ಪೋಷವಲ್ಲವು ಜೀವರಿಗೆದಾಸತ್ವದೋಷಾದಿ || ೧೫೬ ||

ನಿತ್ಯನೂತನ ನಿರ್ವಿಕಾರ ಸು
ಹೃತ್ತಮಪ್ರಣವಸ್ಥ ವರ್ಣೋ
ತೃಪ್ತಿಕಾರಣ ವಾಙ್ಮನೋಮಯ ಸಾಮಗಾನರತ
ದತ್ತಕಪಿಲಹಯಾಸ್ಯರೂಪದಿ
ಪೃತ್ಪೃಥಕುಜೀವರೊಳಗಿದ್ದು ಪ್ರ
ವರ್ತಿಸುವನವರವರ ಯೋಗ್ಯತೆ ಕರ್ಮವನುಸರಿಸಿ || ೧೫೭ ||

ಶ್ರುತಿಗಳಾತನಮಾತು ವಿಮಲ
ಸ್ಮೃತಿಗಳಾತನಶಿಕ್ಷೆ ಜೀವ
ಪ್ರತತಿ ಪ್ರಕೃತಿಗಳೆರಡುಪ್ರತಿಮೆಗಳೆನಿಸಿಕೊಳುತಿಹವು
ಇತರ ಕರ್ಮಗಳೆಲ್ಲ ಲಕುಮಿ
ಪತಿಗೆ ಪೂಜೆಗಳೆಂದು ಸ್ಮರಿಸುತ
ಚತುರವಿಧ ಪುರುಷಾರ್ಥಗಳ ಬೇಡದಿರು ಸ್ವಪ್ನದಲಿ ॥ ೧೫೮ ॥

ಭೂತಳಾಧಿಪನಾಜ್ಞಾಧಾರಕ
ದೂತರಿಗೆ ಸೇವಾನುಸಾರದಿ
ವೇತನವಕೊಟ್ಟವರ ಸಂತೋಷಿಸುವತೆರನಂತೆ
ಮಾತರಿಶ್ವ ಪ್ರಿಯನು ಪರಮ
ಪ್ರೀತಿಪೂರ್ವಕ ಸದ್ಗುಣಂಗಳ
ಗಾಥಕರ ಸಂತೋಷಪಡಿಸುವನಿಹಪರಂಗಳಲಿ ॥ ೧೫೯ ॥

ಧನವಸಂಪಾದಿಸುವಪ್ರದ್ರಾ
ವಣಿಕರಂದದಿ ಕೋವಿದರ ಮನೆ
ಮನೆಗಳಲಿ ಸಂಚರಿಸು ಶಾಸ್ತ್ರಶ್ರವಣಕೋಸುಗದಿ
ಮನನಗೈದುಪದೇಶಿಸುತದು
ರ್ಜನರಕೂಡಾಡದಿರು ಸ್ವಪ್ನದಿ
ಪ್ರಣತಕಾಮದಕೊಡುವಸೌಖ್ಯವನಿಹಪರಂಗಳಲಿ ॥ ೧೬೦ ॥

ಯುಕ್ತಿಮಾತುಗಳಲ್ಲ ಶ್ರುತಿ ಸ್ಮೃ
ತ್ಯುಕ್ತಮಾತುಗಳಿವು ವಿಚಾರಿಸೆ
ಮುಕ್ತಿಗಿವು ಸೋಪಾನವೆನಿಪವು ಪ್ರತಿ ಪ್ರತೀ ಪದವು
ಭಕ್ತಿಪೂರ್ವಕ ಪಠಿಸುವವರಿಗೆ
ವ್ಯಕ್ತಗೊಳಿಸಿಸ್ವರೂಪಸುಖವನಿ
ರಕ್ತರನು ಮಾಡುವನುಭವಭಯದಿಂದ ಬಹುರೂಪ ॥ ೧೬೧ ॥

ಆದರುಶವನು ವಿಗತಾಕ್ಷಭಾಷಾ
ಭೇದದಿಂದಲಿ ಕರೆಯಲದನು ನಿ
ಷೇಧಗೈದವಲೋಕಿಸದೆ ಬಿಡುವರೆ ವಿವೇಕಿಗಳು
ಮಾಧವನ ಗುಣಪೇಳ್ವ ಪ್ರಾಕೃತ
ವಾದರೆಯು ಸರಿಕೇಳಿ ಪರಮಾ
ಹ್ಲಾದಬಡದಿಪ್ಪರೆ ನಿರಂತ ರಬಲ್ಲ ಕೋವಿದರು ‖ ೧೬೨ ‖

ಭಾಸ್ಕರನಮಂಡಲವಕಂಡು ನ
ಮಸ್ಕರಿಸಿವೋದಿಸದೆ ದ್ವೇಷದಿ
ತಸ್ಕರನು ನಿಂದಿಸಲು ಕುಂದಹುದೇ ದಿನಾಕರಗೆ
ಸಂಸ್ಕೃತವಿದಲ್ಲೆಂದು ಕುಹಕಿ ತಿ
ರಸ್ಕರಿಸಲೇನಹುದು ಭಕ್ತಿ ಪು
ರಸ್ಕರದಿ ಕೇಳ್ವರಿಗೆ ಒಲಿವನುಪುಷ್ಕರಾಕ್ಷಸಖ ‖ ೧೬೩ ‖

ಈ ಸಮಸ್ತಜಗತ್ತು ಈಶಾ
ವಾಸ್ಯವೆನಿಪುದು ಕಾರ್ಯರೂಪವು
ನಾಶವಾದರುಸತ್ಯವೇಸರಿ ಕಾರಣ ಪ್ರಕೃತಿ
ಶ್ರೀಶಗೆ ಜಡಪ್ರತಿಮೆಯೆನಿಪುದು
ಮಾಸದೊಮ್ಮೆಗು ಸನ್ನಿಧಾನವು
ವಾಸವಾಗಿಹನಿತ್ಯಸಾಲಿಗ್ರಾಮದೋಪಾದಿ ‖ ೧೬೪ ‖

ಲೋಕಬಂಧುಲೋಕನಾಥ ವಿ
ಶೋಕಭಕ್ತರ ಶೋಕನಾಶನ
ಶ್ರೀಕರಾರ್ಚಿತಸೋಕದಂದದಲಿಪ್ಪ ಸರ್ವರೊಳು
ಸಾಕುವನು ಸಜ್ಜನರ ಪರಮ ಕೃ
ಪಾಕರೇಶ ಪಿನಾಕಿ ಸನ್ನುತ
ಸ್ವೀಕರಿಸುವಾನತರು ಕೊಟ್ಟ ಸಮಸ್ತ ಕರ್ಮಗಳ ‖ ೧೬೫ ‖

ಆ ಹಿತಪ್ರತಿಮೆಗಳೆನಿಸುವವು
ದೇಹ ಗೇಹಾಪತ್ಯಸತಿಧನ
ಲೋಹಕಾಷ್ಠಶಿಲಾಮೃದಾತ್ಮಕವಾದ ದ್ರವ್ಯಗಳು
ಸ್ನೇಹದಲಿ ಪರಮಾತ್ಮನೆನಗಿ
ತ್ತೀಹನೆಂದರಿದನುದಿನದಿಸ
ನ್ಮೋಹಕೊಳಗಾಗದಲೆ ಪೂಜಿಸು ಸರ್ವನಾಮಕನ ॥ ೧೬೬ ॥

ವಂಶಬಾಗಲು ಬೆಲೆಯ ಕಂಡು ನ
ರಾಂಸದಲಿ ಶೋಭಿಪುದು ಬಾಗದ
ವಂಶ ಪಾಶದಿ ಕಟ್ಟಿ ಏರುವ ಡೊಂಬಮಸ್ತಕಕೆ
ಕಂಸಮರ್ದನ ದಾಸರಿಗೆ ನಿ
ಸ್ಸಂಶಯದಿ ವಂದಿಸದೆ ತಾವಿ
ದ್ವಾಂಸನೆಂದು ಅಹಂಕರಿಸೆ ಭವಗುಣದಿ ಬಂಧಿಸುವ ॥ ೧೬೭ ॥

ಶ್ರೀನಿಕೇತನ ತನ್ನವರ ದೇ
ಹಾನುಬಂಧಿಗಳಂತೆ ಅವ್ವವ
ಧಾನದಲಿ ಪೊಂದಿಪ್ಪ ಸರ್ವದ ಸರ್ವಕಾಮದನು
ಏನುಕೊಟ್ಟದ ಭುಂಜಿಸುತ ಮ
ದ್ದಾನೆಯಂದದಿ ಸಂಚರಿಸು ಮ
ತ್ತೀನಬೇಡದೆ ಭಜಿಸುತಿರು ಅವನಂಘ್ರಿಕಮಲಗಳ ॥ ೧೬೮ ॥

ಈ ಸಮಸ್ತಜಗತ್ತಿನೊಳಗಾ
ಕಾಶದೋಲಿರುತಿಪ್ಪ ವ್ಯಾಪ್ತಾ
ವೇಶವವತಾರಾಂತರಾತ್ಮಕನಾಗಿ ಪರಮಾತ್ಮ
ನಾಶರಹಿತ ಜಗತ್ತಿನೊಳಗವ
ಕಾಶದನು ತಾನಾಗಿ ಯೋಗೀ
ಶಾಶಯಃಸ್ಥಿತ ತನ್ನೊಳೆಲ್ಲರನಿಟ್ಟು ಸಲಹುವನು ॥ ೧೬೯ ॥

ಊರ್ಮಿಗಳವ್ನೋಲಿಪ್ಪಕರ್ಮ ವಿ
ಕರ್ಮಜನ್ಯ ಫಲಾಫಲಂಗಳ
ನಿರ್ಮಲಾತ್ಮನು ಮಾಡಿಮಾಡಿಸಿ ಉಂಡುಣಿಸುತಿಪ್ಪ
ನಿರ್ಮಮ ನಿರಾಮಯ ನಿರಾಶ್ರಯ
ಧರ್ಮವಿದ್ಧರ್ಮಾತ್ಮಧರ್ಮಗ
ದುರ್ಮತೀಜನರೊಲ್ಲನಪ್ರತಿಮಲ್ಲ ಶ್ರೀನಲ್ಲ || ೧೭೦ ||

ಪುಸ್ತಕಗಳವಲೋಕಿಸುತ ಮಂ
ತ್ರಸ್ತುತಿಗಳನಲೇನು ರವಿಯುದ
ಯಾಸ್ತಮಯ ಪರಿಯಂತ ಜಪತಪ ಮಾಡಿ ಫಲವೇನು
ಹೃತ್ಸ್ಥಪರಮಾತ್ಮನೆ ಸಮಸ್ತಾ
ವಸ್ಥೆಗಳೊಳಿದ್ದೆಲ್ಲರೊಳಗೆ ನಿ
ರಸ್ತ್ರಕಾಮನು ಮಾಡಿಮಾಡಿಪನೆಂದು ತಿಳಿಯದವ || ೧೭೧ ||

ಮದ್ಯಭಾಂಡವದೇವನದಿಯೊಳ
ಗದ್ದಿ ತೊಳೆಯಲು ನಿತ್ಯದಲಿ ಪರಿ
ಶುದ್ಧವಹದೆ ಎಂದಿಗಾದರು ಹರಿಪದಾಬ್ಜಗಳ
ಬುದ್ಧಿಪೂರ್ವಕ ಭಜಿಸದವಗೆ ವಿ
ರುದ್ಧವೆನಿಸುವವೆಲ್ಲ ಕರ್ಮಸ
ಮೃದ್ಧಿಗಳು ದುಃಖವನೆ ಕೊಡುತಿಹವಧಮಜೀವರಿಗೆ || ೧೭೨ ||

ಭಕ್ತಿಪೂರ್ವಕವಾಗಿ ಮುಕ್ತಾ
ಮುಕ್ತನಿಯ್ಯಾಮಕನ ಸರ್ವೋ
ದ್ರಿಕ್ತ ಮಹಿಮೆಗಳನವರತ ಕೊಂಡಾಡು ಮರೆಯದಲೆ
ಸಕ್ತನಾಗದೆ ಲೋಕವಾರ್ತೆ ಪ್ರ
ಸಕ್ತಿಗಳನೀಡಾಡಿ ಶ್ರುತಿ ಸ್ಮೃ
ತ್ಯುಕ್ತಕರ್ಮವ ಮಾಡುತಿರು ಪರಿಯಾಜ್ಞೆಯೆಂದರಿದು || ೧೭೩ ||

ಲೋಪವಾದರು ಸರಿಯೆ ಕರ್ಮಜ
ಪಾಪಪುಣ್ಯಗಳೆರಡು ನಿನ್ನನು
ಲೇಪಿಸವು ನಿಷ್ಕಾಮಕನು ನೀನಾಗಿ ಮಾಡುತಿರೆ
ಸೌಪರಣಿವರವಹನು ನಿನ್ನ ಮ
ಹಾಪರಾಧಗಳೆಣಿಸದಲೆ ಸ್ವ
ರ್ಗಾಪವರ್ಗದೊಳಿಟ್ಟು ಸಲಹುವ ಸತತ ಸುಖಸಾಂದ್ರ ॥ ೧೭೪ ॥

ನಿರ್ಮಲನು ನೀನಾಗಿ ಕರ್ಮವಿ
ಕರ್ಮಗಳನು ನಿರಂತರದಲಿ ಸು
ಧರ್ಮನಾಮಕಗರ್ಪಿಸುತ ನಿಷ್ಕಲುಷ ನೀನಾಗು
ಭರ್ಮಗರ್ಭನ ಜನಕ ದಯದಲಿ
ದುರ್ಮತಿಗಳನು ಕೊಡದೆ ತನ್ನಯ
ಹರ್ಮ್ಯದೊಳಗಿಟ್ಟಿಲ್ಲ ಕಾಲದಿ ಕಾವ ಕೃಪೆಯಿಂದ ॥ ೧೭೫ ॥

ಕಲ್ಪಕಲ್ಪದಿ ಶರಣಜನವರ
ಕಲ್ಪವೃಕ್ಷನು ತನ್ನ ನಿಜ ಸಂ
ಕಲ್ಪದನುಸಾರದಲಿ ಕೊಡುತಿಪ್ಪನು ಫಲಾಫಲವ
ಅಲ್ಪಸುಖದಾಪೇಕ್ಷೆಯಿಂದ ಹಿ
ತಲ್ಪನಾರಾಧಿಸದಿರೆಂದಿಗು
ಶಿಲ್ಪಕನ ಕೈಸಿಲ್ಕಿದಾಶಿಲೆಯಂತೆ ಸಂತೈಪ ॥ ೧೭೬ ॥

ದೇಶಭೇದಾಕಾಶದಂದದಿ
ವಾಸುದೇವನು ಸರ್ವಭೂತ ನಿ
ವಾಸನೆನಿಸಿ ಚರಾಚರಾತ್ಮಕನೆಂದು ಕರೆಸುವನು
ದ್ವೇಷಸ್ನೇಹೋದಾಸಿನಗಳಿ
ಳ್ಳೀಶರೀರಗಳೊಳಗೆ ಅವರೋ
ಪಾಸನೆಗಳಂದದಲಿ ಫಲವೀವನು ಪರಬ್ರಹ್ಮ ॥ ೧೭೭ ॥

ಸಂಚಿತಾಗಾಮಿಗಳ ಕರ್ಮವಿ
ರಿಂಚಿಜನಕನ ಭಜಿಸೆ ಕೆಡುವವು
ಮಿಂಚಿನಂದದಿ ಪೊಳೆವ ಪುರುಷೋತ್ತಮ ಹೃದಂಬರದಿ
ವಂಚಿಸುವ ಜನರೊಲ್ಲ ಶ್ರೀವ
ತ್ಸಾಂಚಿತಸ್ಸದ್ವಕ್ಷತಾನಿ
ಷ್ಕಿಂಚನ ಜನಪ್ರೀಯ ಸುರಮುನಿಗೇಯ ಶುಭಕಾಯ || ೧೭೮ ||

ಕಾಲದ್ರವ್ಯಸುಕರ್ಮಶುದ್ಧಿಯ
ಪೇಳುವರು ಅಲ್ಪರಿಗೆ ಇವು ನಿ
ರ್ಮೂಲಗೈಸುವವಲ್ಲ ಪಾಪಗಳೆಲ್ಲಕಾಲದಲಿ
ತೈಲಧಾರೇಯಂತವನಪದ
ವ್ಯೋಲಯಿಸಿ ತುತಿಸದಲೆ ನಿತ್ಯದಿ
ಬಾಲಿಶರುಕರ್ಮಾದಿಗಳೆ ತಾರಕವೆನುತಲಿರುತಿಹರು || ೧೭೯ ||

ಕಮಲಸಂಭವ ಶರ್ವಶಕ್ರಾ
ದ್ಯಮರರೆಲ್ಲರು ಇವನ ದುರತಿ
ಕ್ರಮಮಹಿಮೆಗಳ ಮನವಚನದಿಂ ಪ್ರಾಂತಗಾಣದಲೆ
ಶ್ರಮಿತರಾಗಿ ಪದಾಬ್ಜಕಲ್ಪ
ದ್ರುಮನೆಳಲನಾಶ್ರೈಸಿ ಲಕ್ಷ್ಮೀ
ರಮಣ ಸಂತೈಸೆಂದು ಪ್ರಾರ್ಥಿಪರತಿಭಕುತಿಯಿಂದ || ೧೮೦ ||

ಕ್ಷೋಣಿಪತಿಸುತನೆನಿಸಿ ಕೈದು
ಗ್ಗಾಣಿಗೊಡ್ಡುವ ತೆರದಿ ಸುಮನಸ
ಧೇನು ಮನೆಯೊಳಗಿರಲು ಗೋಮಯ ಬಯಸುವಂದದಲಿ
ವೇಣುಗಾನಪ್ರೀಯನಹಿಕ ಸು
ಖಾನುಭವ ಬೇಡದಲೆ ಲಕುಮಿ
ಪ್ರಾಣನಾಥನ ಪಾದ ಭಕುತಿಯ ಬೇಡು ಕೊಂಡಾಡು || ೧೮೧ ||

ಶ್ರೀ ಮನೋರಮ ಮೇರು ತ್ರಿಕ ಕು
ದ್ಧಾಮ ಸತ್ಕಲ್ಯಾಣಗುಣ ನಿ
ಸ್ಸೀಮ ಪಾವನನಾಮ ದಿವಿಜೋದ್ದಾಮ ರಘುರಾಮ
ಪ್ರೇಮಪೂರ್ವಕ ನಿತ್ಯ ತನ್ನ ಮ
ಹಾಮಹಿಮೆಗಳ ತುತಿಸುವರಿಗೆ ಸು
ಧಾಮಗೊಲಿದಂದದಲಿ ಅಖಿಳಾರ್ಥಗಳ ಕೊಡುತಿಪ್ಪ ॥ ೧೮೨ ॥

ಶ್ರುತಿಪುರಾಣಸಮೂಹದೊಳು ಭಾ
ರತೆಪ್ರತಿ ಪ್ರತಿಪದಗಳೊಳು ನಿ
ರ್ಜಿತನ ಗುಣರೂಪಗಳೆ ಪುಡುಕುತ ಪರಮ ಹರುಷದಲಿ
ಮತಿಯುತರು ಪ್ರತಿದಿವಸ ಸಾರ
ಸ್ವತಸಮುದ್ರದಿ ಶಫರಿಯಂದದಿ
ಸತತ ಸಂಚರಿಸುವರು ಕಾಣುವ ಲವಲವಿಕೆಯಿಂದ ॥ ೧೮೩ ॥

ಮತ್ಸ್ಯಕೇತನ ಜನಕ ಹರಿ ಶ್ರೀ
ವತ್ಸಲಾಂಛನ ನಿಜಶರಣಜನ
ವತ್ಸಲವರಾರೋಹ ವೈಕುಂಠಾಲಯ ನಿವಾಸಿ
ಚಿತ್ಸುಖಪ್ರದ ಸಲಹೆನಲು ಗೋ
ವತ್ಸ ಧ್ವನಿಗೊದಗುವ ತೆರದಿ ಪರ
ಮೋತ್ಸವದಿ ಬಂದೊದಗುವನು ನಿರ್ಮತ್ಸರರ ಬಳಿಗೆ ॥ ೧೮೪ ॥

ಸೂರಿಗಳಿಗೆ ಸಮೀಪಗ ದುರಾ
ಚಾರಿಗಳಿಗೆಂದೆಂದು ದೂರಾ
ದ್ದೂರತರ ದುರ್ಲಭನೆನಿಸುವನು ದ್ವೇಷಿಸಂಕುಲಕೆ
ಸಾರಿಸಾರಿಗೆ ನೆನೆವವರ ಸಂ
ಸಾರವೆಂಬ ಮಹೋರಗಕೆ ಸ
ರ್ಪಾರಿಯೆನಿಸಿ ಸದಾಸುಸೌಖ್ಯವನೀವ ಸುಜನರಿಗೆ ॥ ೧೮೫ ॥

ಶಕ್ತರೆನಿಸುವರಿಲ್ಲ ಹರಿವ್ಯತಿ
ರಿಕ್ತಸುರಗಣದೊಳಗೆ ಸರ್ವೋ
ದ್ರಿಕ್ತನೆನಿಸುವ ಸರ್ವರಿಂದಲಿ ಸರ್ವಕಾಲದಲಿ
ಭಕ್ತಿಪೂರ್ವಕವಾಗಿ ಅನ್ಯಪ್ರ
ಸಕ್ತಿಗಳನೀಡಾಡಿ ಪರಮಾ
ಸಕ್ತನಾಗಿರು ಹರಿಕಥಾಮೃತ ಪಾನವಿಷಯದಲಿ ॥ ೧೮೬ ॥

ಬಲ್ಲೆನೆಂಬುವರಿಲ್ಲವೀತನ
ನೊಲ್ಲೆನೆಂಬುವರಿಲ್ಲ ಲೋಕದ
ಳಿಲ್ಲದಿಹ ಸ್ಥಳವಿಲ್ಲವೈಯಜ್ಞಾತ ಜನರಿಲ್ಲ
ಬೆಲ್ಲದಚ್ಚಿನ ಬೊಂಬೆಯಂದದ
ಲೆಲ್ಲರೊಳಗಿರುತಿಪ್ಪ ಶ್ರೀಭೂ
ನಲ್ಲಗಿವಗೆಣೆಯಿಲ್ಲವಪ್ರತಿಮಲ್ಲ ಜಗಕೆಲ್ಲ ॥ ೧೮೭ ॥

ಶ್ರೀಲಕುಮಿವಲ್ಲಭಗೆ ಸಮ ಕರು
ಣಾಳುಗಳ ನಾಕಾಣೆನೆಲ್ಲಿ ಕು
ಚೇಲನವಲಿಗೆ ಮೆಚ್ಚಿಕೊಟ್ಟನು ಸಕಲಸಂಪದವ
ಕೇಳಿದಾಕ್ಷಣ ವಸ್ತ್ರಗಳ ಪಾಂ
ಚಾಲಿಗಿತ್ತನು ದೈತ್ಯಸುದರವ
ಸೀಳಿ ಸಂತೈಸಿದನು ಪ್ರಹ್ಲಾದನ ಕೃಪಾಸಾಂದ್ರ ॥ ೧೮೮ ॥

ದೇವಶರ್ಮಾಹ್ವಯ ಕುಟುಂಬಕೆ
ಜೀವನೋಪಾಯವನು ಕಾಣದೆ
ದೇವದೇವಶರಣ್ಯ ರಕ್ಷಿಸು ರಕ್ಷಿಸೆನೆ ಕೇಳಿ
ತಾನೊಲಿದು ಪಾಲಿಸಿದ ಸೌಖ್ಯ ಕೃ
ಪಾವಲೋಕನದಿಂದಲೀತನ
ಸೇವಿಸದೆ ಸೌಖ್ಯವನು ಬಯಸುವರೆಪ್ಪ ಮಾನವರು ॥ ೮೯ ॥

ಶ್ರೀನಿವಾಸನ ಪೋಲ್ವಕರುಣಿಗ
ಳೀನಳಿನಜಾಂಡದೊಳು ಕಾಣೆ ಪ್ರ
ವೀಣರಾದವರರಸಿ ನೋಳ್ಪುದು ಶೃತಿಪುರಾಣದೊಳು
ದ್ರೋಣಭೀಷ್ಮಕೃಪಾದಿಗಳು ಕುರು
ಸೇನೆಯೊಳಗಿದಲವರವಗುಣಗ
ಳೇನುನೋಡದೆ ಪಾಲಿಸಿದ ಪರಮಾತ್ಮ ಪರಗತಿಯು ॥ ೮೯೦ ॥

ಚಂಡವಿಕ್ರಮ ಚಕ್ರಶಂಖವ
ತೋಂಡಮಾನ ನೃಪಾಲಗಿತ್ತನು
ಭಾಂಡಕಾರಕ ಭೀಮನ ಮೃದಾಭರಣಗಳಿಗೊಲಿದ
ಮಂಡೆವೊಡೆದಾಕಾಶರಾಜನ
ಹೆಂಡತಿಯು ನುಡಿಗೇಳಿ ಮಗಳಿಗೆ
ಗಂಡನೆನಿಸಿದ ಗಹನಮಹಿಮ ಗದಾಬ್ಜಧರಪಾಣಿ ॥ ೮೯೧ ॥

ಶ್ರೀಕರಾರ್ಚಿತ ಪಾದಪಲ್ಲವ
ಗೋಕುಲದ ಗೊಲ್ಲತಿಯರೊಲಿಸಿದ
ಪಾಕಶಾಸನ ಪೂಜ್ಯಗೋಗೋವತ್ಸಗಳ ಕಾಯ್ದ
ಓಕರಿಸಿ ಕುರುಪತಿಯ ಭೋಜನ
ಸ್ವೀಕರಿಸಿದನು ವಿದುರನೌತಣ
ಬಾಕುಲಿಕನಂಪದಲಿ ತೋರ್ದನು ಭಕ್ತವತ್ಸಲನು ॥ ೮೯೨ ॥

ಶ್ರೀವಿರಿಂಚಾದ್ಯಮರನುತ ನಾ
ನಾವತಾರವಮಾಡಿ ಸಲಹಿದ
ದೇವತೆಗಳನು ಋಷಿಗಳನು ಕ್ಷಿತಿಪರನು ಮಾನವರ
ಸೇವೆಗಳ ಕೈಕೊಂಡು ಫಲಗಳ
ನೀವ ನಿತ್ಯಾನಂದಮಯ ಸು
ಗ್ರೀವ ಧೃವ ಮೊದಲಾದ ಭಕ್ತರಿಗಿತ್ತ ಪುರುಷಾರ್ಥ ॥ ೮೯೩॥

ಈ ವಸುಂಧರೆಯೊಳಗೆ ಶ್ರೀಭೂ
ದೇವಿಯುರಸನ ಸುಗುಣಕರ್ಮಗ
ಳಾವಬಗೆಯಿಂದಾದೊಡಾಗಲಿ ಕೀರ್ತಿಸುವ ನರನ
ಕಾವ ಕಮಲದಳಾಯತಾಕ್ಷ ಕೃ
ಪಾವಲೋಕನದಿಂದ ಕಪಿಸು
ಗ್ರೀವಗೊಲಿದಂದದಲಿ ಒಲಿದಭಿಲಾಷೆ ಪೂರೈಪ ॥ ೧೯೪ ॥

ವಿಜಯಸಾರಥಿಯೆಂದು ಗರುಡ
ಧ್ವಜನ ಮೂರ್ತಿಯ ಭಕ್ತಿಪೂರ್ವಕ
ಭಜಿಸುತಿಪ್ಪ ಮಹಾತ್ಮರಿಗೆ ಸರ್ವತ್ರದಲಿ ಒಲಿದು
ವಿಜಯವನು ತಾನಾಗಿ ಸಲಹುವ
ಭುಜಗಭೂಷಣ ಪೂಜ್ಯಚರಣಾಂ
ಬುಜ ವಿಭೂತಿಯ ಭುವನಮೋಹನ ರೂಪ ನಿರ್ಲೇಪ ॥ ೧೯೫ ॥

ಝಲ್ಲಡಿಯ ನೆರಳಂತೆ ತೋರ್ಪುದು
ಎಲ್ಲಕಾಲದಿ ಭವದ ಸೌಖ್ಯವು
ಎಲ್ಲಿ ಪೊಕ್ಕರು ಬಿಡದೆ ಬೆಂಬೆತ್ತಿಹುದು ಜೀವರಿಗೆ
ಒಲ್ಲೆನೆಂದರೆ ಬಿಡದು ಹರಿ ನಿ
ರ್ಮಾಲ್ಯ ನೈವೇದ್ಯವನು ಭುಂಜಿಸಿ
ಬಲ್ಲವರ ಕೂಡಾಡು ಭವದುಃಖಗಳನೀಡ್ಯಾಡು ॥ ೧೯೬ ॥

ಏನು ಕರುಣವೊ ತನ್ನವರಲಿ ದ
ಯಾನಿಧಿಗೆ ಸದ್ಭಕ್ತಜನರತಿ
ಹೀನಕರ್ಮವ ಮಾಡಿದರು ಸರಿ ಸ್ವೀಕರಿಸಿ ಪೊರೆವ
ಪ್ರಾಣಿಹಿಂಸಕ ಲುಬ್ಧಕಗೆ ಸು
ಜ್ಞಾನಭಕ್ತಿಗಳಿತ್ತು ದಶರಥ
ಸೂನು ವಾಲ್ಮಿಕ ಋಷಿಯ ಮಾಡಿದ ಪರಮ ಕರುಣಾಳು ॥ ೧೯೭ ॥

ಮೂಢಮಾನವನೆಲ್ಲ ಕಾಲದಿ
ಬೇಡಿಕೊಂಬಿನಿತೆಂದು ದೈನ್ಯದಿ
ಬೇಡದಂದದಿ ಮಾಡು ಪುರುಷಾರ್ಥಗಳ ಸ್ವಪ್ನದಲಿ
ನೀಡುವೊಡೆ ನಿನ್ನಮಲಗುಣ ಕೊಂ
ಡಾಡಿಹಿಗ್ಗುವ ಭಾಗವತರೊಡ
ನಾಡಿಸೆನ್ನನು ಜನ್ಮ ಜನುಮಗಳಲ್ಲಿ ಮರೆಯದಲೆ ॥ ೧೯೮ ॥

ಬಂಧಮೋಕ್ಷಪ್ರದನ ಜ್ಞಾನವು
ಮಂದಮತಿಗಳಿಗೆಂದು ದೊರೆವುದು
ಬಿಂದುಮಾತ್ರಸುಖಾನುಭವ ಪರ್ವತಕೆ ಸಮದುಃಖ
ಎಂದುತಿಳಿಯದಲನ್ಯ ದೈವಗ
ಳಿಂದ ಸುಖವಾಪೇಕ್ಷಿಸುವರು ಮು
ಕುಂದನಾರಾಧನೆಯ ಬಿಟ್ಟವಗುಂಟೆ ಮುಕ್ತಿಸುಖ ॥ ೧೯೯ ॥

ಶ್ರೀ ಮುಕುಂದನ ಮೂರ್ತಿಗಳ ಸೌ
ದಾಮಿನಿಯವೋಲ್ ಹೃದಯವಾರಿಜ
ವ್ಯೋಮಮಂಡಲ ಮಧ್ಯದಲಿ ಕಾಣುತಲಿ ಮೋದಿಸುವ
ಆ ಮನುಷ್ಯೋತ್ತಮರ ಪದಯುಗ
ತಾಮರಸಗಳಿಗೆರಗುವೆ ಸದಾ
ಕಾಮಿತಾರ್ಥಗಳಿತ್ತು ಸಲಹಲಿ ಪ್ರಣತ ಜನತತಿಯ ॥ ೨೦೦ ॥

ಬಿಟ್ಟಿಗಳನೆವದಿಂದಡಾಗಲಿ
ಹೊಟ್ಟೆಗೋಸುಗ ಮಾದಡಾಗಲಿ
ಕೆಟ್ಟರೋಗ ಪ್ರಯುಕ್ತವಾಗಲಿ ಅಣಕದಿಂದೊಮ್ಮೆ
ನಿಟ್ಟುಸುರಿನಿಂಬಾಯ್ದೆರೆದು ಹರಿ
ವಿಠಲಾಸಲಹೆಂದೆನಲುಕೈ
ಗೊಟ್ಟು ಕಾವ ಕೃಪಾಳು ಸಂತತ ತನ್ನ ಭಕತರನ ॥ ೨೦೧ ॥

ಈ ಕಥಾಮೃತಪಾನ ಸುಖವಿ
ವೇಕಿಗಳಿಗಲ್ಲದಲೆ ವಿಷಯ
ವ್ಯಾಕುಲ ಕುಚಿತ್ತರಿಗೆ ದೊರೆವುವೆ ಯಾವಕಾಲದಲಿ
ಲೋಕವಾರ್ತೆಯ ಬಿಟ್ಟು ಇದನವ
ಲೋಕಿಸುತ ಮೋದಿಪರಿಗೊಲಿದು ಕೃ
ಪಾಕರ ಜಗನ್ನಾಥ ವಿಠಲ ಕಾಯ್ವ ಕರುಣದಲಿ ‖ ೨೦೨ ‖

ಮೂರು ಕಾಲದಲಿ ತುತಿಸೆ ಶ
ರೀರವಾಙ್ಮನಶುದ್ಧಿ ಮಾಳ್ಪುದು
ದೂರಗೈಸುವದಖಿಳ ಪಾಪ ಸಮೂಹ ಪ್ರತಿದಿನದಿ
ಚೋರಭಯ ರಾಜಭಯ ನಕ್ರಜ
ಮೂರು ಶಸ್ತ್ರ ಜಲಾಗ್ನಿ ಭೂತಮ
ಹೋರಗಜ್ವರನರಕ ಭಯ ಸಂಭವಿಸದೆಂದೆಂದು ‖ ೨೦೩ ‖

ಜಯ ಜಯತು ತ್ರಿಜಗದ್ವಿಲಕ್ಷಣ
ಜಯ ಜಯತು ಜಗದೇಕಕಾರಣ
ಜಯ ಜಯತು ಜಾನಕೀರಮಣನಿರ್ಗತಜರಾಮರಣ
ಜಯ ಜಯತು ಜಾಹ್ನವಿಜನಕಜಯ
ಜಯತು ದೈತ್ಯಕುಲಾಂತಕ ಭವಾ
ಮಯಹರ ಜಗನ್ನಾಥ ವಿಠಲ ಪಾಹಿಮಾಂಸತತ ‖ ೨೦೪ ‖

ಶ್ರೀರಾಮಕೃಷ್ಣ ಸುಭಾಷಿತಗಳು

ಇರುಳು ಬರೆತಾರೆಗಳು ಗಗನದಿ
ತರತರದಿ ಕಂಗೊಳಿಸುತಿರುವವು
ತರಣಿಯುದಯದಿ ನೋಡೆ ಕಾಣಸದಿಹವು ಅದರಂತೆ
ಧರೆಯ ಸಂಪದದೊಳಗೆ ಮೈಮರೆ
ದಿರುವವನು ಪರಮಾತ್ಮನಿರವನು
ಪರಿಕಿಸದಲಿರುತಿಹನು ಜ್ಞಾನಿಯು ನಿರುತಪರಿಕಿಪನು ॥ ೧ ॥

ಇಳೆಯಜನ ಸ್ವರ್ಣದೊಳು ಒಡವೆಯ
ಬಲುವಿಧದಿ ನಿರ್ಮಿಸುತನಾಮವ
ಹಲವು ಪರಿಯಲಿಪೇಳ್ದಡೆಯು ಆ ಹೇಮತಾನೊಂದೇ
ಉಳಿದ ಭಾಷೆಗಳಾದೊಡೆಯು ಆ
ಜಲಜನಾಭನ ಪೊಗಳುತಿರುವವು
ಸಲೆ ವಿಚಾರಿಸಿ ನೋಡೆ ಸರ್ವರಮಾತು ಸಮ್ಮತವು ॥ ೨ ॥

ನೀಲಪೀತವ ರಕ್ತವರ್ಣವ
ತಾಳಿರಂಜಿಪ ಓತಿಕಾಟದ
ವೋಲು ಸರ್ವೇಶ್ವರನು ಲೀಲೆಯ ತೋರಿಸುತ್ತಿಹನು
ಕೇಳಿ ಕೆಲವರು ಸಗುಣನೆಂಬರು
ಕೇಳಿ ನಿರ್ಗುಣನೆಂಬರಿಳೆಯೊಳು
ಪೇಳಿ ಸರ್ವವಬಲ್ಲೆನೆಂಬುವರುಂಟೆ ಧರೆಯೊಳಗೆ ॥ ೩ ॥

ಜಲಧಿಯೊಳಗಿಹಲೋಹ ಚುಂಬಕ
ಶಿಲೆಯು ಪರ್ವತ ಜಲಧಿಮಾರ್ಗದಿ
ಚಲಿಸುತಿಹ ನಾವೆಗಳ ಮೊಳೆಗಳ ಸೆಳೆದು ತಕ್ಷಣದಿ
ಹಲಗೆಗಳ ನೆಲ್ಲವನು ಅಗಲಿಸಿ
ಜಲದಿಮುಳುಗಿಪತೆರದಿ ಪರಮನ
ಒಲುಮೆದೊರೆತಾಕ್ಷಣದಿ ಜೀವನಗರುವ ಮರೆಯುವದು ॥ ೪ ॥

ಪರಶುಸೋಕಿದ ಲೋಹಸ್ವರ್ಣದ
ಪರಿಯತಾಳುವತೆರದಿ ಪರಮನ
ಚರಣರಜದಿಂ ನರನು ಮೊದಲು ಪವಿತ್ರನಾದವನು
ಮರಳಿ ಸಂಸ್ಕೃತಿಯೊಳಗಿರಲುಮೇಣ್
ಗಿರಿ ಅರಣ್ಯಗಳೊಳಗಿರಲು ತಾ
ಪರಮಪೂತಾತುಮ್ಮನೆಂದೆನಿಸುವನು ಸಂತತವು ॥ ೫ ॥

ಪರಶುಸೋಕಿದಕತ್ತಿ ಆಕೃತಿ
ಯಿರುವದಾದರು ಅಸಿಯತೆರದೊಳು
ಕೊರಳು ಕುಯ್ಯುವಶಕ್ತಿ ಅದಕಿರದಂತೆ ಧರೆಯೊಳಗೆ
ಪರಮನಂಘ್ರಿಯ ಬೆರೆದಮಾನವ
ನರನಪರಿ ಕಂಗೊಳಿಸುತಿದ್ದರು
ಪರರಿಗಪಕಾರವನು ಮಾಡೆ ಸಮರ್ಥನಾಗಿರನು ॥ ೬ ॥

ಹಾಲುನೀರೊಳು ಬೆರೆದಕಾಲಕು
ಹಾಲುನೀರಿನ ಭೇದತೋರದು
ಹಾಲಿನಿಂ ನವನೀತತೆಗೆದಿಡಲಾಗ ಜಗದೊಳಗೆ
ತೇಲುವಂದದಿ ಜ್ಞಾನಭವದೊಳು
ಬಾಳೆಬದುಕುವ ಬದ್ಧಜೀವರ
ಜಾಲದೊಳುತಾನಿರಲು ದುಷ್ಕರ್ಮಗಳು ಲೇಪಿಸವು ॥ ೭ ॥

ಮನೆಯೊಳಗೆ ಮಾನಿನಿಯು ಕೆಲಸವ
ನನುನಯದಿ ತಾಮಾಡುತಿಹಳಾ
ವನಿತೆ ಮಕ್ಕಳ ಪಡೆದ ಮೇಲ್ಮನೆಗೆಲಸ ಮರೆವಂತೆ
ಅನವರತ ವಿಷಯೋಪಭೋಗದಿ
ಮನುಜಭವದೊಳು ಮಗ್ನನಾಗಿರೆ
ಘನ ಸುಮಾರ್ಗವು ದೊರೆಯೆ ತ್ಯಜಿಸುವ ಸಕಲಕರ್ಮಗಳ ॥ ೮ ॥

ಇಳೆಯೊಳೈವಗೆ ಸಿದ್ಧರಿಹರದ
ರೊಳಗೆ ಕೆಲವರು ಸ್ವಪ್ನಸಿದ್ಧರು
ಕೆಲವರೆನಿಪರು ಮಂತ್ರಸಿದ್ಧರು ಹರಿಕೃಪಾಬಲದಿ
ಕೆಲಕೆಲರು ಹಠಸಿದ್ಧರಿರುವರು
ಕೆಲರು ಸುಕೃಪಾಸಿದ್ಧರಿವರೊಳು
ಕೆಲವರಿರುವರು ನಿತ್ಯಸಿದ್ಧರು ಲೋಕಪಾವನರು ॥ ೯ ॥

ವೇದಶಾಸ್ತ್ರಪುರಾಣತರ್ಕಗ
ಳೋದಿ ವಾದವಿವಾದಗೈಯುತ
ಹಾದಿಗಾಣದ ಕುರುಡರಂದದಿ ಬಳಲುತಿಹ ಜನರು
ಮೋದಮಯನನು ಕಂಡಮಾತ್ರದೊ
ಳಾದರದಿ ವೇದಾಂತಸಾರದ
ಸ್ವಾದವನು ಸವಿಯುತ್ತ ವಾದದ ಹಾದಿಗಡಿಯಿಡರು ॥ ೧೦ ॥

ಎಳೆಯ ತೆಂಗಿನಕಾಯ ಚಿಪ್ಪಲು
ಮೊಳೆಯು ಒಳಗಿಳಿಯುವುದು ಬಲಿತದ
ರೊಳಗೆ ವಾಟೆಯ ಬಿಟ್ಟು ಗಿಟಕಾಗಿರುವ ಕಾರಣದಿ
ಮೊಳೆಯು ತಾನೊಳಗಿಳಿಯದಿಹಪರಿ
ಇಳೆಯೊಳಿಹ ಜ್ಞಾನಿಗಳು ದೇಹದ
ಕಳವಳವ ಬಿಟ್ಟಿರುತ ಇತರರ ಸುಖವಬಯಸುವರು ॥ ೧೧ ॥

ಮನೆಯ ಮೇಲೇರುವನು ತಾನಿ
ಚ್ಛಣಿಗೆ ಮೆಟ್ಟಿಲ ಹತ್ತುವಂದದಿ
ಚನುಮಯನಬಳಿಗೈದ ಬಹುಸಾಧನಪಮಾರ್ಗವನು
ಜನರು ಅವಲಂಬಿಸುತಧರ್ಮವ
ದಿನದಿನದಿ ಆಚರಣೆಗೈವರು
ಕೊನೆಗೆಸೇರುವುವೊಂದೆ ತಾಣದಿ ಜೀವನಿಚಯಗಳು ॥ ೧೨ ॥

ಹಲವು ಮಕ್ಕಳ ಪಡೆದ ಮಾತೆಯು
ಕೆಲಸಗಳ ತಾಮಾಳ್ಪಕಾಲದಿ
ಮೆಲುವುದಕೆ ಮಕ್ಕಳಿಗೆ ತಿಂಡಿಯ ಕೊಡುತಲಾಟವನು
ಸೊಲಿವಿನಿಂದಲಿ ಆಡೆಬಿಡುವಳು
ಬಳಿಕ ಅದರೊಳಗೋರ್ವ ಹಸುಳೆಯು
ಅಳುತಿರಲು ತಾಬಂದು ಸಂತೈಸುವಳು ಅದರಂತೆ ॥ ೧೩ ॥

ಭವದಿ ಬಂದಿಹ ಮನುಜರೊಳಗಿ
ದ್ದವರೊಳೋರ್ವನು ಸ್ಮರಿಸಿ ಅಳುತಿರೆ
ತನಕರುಣದಲಿ ದೇವಮಾತೆಯು ತೆರದಿ ರಕ್ಷಿಪನು
ಭುವನಪಾಲನನೆನಿಪನೀತನು
ವಿವಿಧಜೀವರ ಮೊರೆಯನಾಲಿಸಿ
ತವಕದಿಂ ಬಂದೊದಗಿ ಸುಖಗಳನೀವ ಕರುಣಾಳು ॥ ೧೪ ॥

ಗಂಗೆಯೊಳು ಬೆಳೆದಿರುವ ಅಂತರ
ಗಂಗೆಯಿಂದಲಿ ಜಲವು ಜನಗಳ
ಕಂಗಳಿಗೆ ಕಾಣಿಸದೆ ಮರೆಯಾಗಿರುವ ತೆರನಂತೆ
ಮಂಗಳಾತ್ಮನು ಮಹಿಯೊಳಿದ್ದರು
ಕಂಗಳಿಗೆ ಕಾಣಿಸನು ಮಾಯಾ
ಸಂಗವರ್ಜಿತನಾಗೆ ತಾ ಕಂಗೊಳಿಪ ಭಕ್ತರಿಗೆ ॥ ೧೫ ॥

ಇಳೆಯ ಸತ್ವದ ಬಲದಿ ಮೊಳೆಯುತ
ಬೆಳೆದಿರುವ ಗಿಡಗಳಿಗೆ ಮಲಯಾ
ನಿಲವು ಬೀಸೆ ಸುಗಂಧವೃಕ್ಷವದಾಗುವಂದದಲಿ
ಬಲು ಸುಶೀಲಗಳುಳ್ಳ ಮನುಜರ
ಬಳಿಗೆ ಪರಮನ ದಯದ ಗಾಳಿಯು
ಸುಳಿಯಲಾಕ್ಷಣ ದಿವಿಜರಂತೆ ಪವಿತ್ರರೆನಿಸುವರು ‖ ೧೬ ‖

ಹಲವು ಬಣ್ಣದ ಅರಿವೆ ಚೀಲವ
ಹೊಲಿಸಿ ತಲೆದಿಂಬಿಡಲು ದಿಂಬಿನೊ
ಳಳವಡಿಸಿ ನೆಲೆಸಿರುವ ಅರಳೆಯದೊಂದೆ ಇರುವಂತೆ
ಕೆಲವು ಮನುಜರು ಕೆಂಪು ಕೆಲವರು
ಬಿಳುಪು ಕೆಲವರು ಕಪ್ಪು ಕೆಲವರು
ಚೆಲುವರಾದರು ಇರುವನೋರ್ವನೆ ಆತ್ಮನೆಂದೆನಿಸಿ ‖ ೧೭ ‖

ಶಿಷ್ಟರೊಳು ನೆಲೆಸಿರುವನಾದರು
ದುಷ್ಟವ್ಯಾಘ್ರದೊಳಿರುವ ದೇವನು
ದುಷ್ಟಕಾರ್ಯವ ಗೈವ ದುಷ್ಟಸ್ವಭಾವವನುಸರಿಸಿ
ಶಿಷ್ಟರೊಳು ದೇವೇಶ ತಾನು
ತ್ಕೃಷ್ಟ ಕರ್ಮವ ಮಾಳ್ಪನದರಿಂ
ದುಷ್ಟರೆಡೆಯೊಳು ನಿಲ್ಲಬಾರದು ಶಿಷ್ಟರಾದವರು ‖ ೧೮ ‖

ಹಾಲು ನೀರೊಳು ಬೆರೆಯುವಂದದಿ
ಖೂಳರೊಳು ಸುಜ್ಞಾನಿ ಬೆರೆಯಲು
ಮೇಲೆನಿಪ ಸುಜ್ಞಾನ ಭಕ್ತಿ ಸುಮಾರ್ಗ ಮೊದಲಾಗಿ
ಕಾಲಕ್ರಮದಲಿ ಅಳಿದು ಮುಂದಿನ
ಬಾಳು ಗೋಳಾಗುವದು ಸುಕೃತದ
ಏಳಿಗೆಯು ನಿರ್ಮೂಲವಾಗುವುದಿದಕೆ ತಡೆಯಿಲ್ಲ ‖ ೧೯ ‖

ಹಲವು ಜಲದೊಳು ದೇವನಿದ್ದರು
ಹೊಲಸು ಜಲ ಪ್ರಾಶನಕೆ ಬಾರದು
ಹಲವು ಸ್ಥಳದಲಿ ದೇವನಿದ್ದರು ನೋಡಲನುಚಿತವು
ಕೆಲವು ಜಲ ಸ್ನಾನಾರ್ಥಪಾನಕೆ
ಕೆಲವು ಜಲವಸ್ಪೃಶ್ಯ ಕಾರ್ಯಕೆ
ಕೆಲವು ಸ್ಥಳ ಶುಚಿ ಮೇಣ್ಕೆಲವಶುಚಿ ಸ್ಥಳಗಳೆನಿಸುವವು ॥ ೨೦ ॥

ಕೆರೆಯ ನೀರೊಳು ಬೆಳೆವ ಪಾಚಿಯು
ತೆರದಿ ವಿಷಯುದಿ ಬೆರೆದ ಮನುಜನು
ಧರೆಯ ಭೋಗ ಪ್ರತಿಷ್ಠೆ ಗೌರವದಿಂದ ಮೆರೆಯುವನು
ಹರಿವ ನೀರೊಳು ಪಾಚಿಯಿಲ್ಲದ
ನರಿಯುತಲಿ ಸುಜ್ಞಾನಿ ವಿಷಯುವ
ನಿರುಕಿಸದೆ ಪರಮಾರ್ಥರೂಪ ಪ್ರವಹದೊಳು ಚರಿಪ ॥ ೨೧ ॥

ದ್ಯುಮಣಿಮಂಡಲವೋಡಮುಸುಕಿದ
ಕ್ರಮದಿಪರಮನಮಾಯೆಮುಸುಕಿದೆ
ಅಮಮಮೇಡವುಪರಿಯೆದ್ಯುಮಣಿಯುಪೊಳೆವನದರಂತೆ
ತಮದಮೋಲಿಹಮಾಯೆಸರಿಯಲು
ಅಮಿತಮಹಿಮನುದಿವ್ಯತೇಜದಿ
ನಮಿಪರಿಗೆಕಂಗೊಳಿಸುತಲಿಪುರುಷಾರ್ಥಗಳಕೊಡುವ ॥ ೨೨ ॥

ನೀರಮೇಲಣಗುಳ್ಳೆತಾನದು
ನೀರಿನಿಂಪುಟ್ಟುತ್ತಮತ್ತಾ
ನೀರೊಳಗೆ ಅಳಿವಂತೆ ಜೀವಬ್ರಹ್ಮರಿರುತಿಹರು
ನೀರಿನೋಲ್ಪರಿಪೂರ್ಣಬ್ರಹ್ಮನು
ನೀರಗುಳ್ಳೆಯತೆರದಿ ಜೀವನು
ತೋರುವನು ಅಲ್ಪಾತ್ಮ ಅಸ್ವಾತಂತ್ರನೆಂದೆನಿಸಿ ॥೨೩॥

ವೇದಶಾಸ್ತ್ರಪುರಾಣವೇದಾಂ
ತಾದಿಗ್ರಂಥವು ಹಲವುಪರಿಯಲಿ
ಮೇದಿನಿಯುಜನರೋದಿಬಿಟ್ಟುಚ್ಛಿಷ್ಟವಾಗಿಹವು
ಆದಿಮಧ್ಯಾಂತಗಳು ಇಲ್ಲದ
ಗಾಧಮಹಿಮನವರ್ಣಿಸಲುವೇ
ದಾದಿನಿಚಯವು ಕಾಣದಾಯಿತು ವಾದವಿನ್ನೇನು ॥ ೨೪ ॥

ಜ್ಞಾನಭಕ್ತಿವಿರಕ್ತಿಯುಳ್ಳಮ
ಹಾನುಭಾವರ ವಿವಿಧಕರ್ಮಗ
ಳಾನುಪೂರ್ವಕ ಅರಿಯದಿಹ ಅಜ್ಞಾನಿಜಗದೊಳಗೆ
ಆನೆಮೇಲಿರುವವನಕಾಣುತ
ಶ್ವಾನಬೊಗಳುವತೆರದಿ ಬೊಗಳುವ
ಹೀನಮಾನವನೆಂದವನ ತ್ಯಜಿಸುವುದು ಮೌನದಲಿ ॥ ೨೫ ॥

ಧರೆಯ ವಿದ್ಯಾಬುದ್ಧಿಕಲಿಸುವ
ಧರೆಯೊಳುಪಗುರುವೆನಿಸಿಕೊಂಬನು
ಪರಮತತ್ವಾರ್ಥವನು ಶಿಷ್ಯನಿಗಾಗಿ ಬೋಧಿಸುತ
ಪರಿಪರಿಯಹೃದಯಾಂಧಕಾರವ
ಪರಿದುಪರಿಭವಹರಿಸಿ ಪರಮಾ
ದರದಿ ಪರಮನತೋರಿಕೊಡುವನು ಪರಮಗುರುವೆನಿಪ ॥ ೨೬ ॥

ಗುರುವಿನುಪದೇಶವನುಕೊಂಡವ
ಗುರುಚರಣಸೇವೆಯನುಗೈಯುತ
ಗುರುವಿನೊಳುಗುಣದೋಷವೆನಿಸಿದೆ ಗುರುವಿನಾಜ್ಞೆಯಲಿ
ಚರಿಸಿ ಇಹಪರದೊಳಗೆ ಸುಖಿಸುತ
ನಿರುತಧನ್ಯನು ಮಾನ್ಯನೆನಿಸುವ
ಗುರುವೆನಾತ್ಮಾಪಿತನು ಸರ್ವವು ಎಂಬ ನಿಜದಿಂದ ॥ ೨೭ ॥

ಕಪ್ಪೆಬಾಲವು ಕಳಚಿದೊಡನೆಯೆ
ಒಪ್ಪದಿಂನೆಲಜಲದಿಕುಪ್ಪುತ
ಲಿಪ್ಪವೊಲು ಭುವಿಯೊಳಗೆ ಮಾಯಾಪಟಲ ಕಳೆದವನು
ತಪ್ಪದಲೆ ಇಹಪರದಿ ನಿಲ್ಲಲು
ಬಪ್ಪನಲ್ಲದೆ ಪರಮನಿರವನು
ನೆಪ್ಪುಬಲ್ಲವನಾಗಿ ಬ್ರಹ್ಮಾನಂದದೊಳಗಿಹನು ॥ ೨೮ ॥

ಹಾಲುನೀರೊಳುಬೆರೆಯೆ ಹಂಸವು
ಪಾಲಸವಿವಂದದಲಿ ಜ್ಞಾನಿಯು
ಮೇಲೆನಿಪ ಪರಮಾರ್ಥಸಾರವಗ್ರಹಿಸಿ ಮಾಯೆಯನು
ಮೂಲೆಯೊಳುನೆಗ್ಗೊತ್ತಿ ಹೃತ್ಕೀ
ಲಾಲಜದಿ ಪರಬೊಮ್ಮನಿರವನು
ಲೀಲೆಯಿಂದಲಿ ತೋಡಿನಲಿನಲಿದಾಡುವನು ಬಿಡದೆ ॥ ೨೯ ॥

ಒಡವೆವಸ್ತುಗಳುಳ್ಳಪೆಟ್ಟಿಗೆ
ಯೆಡೆಬಿಡದೆ ರಕ್ಷಿಪರು ಲೋಕದಿ
ಒಡವೆಯಿಲ್ಲದ ಪೆಟ್ಟಿಗೆಯ ಲಕ್ಷಿಸದೆಬಿಡುವಂತೆ
ಒಡಲು ಕ್ಷಣಭಂಗುರವದಾದರು
ಒಡಲೊಳಗೆ ಪರಮಾತ್ಮನಿಹನೆಂ
ದೊಡಲಪೊರೆವರು ಪರಮಸರಿಯಲು ನೋಡಲಂಜುವರು ॥ ೩೦ ॥

ಹರಿವಜಲದಂದಲಿ ಮನವಿದು
ಹರಿಯುತಿರುವುದು ಹಲವು ಕಡೆಯಲಿ
ಅರಿವು ಇಲ್ಲದಕಾರಣದಿ ಚಾಂಚಲ್ಯದೋಷವಿದು
ಪರಿಪರಿಯವಿಷಯೋಪಭೋಗದೊ
ಳುರುತರದ ದುಃಖವನು ಸಹಿಪುದು
ಸ್ಥಿರನೆಲೆಯೊಳಿರಿಸುವುದೆ ಕೇವಲ ಕಠಿಣವಾಗಿಹುದು ॥ ೩೧ ॥

ಮಾತೆಯೆಡೆಯೊಳು ಸಕಲ ಮರ್ಯಾದ
ಮಾತುಗಳಬಿಚ್ಚಾಡಿ ಮಕ್ಕಳು
ಭೀತಿಯಿಲ್ಲದಲಿರುವರಿತರರ ಸೇರದಂದಲಿ
ಭೂತಳದಿ ಭಕ್ತೋತ್ತಮನು ಬಹು
ಪ್ರೀತಿಯಿಂ ತನ್ನಿಷ್ಟದೈವವ
ಮಾತೆಯೆಂಬಭಿಧಾನದಿಂದಲಿ ಕರೆದು ಸುಖಿಸುವನು || ೩೭ ||

ಭಂಗಿಯನು ಸೇದುವನು ತನ್ನಯ
ಸಂಗಡಿಗರೊಡಗೂಡಿಸೇದುವ
ಸಂಗಡಿಗರಿರದಿರಲು ಮನೆದೊಳು ಭಂಗಪಡುತಿಹನು
ಮಂಗಳಾಂಗನ ಮಹಿಮೆಗಳ ಸ
ತ್ಸಂಗದೊಳು ಪಾಡುತಲಿ ಸಾಧುವು
ತ್ತುಂಗಸುಖದೊಳಗಿರುವನವನೇಕಾಂಗಿಯಾಗಿರನು || ೩೮ ||

ಒಬ್ಬೆಯೊಳು ಹಾಕುತ್ತ ಭತ್ತವ
ಒಬ್ಬನಿಗೆ ಅವಲಕ್ಕಿ ಮಾರುತ
ತಬ್ಬಿ ಮಗುವಿಗೆಸ್ತನ್ಯಕುಡಿಸುವತಾಯಿ ಮನವೆಲ್ಲ
ಒಬ್ಬೆಭತ್ತದೊಳಿರುವ ಪರಿಯಲಿ
ಅಬ್ಬರದ ಸಂಸಾರದಲಿ ನರ
ನುಬ್ಬುದಲೆ ಮನ ದೇವಗರ್ಪಿಸಿ ಧೀರನೆನಿಸುವನು || ೩೯ ||

ಮದಿಸಿದಾನೆಯು ಬಿಟ್ಟ ಕ್ಷಣದಲಿ
ಕದಳಿ ಮೊದಲಾದುವನು ಕೀಳುತ
ಪದದಿತುಳಿವುದು ಮಾವುತನುಮಸ್ತಕದಿ ಅಂಕುಶವ
ಅದುಮೆ ನಿಲುವುದು ಮನವಿದರಪರಿ
ಮದಿಸೆ ಜ್ಞಾನಾಂಕುಶದಿ ಒತ್ತಲು
ಒದಗಿದಜ್ಞಾನಾಂಧಕಾರವು ತೊಲಗಿ ಪೋಗುವುದು || ೪೦ ||

ಗಿಡದಬುಡದಲಿ ಕಟ್ಟಿತುಕರವನು
ಬಡಿಯಲಾಕ್ಷಣಹಾರಿಹೋಗುವ
ಗಿಡದಮೇಲಣಪಕ್ಷಿಯಂದದಿಮನುಜನಾದವನು
ಬಿಡದೆ ಪರಮೇಶ್ವರನನಾಮವ
ಅಡಿಗಡಿಗೆಪಾಡುತ್ತತಾಳವ
ಬಡಿಯಲಾಕ್ಷಣಮನದದುರ್ವಿಷಯಗಳು ಓಡುವವು ॥ ೩೬ ॥

ಕರದೊಳಗೆ ತಂಬೂರಿತಾಳವ
ಧರಿಸಿಬಾರಿಸುತಿಪ್ಪಮನುಜನು
ವರಸುಗಾಯನಮಾಡುವಂದದಿಭವದಿ ಬಂದವನು
ಕರಚರಣಮೊದಲಾದ ಇಂದ್ರಿಯ
ಚರಿಯನಡೆದರುಮನದಿ ಜೀವನ
ಮರೆಯದಲೆಸಂಸ್ಮರಿಸುತಿರುವನು ಧನ್ಯನೆನಿಸುವನು ॥ ೩೭ ॥

ಜಾರೆಮನೆಯೊಳಗಿರುತ ಘನಸಂ
ಸಾರಕರ್ಮವನಡೆಸುತಿದ್ದರು
ಜಾರಪುರುಷನಮನದಿಸ್ಮರಿಸುತಲಿರುವತೆರನಂತೆ
ಘೋರಭವದೊಳುಮಗ್ನನಾಗಿಯು
ಪಾರದುಃಖವಪಡುತಲಿದ್ದರು
ದೇವನಂಘ್ರಿಯಬಿಡದೆ ಭಕ್ತನುಸ್ಮರಿಸಿಸುಖಿಸುವನು ॥ ೩೮ ॥

ತನ್ನಮಕ್ಕಳತೆರದಿ ದಾಸಿಯು
ತನ್ನ ಒಡೆಯನಮಕ್ಕಳಿಗೆಪಾ
ಲನ್ನಕೊಟ್ಟರು ಮಮತೆಮಕ್ಕಳೊಳಿರದತೆರದಂತೆ
ತನ್ನ ಸತಿಸುತರನ್ನು ಪೊರೆವವ
ರಿನ್ನುಸರ್ವವು ದೇವನೆನುತಲಿ
ಮನ್ನದಭಿಮಾನವನುತೊರೆವನು ಭಕ್ತನಾದವನು ॥ ೩೯ ॥

ವನಧಿಯೊಳಗಿಹಮುತ್ತು ಒಂದೇ
ಮುಣುಗಿನಲಿಸಿಗದಿರಲು ಮೌಕ್ತಿಕ
ವನಧಿಯೊಳಗಿಲ್ಲೆಂದುಬಗೆಯದೆ ಮುಣುಗುತಿರುವಂತೆ
ಘನತರದಸಾಧನಗಳೊಮ್ಮೆಗೆ
ತನಗೆದೊರಕೊಳದಿರಲು ಬೇಸರ
ಮನಕೆತಾರದೆಯತ್ನಗೈದರೆ ದೇವನೊಲಿಯುವನು ॥ ೪೦ ॥

ಇಂಧನವಮಾರುವನು ಬಹುಶ್ರಮ
ದಿಂದಜೀವಪುದರಿತುಸಾಧುವು
ಮುಂದೆತೆರಳೆನೆಕೇಳಿ ಮುಂದಕೆಪೋಗಿಚಂದನವ
ತಂದುಲಾಭಕೆಮಾರಿದ್ರವ್ಯವ
ಹೊಂದಿದವನಂದದಲಿ ಬಹುವಿಧ
ದಿಂದಸಾಧನಮಾಡಲೀಶ್ವರದೊರಕುವನುಮುಂದೆ ॥ ೪೧ ॥

ಪತಿಯುಮೇಲಣಮುಮತೆಯೊಳಗಿಹ
ಪತಿವ್ರತೆಯತೆರನಂತೆ ಲೋಭಿಯು
ಕ್ಷಿತಿಯೊಳಡಗಿಸಿ ಇಟ್ಟಧನದೊಳುಲೋಭವಿಡುವಂತೆ
ಮತಿಯುತನು ಮನವಚನಕಾಯದಿ
ಸತತಭಕ್ತಿಯ ಹರಿಯೊಳಿಟ್ಟ
ಪ್ರತಿಹತನುತಾನಾಗಿ ನಿರ್ಭಯದಿಂದಚರಿಸುವನು ॥ ೪೨ ॥

ಭೂತಳದಿ ಜ್ಯೋತಿಷ್ಯಶಾಸ್ತ್ರದ
ರೀತಿಯಿಂದಲಿ ಮಳೆಯುಕರೆವುದು
ಜ್ಯೋತಿಷವಹಿಂಡಿದರೆ ಜಲಕಣಬಹದೆಲೋಕದೊಳ
ಖ್ಯಾತವಾಗಿಹ ನೀತಿಶಾಸ್ತ್ರವ
ಪ್ರೀತಿಯಿಂ ಪಠಿಸುತ್ತ ಅದರೊಳು
ಜಾತಧರ್ಮವಚರಿಸದಿರೆ ತಾನೀತಿಯುತನಹನೆ ॥ ೪೩ ॥

ಕಮಲಮಕರಂದವನು ಸವಿಯಲು
ಭ್ರಮರ ಝೇಂಕರಿಸುತ್ತ ಬರುವದು
ವಿಮಲಮಧುವನು ಸವಿದಮಾತ್ರದಿ ಮೌನತಾಳುವದು
ಅಮಿತವಾಗಿಹ ಶಾಸ್ತ್ರತತಿಯೊಳು
ಮಮತೆಯಿಂವಾದಿಪರುಭಕ್ತಿಯ
ಅಮೃತದೊರಕಿದಕ್ಷಣದಿ ಶಾಂತಿಯತಾಳಿಬಾಳುವರು || ೪೪ ||

ಶರಧಿಯೊಳು ನಾವೆಯನುನಡೆಸುವ
ನರನು ಉತ್ತರಮುಖಿಯ ಬಲದಿಂ
ಚರಿಸಿ ನಿರ್ಭಯದಿಂದ ಮಾರ್ಗದ ಕುರುಹನರಿವಂತೆ
ಉರುತರದ ಸಂಸಾರದೊಳು ಸಂ
ಚರಿಪ ಮನುಜನು ತನ್ನ ಅಂತಃ
ಕರಣದೊಳಗೀಶ್ವರನಬಲದಿ ಭವಾಬ್ಧಿ ದಾಟುವನು || ೪೫ ||

ನೀರಕುಂಭವ ಪೊತ್ತು ಬರುತಿಹ
ನಾರಿಯರು ಮಾತಾಡುತಿದ್ದರು
ನೀರು ತುಳುಕದ ರೀತಿ ಮನೆಯನು ಸೇರುವಂದದಲಿ
ಘೋರತರ ಸಂಸಾರಿ ಸತ್ಯವಿ
ಚಾರದಿಂ ಸನ್ಮಾರ್ಗವಗಲದೆ
ವಿಚಾರಿದಂತಃಕರಣದೊಳಗೀಶ್ವರ ಸೇರುವನು || ೪೬ ||

ಹಲಸುಪಣ್ಣಿನತೊಳೆಯ ಬರಿಗೈ
ಯೊಳಗೆ ಸುಲಿಯಲು ಅಂಟುವದು ಕೈ
ಗಳಿಗೆ ಎಣ್ಣೆಯ ಬಳಿದು ತೆಗೆಯಲು ಸುಲಭವಿರುವಂತೆ
ನಲವಿನಿಂದಲಿ ಸತ್ಯಜ್ಞಾನದ
ಬಲದ ಕವಚವ ಧರಿಸಿ ದೇವನ
ಒಲಿಸುವವನಿಗೆ ಕಲುಷಬಾಧೆಗಳಿಲ್ಲ ಪರಿಕಿಸಲು || ೪೭ ||

ರೂಢಿಯೊಳು ಭಾಗವತರಾಟವ
ನಾಡುತಿದ್ದರು ಮುಖ್ಯಪಾತ್ರವು
ನೋಡೆ ತಾ ಸರಿಯಾದ ಕಾಲಕೆ ಬರುವದದರಂತೆ
ಪಾಡಿ ಪೊಗಳಿದ ಮಾತ್ರಕೇ ಸುಳಿ
ದಾಡನೊಮ್ಮೆಗು ದೇವ ತನ್ನಲಿ
ಮಾಡೆ ಸುದೃಢ ಸ್ನೇಹ ಭಕ್ತಿಯ ನೋಡಿಬರುತಿಹನು || ೪೮ ||

ಕ್ಷೀರವನು ಕರೆದಿಟ್ಟಮಾತ್ರಕೆ
ಬಾರದೆಂದಿಗು ಬೆಣ್ಣೆ ಬಲುಸಂ
ಸ್ಕಾರಮಾಡಿದನಂತರದಿ ಅದು ತಾನೆಬರುವಂತೆ
ಸಾರತರದಧ್ಯಾತ್ಮಸಾಧನ
ವಿಾರದಲೆ ಸಾಧಿಸಿದನಂತರ
ಪಾರಮಾರ್ಥಿಕ ತತ್ವವಸ್ತುವು ತಾನೆ ದೊರಕುವದು || ೪೯ ||

ನೆಟ್ಟಮುಳ್ಳನು ಮುಳ್ಳಿನಿಂದಲಿ
ಮೆಟ್ಟಿ ತೆಗೆಯುತಲೆರಡು ಮುಳ್ಳುಗ
ಳಿಟ್ಟುಬಿಡುವಂದದಲಿ ಸಾಪೇಕ್ಷಕದ ಅಜ್ಞಾನ
ಪುಟ್ಟುವದು ಸಾಪೇಕ್ಷಜ್ಞಾನದಿ
ಸುಟ್ಟುದ್ವಂದ್ವಾತೀತನಾಗುತ
ಕಟ್ಟಕಡೆಗವ ಸೇರುವನು ನಿರ್ವಾಣಪದವಿಯನು || ೫೦ ||

ಅಳಿವ ಒಡಲನು ನೋಡಲಿದರೊಳು
ಮಲವು ಮೂತ್ರವು ಮಾಂಸರಕ್ತವು
ಅಳವಡಿಸಿ ಮಜ್ಜಾಸ್ಥಿಕ್ರಿಮಿಸಂಕುಲವೆ ಮೊದಲಾಗಿ
ನೆಲೆಸಿರುವ ದುರ್ಗಂಧವಶುಚಿಯು
ಬಿಲಗಳಿಂ ಹೊಲೆಗಲಸಿರುವ ತನು
ತಿಳಿಮ ಮಮತೆಯ ಬಲೆಯೊಳಗೆ ಸಿಲುಕಿದರೆ ಕೇಡಹುದು || ೫೧ ||

ಎಳೆಯ ಸಸಿಯೊಬ್ಬಿಸಲು ಬೇಲಿಯು
ಬಲದಿ ರಕ್ಷಿಸಬೇಕು ಬಲಿತರೆ
ಹಲವು ಮೃಗಪಶುಪಕ್ಷಿ ಮನುಜರಿಗೊದಗುವದು ತಾನು
ಇಳೆಯ ಮಾನವರೊಳಗೆ ಭಕ್ತಿಯು
ಮೊಳಕೆಯನು ಅದರಂತೆ ರಕ್ಷಿಸೆ
ಬಳಿಕ ಸತ್ಸಂಗದಲಿ ಮನುಜರು ಪಡೆವರಿಹಪರವ || ೫೨ ||

ಸೆಳೆವಿನಿಂದಲಿ ಜಲವು ಹರಿಯುತ
ಸುಳಿಗೆ ಸಿಕ್ಕಲು ಸುತ್ತುತಿರುವದು
ಸುಳಿಯು ಬಿಡುತಲೆ ಸರಳಗತಿಯಲಿ ಮುಂದೆ ಹರಿಯುವದು
ಬಲು ಸುಶೀಲಗಳುಳ್ಳ ಮನುಜರು
ಕಳವಳಿಸಿ ವಿಷಯಗಳ ಸುಳಿಯಲಿ
ಬಳಿಕ ನಿಶ್ಚಂಚಲದಿ ನಿಲುವರು ತಿಳಿವುತಲೆ ದೋರಿ || ೫೩ ||

ಬಿಳಿಯ ಬೆಣಚಿನಕಲ್ಲು ನೀರೊಳು
ಹಲವು ಸಂವತ್ಸರಗಳಿದ್ದರು
ಒಳಗಿನಗ್ನಿಯು ಉಕ್ಕುತಗಲಲು ಹೊರಗೆ ಬರುವಂತೆ
ಹಲವು ಕೋಟಲೆಯೊಳಗೆ ಭಕ್ತನು
ಮುಳುಗಿರಲು ಈಶ್ವರನ ನಾಮವು
ಕಳೆಯನೀವುದು ಕಲುಷವಳಿವದು ಕೇಳ್ದಮಾತ್ರದಲಿ || ೫೪ ||

ಮಕ್ಕಳಾಟದಿ ಮನೆಯ ವೈಭವ
ಲೆಕ್ಕಿಸದೆ ಬೊಂಬೆಯೊಳು ಮನವನು
ಇಕ್ಕಿ ಮಮತೆಯೊಳಿರುವವೋಲ್ ಹರಿಭಕ್ತ ಭವದೊಳಗೆ
ಸಿಕ್ಕದಲೆ ಅಕ್ಕರದಿ ದೇವನೊ
ಳಕ್ಕಿದಾನಂದದಲಿ ಸೇವಿಸಿ
ದಿಕ್ಕು ಸಂಪದ ಮಾನ ಮರ್ಯಾದೆಗಳ ಧಿಕ್ಕರಿಸ || ೫೫ ||

ಗಾಳಿಬೀಸಿದಕಡೆಗೆ ತರಗೆಲೆ
ಮೇಲೆಹಾರುವತೆರದೊಳೀಶನ
ಮೇಲೆ ಸರ್ವಸ್ವವನುಹೊರಿಸುತ ಆತನಿಚ್ಛೆಯಲಿ
ಬಾಳುವಾತನು ಚಿಂತೆಯನುನಿ
ರ್ಮೂಲಗೊಳಿಸುವನೆಲ್ಲಕಾಲವಿ
ಶಾಲಮತಿಯಿಂದೋಲಯಿಸಿ ಸುಖದಾರಿಯೊಳಗಿಪ್ಪ || ೫೬ ||

ಪರಮತತ್ವಾರ್ಥಗಳನರುಹುವ
ಗುರುಗಳಿರುವರನೇಕರಾದರು
ಗುರುವಿನುಪದೇಶವನು ಅನುಸರಿಸಿರುವ ಶಿಷ್ಯರನು
ಅರಸಿನೋಡಲು ಜನರೊಳಗೆ ಅತಿ
ವಿರಳವಾಗಿಹುದೀಗ ಧರೆಯೊಳು
ಗುರುಗಳಿದ್ದೇನಕಟ ಕಲಿಯಲು ಶಿಷ್ಯರಿಲ್ಲದಿರೆ || ೫೭ ||

ರೇಶಿಮೆಯಹುಳು ಸಿದ್ಧಗೊಳಿಸಿದ
ಕೋಶದಲಿ ಅಡಗಿದ್ದು ತನ್ನಯ
ವೇಷ ಬದಲಾಯಿಸುತಕೋಶವನೊಡೆದುಬರುವಂತೆ
ಆಶೆಪಾಶದಿಬಿದ್ದಜೀವರು
ಲೇಸುಜ್ಞಾನವಿರಕ್ತಿಬಲದಿಂ
ಸೂಸುತಿಹಮಾಯೆಯನುದಾಟುತ ಮುಕ್ತರಾಗುವರು || ೫೮ ||

ಅರಸನೋಲಗದೊಳಗೆ ಚರಿಸುವ
ನರನುಪುರಜನರೊಳಗೆ ದರ್ಪದೊ
ಳಿರುತ ಅರಸನಬಳಿಯೊಳಂಜಿಕೆತೋರುವಂದದಲಿ
ಅರಿಯದ ಜ್ಞಾನದಲಿಮೆರೆಯುವ
ನರನು ಸಾಧುವಕಂಡಮಾತ್ರಕೆ
ಗುರುತರದ ಭಕ್ತಿಯನು ತೋರುತಭಯದೊಳಿರುತಿಹನು || ೫೯ ||

ಹಸಿಯಕಾಷ್ಠವನಗ್ನಿಯೊಳಗಿಡೆ
ಹಸಿಯನೊಣಗಿಸಿ ದಹಿಸುವಂತದಿ
ವಸುಧೆಯೊಳು ಸ್ತ್ರೀಪುರುಷರಾದವರೆಲ್ಲ ಪರಿತಪಿಸಿ
ಎಸೆವ ಸಾಧು ಸಮಾಜದೊಳು ಬರೆ
ನಶಿಸಿ ಪೋಪುದು ಪಾಪವೆಲ್ಲವು
ನಿಶಿದಿನದಿ ಸುವಿವೇಕವೆಂಬುವ ಜ್ಯೋತಿ ಬೆಳಗುವದು || ೬೦ ||

ಹದ್ದುಗಳು ಗಗನದೊಳುಚರಿಸುತ
ಲಿದ್ದಕಾಲಕು ಲಕ್ಷ್ಯ ಮಾಂಸವು
ಬಿದ್ದಕಡೆಯೊಳಗೆರಗುವಂದದಿ ಸಾಧುಸಂತರೊಳು
ಶುದ್ಧವಾದಧ್ಯಾತ್ಮತತ್ವದ
ಸದ್ಧತಿಯನೆನೆಯುತ್ತಲಿದ್ದರು
ಬುದ್ಧಿಯೆಲ್ಲವು ಈಷಣತ್ರಯದೊಳಗೆ ಬೆರೆಯುವದು || ೬೧ ||

ನೇಮದಿಂದಲಿ ಸಕಲ ಸುಜನ
ಸ್ತೋಮವನು ಜರಿಯುತ್ತ ಭಗವ
ನ್ನಾಮಕೀರ್ತನ ಶ್ರವಣಮನನಾದಿಗಳನಿಂದಿಸುತ
ನೇಮನಿಷ್ಠೆಯ ಪೆಸರನಳಿಯುತ
ಕಾಮಚಾರಿಗಳಾಗಿ ವಿಷಯವ
ಕಾಮಿಸುತಲದೆ ಹಿತವೆಂದುಬೋಧಿಪ ನರರು ಪಾಪಿಗಳು || ೬೨ ||

ಭತ್ತವನು ತಂದಿಟ್ಟಮಾತ್ರಕೆ
ಭತ್ತದೊಳಗಿಹ ಅಕ್ಕಿ ದೊರೆಯದು
ಭತ್ತಕುಟ್ಟುತ ತುಷವತೆಗೆದರೆ ಅಕ್ಕಿ ದೊರೆಯುವದು
ಚಿತ್ತವೃತ್ತಿಯೊಳಿರುವ ತುಷವನು
ನಿತ್ಯಸಾಧನೆಯಿಂದ ತೆಗೆಯಲು
ಚಿತ್ತಶುದ್ಧಿಯುನೈದಿ ಸತ್ಯಜ್ಞಾನದೊರಕುವದು || ೬೩ ||

ಗಿಳಿಯುಮರಿಯನು ತಂದು ಮಾತನು
ಕಲಿಸೆ ಕಲಿವುದು ಮುದಿತನದಿ ಗಿಳಿ
ಕಲಿಯಲಾಗದ ಕಾರಣದಿ ಬಾಲ್ಯದಲಿ ಈಶ್ವರನ
ಒಲಿಸಲಭ್ಯಾಸಿಸುವ ಮಾರ್ಗವು
ಸುಲಭವಾಗಿರುತಿಹುದು ಮುದಿತನ
ದೊಳಗೆ ಕಲಿಸಲು ಕಠಿಣವೆಂದಿಗು ಕೇಳು ಲೋಕದೊಳು ॥ ೬೪ ॥

ಮನೆಯೊಳೆಚ್ಚರವಿರಲು ಕಳ್ಳರು
ಮನೆಯು ಬಳಿ ಸುಳಿಯದಲೆ ಕಾಯುತ
ಮನೆಯೊಳೆಚ್ಚರದಪ್ಪೆ ಗುಟ್ಟಿಲಿ ಮನೆಯು ಪೋಗುವಂತೆ
ಮನದೊಳೆಚ್ಚರವಿರಲು ನಿತ್ಯವು
ಮನದಿ ದುರ್ವಿಷಯಗಳು ನಿಲ್ಲವು
ಮನದಿ ಎಚ್ಚರದಪ್ಪೆ ಕಾಮಾದಿಗಳು ನುಸುಳುವವು ॥ ೬೫ ॥

ಅನ್ಯರಿಗೆ ಬೋಧಿಸುತ ಕಾಲಗ
ಳನ್ನು ಕಳೆಯದೆ ಈಶ್ವರನ ಮನ
ದುನ್ನತದಿ ಭಜಿಸುವನೆ ನಿಜ ಉಪದೇಶಿಯೆಂದರಿದು
ನನ್ನಿಯಿಂದಲಿ ಪುಷ್ಪವಿರುವೆಡೆ
ಯುನ್ನ ಜೇನ್ನೊಣಸೇರುವಂದದಿ
ಸನ್ನುತಿಸುತುಪದೇಶಿಯನು ಅರಸುತ್ತ ಜನಬಹರು ॥ ೬೬ ॥

ಸಾಧು ಬೋಧವ ಪಡೆದ ಹಾವದು
ಹಾದಿಗರ ಬಾಧೆಯೊಳಗಿರುತಿರೆ
ಸಾಧು ಸರ್ಪಕೆ ಬೋಧಿಸಿದ ಫೂತ್ಕಾರಮಾಡೆಂದು
ಮೇದಿನಿಯೊಳೀತೆರದಿ ನಿನ್ನಯ
ಬಾಧೆಗನ್ಯರಬರಗೊಡದಲಿರು
ಬಾಧಿಸದೆ ಅನ್ಯರನು ನೀನಿರುವಲ್ಲಿ ಸುಖಿಸುತಿರು ॥ ೬೭ ॥

ಪಗಡೆಯಾಟದಿ ಕಾಯಿಮನೆಮನೆ
ಚಿಗಿದುಹಾರುತಲಳಿದು ತಾವ್ ಜೋ
ಡಿಯನು ಕಟ್ಟುತಪೋಗಿ ಮುಕ್ತಸ್ಥಾನಪಡೆವಂತೆ
ಜಗದಿ ಗುರುವಿನ ಜೋಡಿಗಟ್ಟುತ
ಹಗಲಿರುಳುಸದ್ಭಕ್ತಿಭಾವದಿ
ಸುಗಮವಾಗಿಹ ಮಾರ್ಗದಲಿ ಸಂಚರಿಸೆ ಮುಕ್ತನಹ ॥ ೬೮ ॥

ನೊಣವು ಮೇಧ್ಯಾಮೇಧ್ಯದೊಳುಕ್ಷಣ
ಕ್ಷಣಕೆ ಎರಗುವತೆರದಿ ಜೇನಿನ
ನೊಣವು ಮಧುತೊರೆದೆಂದಿಗೆರಗದು ಲೋಕಮಾನವನು
ನೊಣದಪರಿನೀಚೋಚ್ಚಕೆರಗುತ
ದಣಿದು ಬಳಲುವಜ್ಞಾನಿ ಮನುಜನು
ಮನದೊಳಗಲದೆ ಸವಿವ ಹರಿನಾಮಾಮೃತದ ಸವಿಯ ॥ ೬೯ ॥

ಬಿಸಜಪತ್ರಕೆ ಜಲವುತಾಕದು
ಕೆಸರಮೀನಿಗೆ ಮಣ್ಣುತಾಕದು
ವಸುಧೆಯೊಳು ಸಂಸಾರದೊಳಗಿಹ ವಿಬುಧಸಂತತಿಗೆ
ವಿಷಯವಾಸನೆಯೆಂಬಕಶ್ಮಲ
ಮುಸುಕಲರಿಯದು ಮಾಯಪಾಶದ
ಹೆಸರಡಗಿಪೋಗುವದು ಸಿಲ್ಲದೆ ಉಳಿದಮಾತೇನು ॥ ೭೦ ॥

ಈ ಮಹೀಮಂಡಲದಿಭಗವ
ನ್ನಾಮಕೇಳಿದ ತಕ್ಷಣದಿತನು
ರೋಮಪುಳುಕಿತವಾಗಿ ಆನಂದಾಶ್ರು ಕಣ್ಣಿನೊಳು
ಪ್ರೇಮದಿಂ ಮಳೆಗರೆಯುತಿರುವದೊ
ನಾಮಜಪ ಕೊರಳುಬ್ಬಿಬರುವದೊ
ಆಮಹಾತುಮಗಿಲ್ಲಪುನರಪಿಜನ್ಮ ಧರೆಯೊಳಗೆ ॥ ೭೧ ॥

ಬಲೆಗೆ ಸಿಲುಕಿದ ಮೀನಿನೊಳುಕೆಲ
ಕೆಲವು ಸಿಗಬಿದ್ದಿಹವುನೋಡಲು
ಕೆಲವು ಹಾರುತಕೆಲವು ಬಲೆಯಿಂಚಿಗಿದು ಬರುವಂತೆ
ಇಳೆಯೊಳಗೆ ಬಿದ್ದಿಹನು ಬದ್ಧನು
ಸಲೆಮುಮುಕ್ಷುವುಯತನವಾಳ್ವನು
ಬಲೆಯದಾಟಿದ ಬಂಧರಹಿತನು ಮುಕ್ತನೆನಿಸುವನು || ೭೨ ||

ಮೀನು ನೀರಿನೊಳಿರುವತಾಣವ
ಕಾಣಬಲ್ಲವರಿಂದ ತಿಳಿಯುತ
ಮೀನಹಿಡಿಯುವತೆರದಿ ಮನುಜನು ಸಾಧುವಚನವನು
ತಾನರಿತು ಮನವೆಂಬ ಗಳದೊಳು
ಸಾನುರಾಗದಿ ಭಕ್ತಿಯಾಮಿಷ
ನ್ಯೂನವಿಲ್ಲದೆ ಬಂಧಿಸಲು ಜಗದೀಶನೊಲಿಯುವನು || ೭೩ ||

ಸಾಧುವೇಷವಧರಿಸಿ ಕಳ್ಳನು
ಸಾಧುಸಂಗದೊಳಿರಲು ಅರಸನು
ಸಾಧುವೆನುತಲಿ ಕಳ್ಳನಿಗೆ ಕುವರಿಯನು ಕೊಡಬರಲು
ಸಾಧುವೇಷದ ಫಲವು ಈಪರಿ
ಯಾದುದನು ಯೋಚಿಸುತ ತಾನಿಜ
ಸಾಧುತನವನು ನೆನೆದು ಮನದಲಿ ಸಾಧುವೆನಿಸಿದನು || ೭೪ ||

ಕಾದ ಕಬ್ಬಿಣ ಬಡಿಬಡಿದು ಒಳಿ
ತಾದ ಭಟ್ಟಿಯೊಳಿಡಲು ಬಲು ಹೊ
ತ್ತಾದನಂತರ ಉಕ್ಕು ಸಿಕ್ಕುವ ತೆರದಿ ಮಾನವನು
ಖೇದವೆಂಬುವ ಅಗ್ನಿ ಭಟ್ಟಿಯೊಳ್
ಕಾದು ಜಗದುಪಟಳದ ಪೆಟ್ಟಿನ
ಬಾಧೆ ಪಡಿಸಿದ ಮೇಲೆ ಭಗವತ್ಪಾದ ಕಾಣುವನು || ೭೫ ||

ಚಿತ್ರಪಟದೊಳು ಈಶ್ವರಾಕೃತಿ
ಕೃತ್ರಿಮವಹುದಾದಡೆಯು ವಸ್ತುವ
ಚಿತ್ರಿಸಿದ ಭಾವನೆಯು ಮನದೊಳು ಸಹಜ ನಿಲ್ಲುವುದು
ಕೃತ್ರಿಮದ ಫಲಪುಷ್ಪ ವಿರಚಿಸೆ
ಚಿತ್ರಭಾವವು ತೋರುವಂತೆ ಪ
ರತ್ರದೊಳಗಿಹ ದೇವನನು ಪ್ರತ್ಯಕ್ಷಗೊಳಿಸುವದು || ೭೬ ||

ಮನೆಯ ಯಜಮಾನನನು ಮಾನಿನಿ
ಇನಯನೆನ್ನುತ ಕರೆಯುತಿಪ್ಪಳು
ತನಯ ತಂದೆಯೆನುತ್ತ ಅಣ್ಣನು ತಮ್ಮನೆಂತೆಂದು
ಇನಿತು ನಾಮವನೊಬ್ಬನಿಗೆ ಅನು
ದಿನದಿ ಕರೆಯುವ ತೆರದಿ ದೇವನ
ನೆನೆನೆನೆದು ಬಗೆಬಗೆಯ ರೂಪಕ್ರಿಯವ ಚಿಂತಿಪರು || ೭೭ ||

ಪರರ ಗುಣದೋಷಗಳ ಜರಿಯುತ
ಪರಿಪರಿಯ ಸೌಖ್ಯವನು ಬಯಸುತ
ಬರಿದೆ ಕಾಲವ ಕಳೆಯುತಿಹ ನರಮರುಳನಂದದಲಿ
ತಿರುಗಿ ಬರದಾಕಾಲವೆಂಬುದ
ನರಿಯದಲೆ ಈಶ್ವರನ ಮರೆಯುತ
ನಿರುತ ಪಾಮರನಾಗಿ ಕೆಡುವನು ಲಾಭವಿಲ್ಲದಲೆ || ೭೮ ||

ಅತ್ತಪೋದ ಪುರಾಣಕೊಬ್ಬನು
ಇತ್ತ ನಾಟ್ಯಕೆ ಪೋದನೊಬ್ಬನು
ಅತ್ತಲಿರುವನು ಮನದಿ ನಾಟ್ಯವ ಚಿಂತಿಸುತ್ತಿರಲು
ಇತ್ತ ನಾಟ್ಯದಲಿದ್ದವನ ಮನ
ಅತ್ತ ಪೌರಾಣದಲಿ ನೆಲೆಸಿತು
ಅತ್ತ ಪಾಪವು ಇತ್ತ ಪುಣ್ಯವು ಬಿಡದೆ ಸಮನಿಸಿತು || ೭೯ ||

ನದಿಯೊಳಗೆ ಮಿಂದವನಿಗಾಗಲಿ
ನದಿಯೊಳಗೆ ಬಿದ್ದವನಿಗಾಗಲಿ
ನದಿಯಪ್ರೋಕ್ಷಣೆಗೈದಗಾಗಲಿ ಫಲವು ಬರುವಂತೆ
ಮದಡನಾಗಲಿ ಮಂದನಾಗಲಿ
ಹೃದಯದೊಳು ಪರಿಶುದ್ಧನಾಗಲಿ
ವದನದೊಳಗೀಶ್ವರನ ನಾಮವ ಪೊಗಳೆ ಫಲಬಹುದು || ೮೦ ||

ಅರಸನಾಜ್ಞೆಯೊಳಿರುವ ಮಾನವ
ಬಿರುದು ಬಿಲ್ಲೆಯ ಧರಿಸಿ ದರ್ಪದಿ
ಪುರಜನರ ಬೆದರಿಸುತ ಶಾಸನಗೈಯುವಂದದಲಿ
ನಿರುತದೇವನ ಕರುಣಬಿಲ್ಲೆಯ
ಬಿರುದ ಧರಿಸಿದ ಭಕ್ತನಾದರು
ಹರಿಚರಿತೆ ಬೋಧಿಸುತ ಭಕ್ತಿಯ ಶಾಸನವ ಗೈವ || ೮೧ ||

ಅಡವಿಯೊಳು ಕಡುಚೆಲುವೆ ಬಂದರು
ಪೊಡವಿಯೊಳು ಪರರೊಡವೆ ದೊರೆತರು
ಒಡೆಯ ಈಶ್ವರನೆಲ್ಲ ದೇಶದಿ ಸಾಕ್ಷಿಯಿಹನೆಂದು
ಅಡಿಗಡಿಗೆ ಪಾಪಗಳಿಗಂಜುತ
ನಡೆಯುವನೆ ಧಾರ್ಮಿಕನು ಬಹಿರದಿ
ಬಿಡದೆ ಡಾಂಭಿಕತನದಿ ಧರ್ಮವ ಚರಿಪ ದುರ್ಮದನು || ೮೨ ||

ಮನೆಗೆ ಬಂದಿಹ ಸೊಸೆಯು ಮಾವನ
ಅನುಜತನುಜೆಯರತ್ತೆಯಾಜ್ಞೆಯ
ನನುಸರಿಸಿ ನಡೆಯುತ್ತ ಪತಿಗತಿಹಿತದೊಳಿರುವಂತೆ
ಅನುದಿನದಿ ತನ್ನಿಷ್ಟದೈವವ
ನೆನೆದು ಪೂಜಿಸುತನ್ಯದೈವಗ
ಳನು ಜರಿಯದಂದಲಿ ಸನ್ಮಾನಿಪುದು ಪ್ರತಿದಿನದಿ || ೮೩ ||

ಲೋಕನಾಯಕನನ್ನು ಕಾಣಲ
ನೇಕರಾಶ್ರಯ ಮಾಡುವಂದದಿ
ಏಕಮೇವಾದ್ವಿತೀಯನೆಂಬ ತ್ರಿಲೋಕನಾಯಕನ
ಶ್ರೀಕರಾಂಘ್ರಿಗಳನ್ನು ಕಾಣಲ
ನೇಕಭಕ್ತಿಯ ಮಾಡಿ ಭಕ್ತಾ
ನೀಕದೊಳು ಬೆರೆಯುತ್ತ ಸೇವೆಯಮಾಡಿ ಸುಖಿಸುವುದು || ೮೪ ||

ಊರದಾರಿಯ ಕಾಣದರಸುತ
ದಾರಿಯಲಿ ಬರುವವನ ಕೇಳಲು
ತೋರಿದಾ ಮಾರ್ಗದಲಿ ಬರುತ ಮತ್ತೊಬ್ಬನನು ಕೇಳೆ
ಬೇರೆಮಾರ್ಗವ ತೋರಿದಂದದಿ
ಭೂರಿಶಾಸ್ತ್ರಗಳಿಹವು ಜ್ಞಾನಿಯು
ತೋರಿದಾ ಮಾರ್ಗವನು ಪಿಡಿಯಲು ಸುಖವು ದೊರೆಯುವದು || ೮೫ ||

ಜ್ಞಾನಿಯಾಗಲಿ ಜಗದಿ ಮೇಣ
ಜ್ಞಾನಿಯಾಗಲಿ ದೊರಕಿದಮೃತವ
ಪಾನಮಾಡಲು ಅಮರನಾಗುವ ರೀತಿ ಮಾನವನು
ಜ್ಞಾನವಿರಹಿತನಾದಡಾಗಲಿ
ಜ್ಞಾನಿಯಾಗಲಿ ಬಿಡದೆ ದೇವನ
ಸಾನುರಾಗದಿ ನಿರುತಪಾಡಲು ಮುಕ್ತನಾಗುವನು || ೮೬ ||

ಬೆಕ್ಕು ಬಾಯೊಳು ತನ್ನೊಳುದಿಸಿದ
ಬಿಕ್ಕಮರಿಗಳ ಹಿಡಿದು ಒಯ್ವುದು
ಬೆಕ್ಕು ಇಲಿಯನು ಹಿಡಿಯೆ ಪ್ರಾಣವು ತೊಲಗುವದು ಬೇಗ
ಸಿಕ್ಕಿಮಾಯಾಪಾಶದಲಿ ಜನ
ಕಕ್ಕಲಿತೆಗೊಳಗಾಗಿರಲು ಬಲು
ಅಕ್ಕರದಿ ಕಾಣುವಳು ಮಾಯೆಯು ಭಕ್ತರಾದವರ || ೮೭ ||

ಕಾಗೆ ಬಲೆಯೊಳು ಸಿಗದೆ ಕುಶಲದಿ
ಪೋಗಿ ಹೊಲಸನು ಮೆಲ್ಲುವಂದದಿ
ಜಾಗರೂಕತೆಯಿಂದ ಕ್ಷುದ್ರವಕೀಲರಾದವರು
ಭೋಗಪಡೆಯುತ ಗರ್ವದಲಿ ತಲೆ
ದೂಗುತುಬ್ಬುತಲಿಹರು ಧನವನು
ರಾಗದಿಂದಲಿ ಪಾಪಸಂಘಟಿಸುವದನರಿಯದಲೆ || ೮೮ ||

ಭತ್ತವಿಹ ಕಣಜವನು ಬಿಟ್ಟಲಿ
ಕತ್ತರಿಗೆ ಸಿಗಬಿದ್ದ ಪರಿಯೊಳು
ಉತ್ತಮೋತ್ತಮ ಮಾರ್ಗವನು ಮರೆಯುತ್ತ ಮಾನವನು
ಚಿತ್ತವೃತ್ತಿಗಳೊಳಗೆ ಬಲು ಉ
ನ್ಮತ್ತ ಕ್ಷುದ್ರೋಪದ್ರ ವಿಷಯದ
ಕತ್ತಲೆಯ ಬಲೆಯೊಳಗೆ ಬೀಳುತ ಭವದಿ ಬಳಲುವನು || ೮೯ ||

ಹೀನಧಾತುವ ಬೆರೆಸುತಲಿ ಜಾಂ
ಬೂನದಾಭರಣಗಳ ರಚಿಪರು
ಹೀನಧಾತುವು ಬೆರೆಯದಿಹ ಆಭರಣವಿರದಂತೆ
ಜ್ಞಾನಿಯಾದರು ಪ್ರಕೃತಿಕಾರ್ಯದಿ
ಲೀನನಾಗಿಹ ಲೇಶಮಾಯೆಯ
ದೇನು ಇರದಿರಲೇಕವಿಂಶತಿ ದಿನಕೆ ಮೃತನಹನು || ೯೦ ||

ಕ್ಷಿತಿಯೊಳಗೆ ನಾಬುದ್ಧನೆನುತಲಿ
ಪ್ರತಿಕ್ಷಣದಿ ತಿಳಿದವನೆ ಬದ್ಧನು
ಸತತ ಮನದಲಿ ಮುಕ್ತನೆಂದರಿತವನು ಮುಕ್ತನಹ
ಮತಿಯು ಆವಸ್ಥಿತಿಯೊಳಿರುವದೊ
ಗತಿಯು ಅದನನುಸರಿಸಿ ಇರುವದು
ಮತಿಯ ತೆರ ಗತಿಸಿದ್ಧವೆಂಬುದುಶಾಸ್ತ್ರಸಮ್ಮತವು || ೯೧ ||

ದೇಶಯಾತ್ರೆಯ ಚರಿಪ ಮನುಜನು
ವಾಸಿಸುವ ಸ್ಥಳದಲ್ಲಿ ವಸ್ತುವ
ತಾ ಸಮನಿಡದೆ ನಿಶಿಯೊಳು ಘಾಸಿಪಡುವಂತೆ
ಈ ಶರೀರದಿ ಬಂದು ತನ್ನಾ
ವಾಸವನು ಅರಿಯದಲೆ ಕರ್ಮವು
ಘಾಸಿಪಲು ನಿಶಿಯೆಂಬ ಮೃತ್ಯುವು ಒದಗಿ ಕೊಲ್ಲುವದು || ೯೨ ||

ಇಳೆಯೊಳೀರ್ವರು ಪೂರ್ಣಸಿದ್ಧರು
ನೆಲೆಸಿಹರು ಅವರೊಳಗೆ ಕೆಲವರು
ತಿಳಿದು ಸ್ವಸ್ಥಿತಿಯ ತಮ್ಮೊಳು ತಾವೆ ಹಿಗ್ಗುವರು
ಉಳಿದವರು ಸತ್ಯವನು ಸಾರುತ
ಹಲವು ಜನರನು ಕರೆದು ಬೋಧಿಸಿ
ಕಳವಳವ ಪರಿಹರಿಸಿ ಉದ್ಧರಿಸುವರು ಭವದಿಂದ || ೯೩ ||

ಒಂದರೊಡನಿಹ ಬಿಂದು ದಶಕವು
ತ್ತೊಂದು ಬಿಂದುವು ಕೂಡೆ ಶತಕವು
ಒಂದನಳಿಸಲು ಸಕಲಬಿಂದುವು ಶೂನ್ಯವೆನಿಸುವುದು
ಮಂದಜೀವರು ಈಶನನು ತಾವ್
ಪೊಂದದಲೆ ಬೆಲೆಯಿಲ್ಲದಿರುವರು
ಪೊಂದೆ ಪರಮೇಶ್ವರನ ಜೀವರು ಪೂರ್ಣರೆನಿಸುವರು || ೯೪ ||

ಕ್ಷಿತಿಯೊಳಗೆ ವೈರಾಗ್ಯ ತಾಳುತ
ಸತಿಯೊಡನೆ ಪತಿ ಬರುವ ಮಾರ್ಗದಿ
ಅತಿಬೆಲೆಯ ವಜ್ರವನು ನೋಡುತ ಪತಿಯು ಮರೆಮಾಡೆ
ಸತಿಯು ಕಂಡಾಕ್ಷಣದಿ ನುಡಿದಳು
ಪತಿಗೆ ಮೃತ್ತಿಕೆ ವಜ್ರಭೇದವು
ಮತಿಯೊಳಿರೆ ಸಂಸಾರವನು ಬಿಟ್ಟೇನು ಫಲವೆಂದು || ೯೫ ||

ಕತ್ತಲೆಯು ಕೋಣೆಯೊಳು ಕಳ್ಳನು
ಸುತ್ತಲಿದ್ದ ಪದಾರ್ಥವೆಲ್ಲವ
ತತ್ತಡಕಿ ಹುಡುಕುತ್ತ ಕಾಂಚನವಿಟ್ಟ ಪೆಟ್ಟಿಗೆಯು
ಗೊತ್ತುಹಿಡಿಯುವವೋಲು ಜ್ಞಾನಿಯು
ಸತ್ಯವಸ್ತುವನರಸುತಿಪ್ಪನು
ಚಿತ್ತದೊಳಗದು ದೊರೆಯಲಾಕ್ಷಣ ಸ್ವಸ್ಥನಾಗುವನು || ೯೬ ||

ಉದಧಿಯೊಳಗಿಹ ಸಿಂಪಿಹುಳುಗಳು
ಮುದದಿ ಮೇಲಕೆ ಬಂದು ಸ್ವಾತಿಯ
ಉದಕಬಿಂದುವ ಸ್ವೀಕರಿಸಿ ಸ್ವಸ್ಥಳದೊಳಿರುವಂತೆ
ಬುಧಜನರು ಸದ್ಗುರುವನರಸುತ
ಸದುಪದೇಶವು ದೊರಕಿದಾಕ್ಷಣ
ಹೃದಯದೊಳಗಾನಂದಶರಧಿಯ ತಳವ ಸೇರುವರು || ೯೭ ||

ಮಾಸಿರುವ ದರ್ಪಣದಿ ಸೂರ್ಯ ಪ್ರ
ಕಾಶಿಸದ ತೆರನಂತೆ ಮಾಯಾ
ವಾಸನೆಯು ನೆಲೆಸಿರುವ ನರನಿಗೆ ದೇವ ಕಾಣಿಸನು
ಭಾಸವಾಗಿಹ ದರ್ಪಣದಿ ಸೂರ್ಯ ಪ್ರ
ಕಾಶದಂದದಿ ಜ್ಞಾನಿ ಹೃದಯಾ
ಕಾಶದಲಿ ಈಶ್ವರನ ಕಾಣುವ ಸರ್ವಕಾಲದಲಿ || ೯೮ ||

ಸತಿಪತಿಗಳೇಕಾಂತದೊಳಗಿನ
ಅತಿಶಯೋಕ್ತಿಗಳೆಲ್ಲ ಸಖಿಯೊಳು
ಸತಿಯು ಸಂತೋಷದಲಿ ಪೇಳುವವೋಲು ಜಗದೊಳಗೆ
ಸತತ ಭಕ್ತರು ಭಕ್ತರೊಳು ಸ
ಮ್ಮತದಿ ತಮ್ಮಾನಂದ ಸುಖದು
ನ್ನತಿಯ ಪೇಳುತ ಸುಖಿಸುವರು ತಾವಿತರವನು ತೊರೆದು || ೯೯ ||

ನಿನ್ನ ಕರುಣಕಟಾಕ್ಷದಿಂದಲಿ
ಎನ್ನಪಾಪಗಳಳಿದು ಪೋದವು
ಉನ್ನತ ದಾರಿದ್ರ್ಯದುಃಖಗಳೆಲ್ಲ ಹಿಂಗಿದುವು
ನಿನ್ನ ಸಂದರ್ಶನದ ಮಾತ್ರದ
ಲೆನ್ನ ಸುಖಸಂಪತ್ತು ಹೆಚ್ಚಿತು
ಪುಣ್ಯಪುರುಷನೆ ಪೂರ್ಣಕಾಮನೆ ನಿನಗೆ ಮಂಗಳವು ॥ ೧೦೦ ॥

ನಾನು ನಿನ್ನಾಧೀನ ಜನ್ಮನು
ನಾನು ನಿನ್ನಾಜ್ಞಾನುಸಾರಿಯು
ನಾನು ನಿನ್ನ ಪವಿತ್ರನಾಮ ಸ್ಮರಣೆಗೈಯುವನು
ನಾನು ಧನ್ಯನು ನಾನು ಮಾನ್ಯನು
ಹೀನಕರ್ಮಗಳಿಂದ ಮುಕ್ತನು
ನೀನೆನಗೆ ಸರ್ವಸ್ವ **ಕೇಶವ** ನಿನಗೆ ಮಂಗಳವು ॥ ೧೦೧ ॥

ವಿಜ್ಞಾಪನಾ

ಹರಿಮಂದಿರ ಪ್ರಕಟಣಾಲಯವು ಜನ್ಮ ತಾಳಿ ಸುಮಾರು ಮೂರು ವರ್ಷಗಳಾದವು. ಈ ಅವಧಿಯಲ್ಲಿ ಹರಿಮಂದಿರಕ್ಕೆ ಪೋಷಕರಾದವರಿಗೆ, ಆಜೀವ ಸದಸ್ಯರಾದವರಿಗೆ ಮತ್ತು ಪ್ರದಾತೃಗಳಿಗೆ, ಈ ಗ್ರಂಥವೂ ಸೇರಿ ೧೪೫೦ ಪುಟಗಳಷ್ಟು ವಿಸ್ತಾರವಾದ ನಾಲ್ಕು ಗ್ರಂಥಗಳನ್ನು ಉಚಿತವಾಗಿ ಕಳುಹಿಸಲಾಯಿತು. ಹರಿಮಂದಿರ ಕಟ್ಟಡಕ್ಕೆ ಇನ್ನೂ ಆಗಬೇಕಾಗಿರುವ ಕೆಲಸಗಳು ದ್ರವ್ಯಾಭಾವದಿಂದ ತಟಸ್ಥವಾಗಿವೆ. ಶ್ರೀಪುರಂದರದಾಸರವರ ೩೭೮ನೇ ವರ್ಷದ ಆರಾಧನೆಯ ಈ ಪುಷ್ಯ ಬಹುಳ ೩೦ಕ್ಕೆ (೨೨-೧-೪೨) ಹರಿಮಂದಿರಕ್ಕೆ ಆರು ಸಾವಿರ ರೂಪಾಯಿಗಳಷ್ಟು ಋಣಭಾರವಿದೆ. ಪ್ರಕಟಣಾಲಯವು ದೊಡ್ಡ ಸಂಸ್ಥೆಯಾಗಿ ಯಶಸ್ಕರವಾದ ಕೆಲಸಮಾಡಲು ಆಜೀವ ಸದಸ್ಯರ ಸಂಖ್ಯೆ ಬಹಳ ಬೆಳೆಯಬೇಕು. ವಾಗ್ದಾನಮಾಡಿ ಗ್ರಂಥಗಳನ್ನು ಪಡೆದುಕೊಂಡಿರುವ ಮುನ್ನೂರಕ್ಕಿಂತ ಹೆಚ್ಚು ಸಂಖ್ಯೆಯ ದೊಡ್ಡ ಮನುಷ್ಯರು ತಮ್ಮ ವಾಗ್ದಾನವನ್ನು ಪಾಲಿಸಬೇಕು. ಕಂತುವಾರಾಗಿ ಕೊಡಲೊಪ್ಪಿರುವ ಸದಸ್ಯರು ತಮ್ಮ ಬಾಕಿ ಇರುವ ಹಣವನ್ನು ಕೃಪೆಮಾಡಿ ಕಳುಹಿಸಬೇಕು. ಹರಿದಾಸ ಸಾಹಿತ್ಯದ ಸಮಗ್ರ ಗ್ರಂಥಗಳೂ, ತತ್ವಶಾಸ್ತ್ರದ ಮೇಲಣ ವಿಶ್ವಕೋಶವೂ, ತಮ್ಮ ತಮ್ಮ ಗೃಹಗಳನ್ನು ಅಲಂಕರಿಸುವ ಭರವಸೆಯಿರುವಾಗ, ವಿತ್ತಲೋಭವಾಗಲಿ ಸಂಶಯವಾಗಲಿ ಯಾರಿಗೂ ಇರಬಾರದು. ಈ ಕಾಲದಲ್ಲಿ ಹಣಕ್ಕೆ ಕೊಳ್ಳುವ ಶಕ್ತಿಯೇನಿದೆಯೆಂಬುವದೂ ನೆನಪಿನಲ್ಲಿರಬೇಕು.

ಕೀರ್ತನಾಚಾರ್ಯರು ತಮ್ಮ ತನುಮನಧನಗಳಿಂದ ನಿರಂತರ ಹರಿಮಂದಿರಕ್ಕಾಗಿ ಶ್ರಮಿಸುತ್ತಿದ್ದಾರೆ. ಪರಂಪರೆಯಾಗಿ ಬಂದಿರುವ ಭಾಗವತ ಧರ್ಮಪ್ರಚಾರ ಕಾರ್ಯವನ್ನು ತಮ್ಮ ವಂಶೀಕರೂ ಅನುಯಾಯಿಗಳೂ ತಪ್ಪದೆ ಮಾಡಿಕೊಂಡುಬರಲು ಮಾಡಬೇಕಾದ ಪ್ರಯತ್ನಗಳನ್ನೆಲ್ಲ ಮಾಡುತ್ತಿದ್ದಾರೆ. ಕಳೆದ ವರ್ಷ ಪ್ರಕಟವಾಗಿರುವ ಹರಿಮಂದಿರ ವರದಿಯಿಂದ ಸದಸ್ಯರಿಗೆಲ್ಲ ಪ್ರಕೃತ ಪರಿಸ್ಥಿತಿ ತಿಳಿದುಬಂದಿರುವದರಿಂದ ಅದರ ಪುನರುಲ್ಲೇಖನವನ್ನಿಲ್ಲಿ ಮಾಡುವದಿಲ್ಲ.

ಗ್ರಂಥ ಮುದ್ರಣಕ್ಕಾಗಿ ಪರಿತಪಿಸುತ್ತಿದ್ದಾಗ ನಮ್ಮ ಮೊಹಲೆಯಲ್ಲೇ ಇರುವ ಪಂಚಾಂಗಮಂದಿರದವರ ನೆರವು ನಮಗೆ ದೊರೆಯಿತು. ಮುಂದಣ ಹೊಸ ಗ್ರಂಥದ ಜೊತೆಗೆ ಹಿಂದಣ ಗ್ರಂಥಗಳೆಲ್ಲದರ ಮುದ್ರಣವೂ ಒಂದರ ಹಿಂದೆ ಒಂದು ಆಗಲಿದೆಯೆಂದು ಭರವಸೆ ಕೊಡಲು ಅವಕಾಶವಾಯಿತು. ಪಂಚಾಂಗಮಂದಿರ ಮುದ್ರಣಾಲಯದವರು ವಂದನಾರ್ಹರು.

ಗ್ರಂಥಗಳು ಮುದ್ರಣವಾದಂತೆಲ್ಲಾ ಕಾಲಕಾಲದಲ್ಲಿ ಸದಸ್ಯರಿಗೆ ಕಳುಹಿಸಲಾಗುವದು. ಸದಸ್ಯರು ತಮ್ಮ ವಿಳಾಸ ಬದಲಾದಾಗಲೆಲ್ಲ ಹರಿಮಂದಿರಕ್ಕೆ ತಿಳಿಸುತ್ತಿರಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇವೆ.

ಅನ್ವಯ ಸಂ॥ ಪುಷ್ಯ ಬ. ೩೦
೨೨-೧-೪೨

ಬಿ. ಸುಬ್ರಹ್ಮಣ್ಯಶಾಸ್ತ್ರಿ,
ನಿವೃತ್ತ ಅಸಿಸ್ಟೆಂಟ್ ಕಮಿಷನರು,
ಹರಿಮಂದಿರದ ವ್ಯವಸ್ಥಾಪಕರು, ಮೈಸೂರು

ಹರಿಮಂದಿರದಿಂದ ಪ್ರಕಟವಾಗಿರುವ ಗ್ರಂಥಗಳು

---

* ಕರ್ಣಾಟಕ ಭಕ್ತವಿಜಯ ಭಾಗ ೧	ರೂ.	೫ ೦ ೦
* ಡಿಟ್ಟೊ ೨		೫ ೦ ೦
* ಹರಿದಾಸ ಸಾಹಿತ್ಯ (ವಿಮರ್ಶೆ)		೩ ೦ ೦
ಹರಿದಾಸ ಸಾಹಿತ್ಯ (ಪದ್ಯಗ್ರಂಥ ಸಂಗ್ರಹ)		೨ ೦ ೦

* ಈ ಗುರ್ತಿನ ಗ್ರಂಥಗಳು ಪುನರ್ಮುದ್ರಣವಾಗುತ್ತಿವೆ.

ಪಂಚಾಂಗ ಮಂದಿರಂ ಪ್ರೆಸ್, ವಿ. ವಿ. ಮೊಹಲ್ಲ, ಮೈಸೂರು